**ಶಿಕ್ಷಕರಿಗಾಗಿ:** ೮, ೩, ೪ ಈ ಅಂಕಿಗಳಿಂದ, ಅಂಕಿಗಳ ಪುನರಾವರ್ತನೆಯೊಂದಿಗೆ ಮೂರಂಕಿ ಎಲ್ಲಾ ಸಂಖ್ಯೆಗಳನ್ನು ತಯಾರಿಸಿರಿ. ಎಷ್ಟು ಸಂಖ್ಯೆಗಳು ತಯಾರಾಗುವವು ಎಂಬುದನ್ನು ಹೇಳಿರಿ.

# ಸಂಖ್ಯೆಗಳ ಏರಿಕೆ ಮತ್ತು ಇಳಿಕೆ ಕ್ರಮ

## ತಿಳಿದುಕೊಳ್ಳಿರಿ.

◉ ೧೨೨, ೩೬೦, ೩೨೫ ಈ ಸಂಖ್ಯೆಗಳ ಏರಿಕೆ ಮತ್ತು ಇಳಿಕೆ ಕ್ರಮ ಹಚ್ಚಿರಿ.

ಎಲ್ಲಕ್ಕೂ ಚಿಕ್ಕ ಸಂಖ್ಯೆ ೧೨೨




ಏರಿಕೆ ಕ್ರಮ ೧೨೨, ೩೨೫, ೩೬೦

ಎಲ್ಲಕ್ಕೂ ದೊಡ್ಡ ಸಂಖ್ಯೆ ೩೬೦




ಇಳಿಕೆ ಕ್ರಮ ೩೬೦, ೩೨೫, ೧೨೨

೭, ೫, ೮ ಈ ಅಂಕಿಗಳಿಂದ ಪ್ರತಿಯೊಂದು ಅಂಕಿಯನ್ನು ಒಂದೇ ಸಲ ಉಪಯೋಗಿಸಿ ತಯಾರಾದ ಮೂರಂಕಿ ಸಂಖ್ಯೆಗಳು.

| ೫೮೭ | ೫೭೮ | ೭೫೮ | ೭೮೫ | ೮೫೭ | ೮೭೫ |
|---|---|---|---|---|---|

ಈ ಸಂಖ್ಯೆಗಳನ್ನು ಚಿಕ್ಕ ಸಂಖ್ಯೆಯಿಂದ ದೊಡ್ಡ ಸಂಖ್ಯೆಯ ವರೆಗೆ ಕ್ರಮವಾಗಿ ಬರೆಯೋಣ, ಇದು ಏರಿಕೆ ಕ್ರಮವಾಯಿತು.

| ೫೭೮ | ೫೮೭ | ೭೫೮ | ೭೮೫ | ೮೫೭ | ೮೭೫ |
|---|---|---|---|---|---|

ಈ ಸಂಖ್ಯೆಗಳನ್ನು ದೊಡ್ಡ ಸಂಖ್ಯೆಯಿಂದ ಚಿಕ್ಕ ಸಂಖ್ಯೆಯ ವರೆಗೆ ಕ್ರಮವಾಗಿ ಬರೆಯೋಣ, ಇದು ಇಳಿಕೆ ಕ್ರಮವಾಯಿತು.

| ೮೭೫ | ೮೫೭ | ೭೮೫ | ೭೫೮ | ೫೮೭ | ೫೭೮ |
|---|---|---|---|---|---|

## ಸ್ವಾಧ್ಯಾಯ

◉ ಕೊಟ್ಟ ಸಂಖ್ಯೆಗಳನ್ನು ಏರಿಕೆ ಮತ್ತು ಇಳಿಕೆ ಕ್ರಮದಲ್ಲಿ ಬರೆಯಿರಿ.

| ಸಂಖ್ಯೆಗಳು | ಏರಿಕೆ ಕ್ರಮ | ಇಳಿಕೆ ಕ್ರಮ |
|---|---|---|
| ೧೧೭, ೬೯, ೫೦, ೮ | | |
| ೨೮೫, ೪೦೭, ೫೮೯, ೩೬೦ | | |
| ೨೧೭, ೨೭೧, ೨೭೦, ೨೦೭ | | |
| ೯೯,೯೦೯, ೯೯೦, ೯೯೯, ೯೦ | | |

# ನಾಣ್ಯಗಳು ಮತ್ತು ನೋಟುಗಳು

## ತಿಳಿದುಕೊಳ್ಳಿರಿ.

◉ ಈ ನೋಟುಗಳ ಬೆಲೆಯನ್ನು ಬರೆಯಿರಿ.



₹



₹



₹

◉ ನೋಟು ಮತ್ತು ನಾಣ್ಯಗಳನ್ನು ಎಣಿಸಿರಿ. ಒಟ್ಟು ಹಣ ಎಷ್ಟು ರೂಪಾಯಿ ಎಂಬುದನ್ನು ಬರೆಯಿರಿ.

| ನಾಣ್ಯಗಳು ಹಾಗೂ ನೋಟುಗಳ ಚಿತ್ರ | ಹಣ ಅಂಕಿಯಲ್ಲಿ | ಹಣ ಅಕ್ಷರದಲ್ಲಿ |
|---|---|---|
|  | ₹ ೧೦೧ | ಒಂದು ನೂರಾ ಒಂದು ರೂಪಾಯಿಗಳು |
|  | ₹ ೧೦೨ | .................... |
|  | ............... | ಒಂದು ನೂರಾ ಐವತ್ತು ರೂಪಾಯಿಗಳು |
|  | ............... | .................... |
|  | ............... | .................... |

◉ ರವಿರಾಜನು ೪೫೦ ರೂಪಾಯಿಗಳ ಶಾಲೆಯ ಬ್ಯಾಗ್ ತಂದನು. ಈ ಹಣವನ್ನು ಬೇರೆ-ಬೇರೆ ರೀತಿಯಾಗಿ ಹೇಗೆ ಕೊಡಲು ಬರುವುದು?






## ಮೌಲ್ಯವಾಚಕ ಮತ್ತು ಕ್ರಮವಾಚಕ ಸಂಖ್ಯೆಗಳು

### ತಿಳಿದುಕೊಳ್ಳಿರಿ.




| ಮಕ್ಕಳ ಹೆಸರು | ಹಸನ್ | ಸುಮಿತ | ರೋಹನ | ಮೇರಿ | ಗೌರವಿ | ಅರ್ಣವ | ಅದಿತಿ |
|---|---|---|---|---|---|---|---|
| ಕ್ರಮಾಂಕ | ಒಂದನೆಯ | ಎರಡನೆಯ | ಮೂರನೆಯ | ನಾಲ್ಕನೆಯ | ಐದನೆಯ | ಆರನೆಯ | ಏಳನೆಯ |

- ಬಸ್ಸಿನ್ ಸಾಲಿನಲ್ಲಿ ಒಟ್ಟು ೭ ಮಕ್ಕಳಿದ್ದಾರೆ. ಇಲ್ಲಿ '೭' ಇದು ಮೌಲ್ಯವಾಚಕ ಸಂಖ್ಯೆ ಇದೆ.
- ಸಾಲಿನಲ್ಲಿ ಗೌರವಿಯ ಕ್ರಮಾಂಕ ಎಷ್ಟನೇ ಇದೆ? ಐದನೆಯ
- ಮೇರಿ ಎಷ್ಟನೇ ಕ್ರಮಾಂಕದ ಮೇಲಿದ್ದಾಳೆ? ನಾಲ್ಕನೆಯ
- ಅದಿತಿಯು ಸಾಲಿನಲ್ಲಿ ಎಷ್ಟನೆಯವಳು ಇದ್ದಾಳೆ? ಏಳನೆಯ

ಇಲ್ಲಿ ಐದನೆಯ, ನಾಲ್ಕನೆಯ, ಏಳನೆಯ ಇವು '**ಕ್ರಮವಾಚಕ**' ಸಂಖ್ಯೆಗಳಿವೆ.

೧, ೨, ೩, ೪, ೫, ...... ಇವು '**ಮೌಲ್ಯವಾಚಕ**' ಸಂಖ್ಯೆಗಳಿವೆ.

ಒಂದನೆಯ, ಎರಡನೆಯ, ಮೂರನೆಯ, ......, ಐವತ್ತನೆಯ, ........, ಎರಡನೂರನೆಯ ......, ಐದು ನೂರು ಒಂದನೆಯ ಇವು **ಕ್ರಮವಾಚಕ ಸಂಖ್ಯೆ**ಗಳಾಗಿವೆ.

### ಸ್ವಾಧ್ಯಾಯ

**(೧) ಚಿತ್ರ ನೋಡಿರಿ. ಇಂಜಿನ್‌ನನ್ನು ಬಿಟ್ಟು ಡಬ್ಬಿಗಳನ್ನು ಎಣಿಸಿರಿ. ಚೌಕಟ್ಟಿನಲ್ಲಿ ಯೋಗ್ಯ ಉತ್ತರ ಬರೆಯಿರಿ.**



- ಉಗಿಬಂಡಿಗೆ ಒಟ್ಟು ಎಷ್ಟು ಡಬ್ಬಿಗಳಿವೆ? [ ]
  ಇಲ್ಲಿ ..... ಇದು ಮೌಲ್ಯವಾಚಕ ಸಂಖ್ಯೆ ಆಗಿದೆ.
- ಕುದುರೆ ಎಷ್ಟನೇ ಕ್ರಮಾಂಕದ ಡಬ್ಬಿಯಲ್ಲಿದೆ? ...........................
- ಮೊಲ ಎಷ್ಟನೇ ಕ್ರಮಾಂಕದ ಡಬ್ಬಿಯಲ್ಲಿದೆ? ...........................
- ಮೂರನೆಯ ಡಬ್ಬಿಯಲ್ಲಿ ಯಾವ ಪ್ರಾಣಿ ಇದೆ? ...........................
- ಸಿಂಹವಿರುವ ಡಬ್ಬಿಯ ಕ್ರಮಾಂಕವೇಷ್ಟ? ...........................

## (೨) ಸ್ಥಾನ ನೋಡಿ ಉತ್ತರವನ್ನು ಕಂಡು ಹಿಡಿಯಿರಿ.




- ಒಂದು ಸಾಲಿನಲ್ಲಿ ಎಡಗಡೆಯಿಂದ ಬಲಗಡೆ ನೋಡಿದರೆ ರಾಧಾಳ ಸ್ಥಾನ ೧೫ನೆಯವಿದೆ. ಸುಧಾಳದು ೧೯ನೆಯ ಸ್ಥಾನವಿದೆ.
- ರಾಧಾಳಿಂದ ಸುಧಾಳ ಸ್ಥಾನ ಎಷ್ಟನೇಯದಿದೆ? ☐

## ಗಣಿತದ ಒಗಟು

- ಒಬ್ಬ ರಾಜನಿದ್ದನು, ಅವನಿಗೆ ಕೇವಲ ೯ರ ವರೆಗಿನ ಸಂಖ್ಯೆಗಳನ್ನು ಮಾತ್ರ ಎಣಿಸಲು ಬರುತ್ತಿತ್ತು. ರಾಜನ ಹತ್ತಿರ ಬಹಳಷ್ಟು ಕುದುರೆಗಳಿದ್ದವು. ಆದರೆ ಅವನಿಗೆ ಎಣಿಸಲು ಸಾಧ್ಯವಿರಲಿಲ್ಲ. ಕುದುರೆಗಳ ಸಲುವಾಗಿ ಲಾಯ (ಕೊಟ್ಟಿಗೆ) ಕಟ್ಟಿಸಿದ್ದನು. ಆ ಕುದುರೆಗಳಿಗೆ ಲಾಯದಲ್ಲಿಡಲು ರಾಜನ ನೌಕರ ರಾಮು ಇದ್ದನು. ರಾಮು ಆ ಕುದುರೆಗಳನ್ನು ಲಾಯದಲ್ಲಿ ಹೇಗೆ ಕಟ್ಟುತ್ತಿದ್ದನೆಂದರೆ ರಾಜನು ಪ್ರತಿಯೊಂದು ಬದಿಯಿಂದ ನೋಡಿವಾಗ ಒಟ್ಟು ೯ ಕುದುರೆಗಳು ಕಾಣಿಸುತ್ತಿದ್ದವು. ರಾಜನ ಹತ್ತಿರ ಒಟ್ಟು ಎಷ್ಟು ಕುದುರುಗಳಿದ್ದವು?

| | | |
|---|---|---|
| ೩ | ೩ | ೩ |
| ೩ | | ೩ |
| ೩ | ೩ | ೩ |

- ಒಂದು ದಿನ ಒಬ್ಬ ಪ್ರಯಾಣಿಕನು ಆ ಊರಲ್ಲಿ ಬಂದನು. ಅವನ ಹತ್ತಿರ ೪ ಕುದುರೆಗಳಿದ್ದವು. ಕತ್ತಲೆಯಾಗಿತ್ತು. ಆ ಪ್ರಯಾಣಿಕನು ರಾಮುಗೆ ಭೇಟ್ಟಿಯಾಗಲು ಹೋದನು. ಅವನು ಕೇಳಿದ "ನನ್ನ ೪ ಕುದುರೆಗಳನ್ನು ಈ ದಿನ ನಿಮ್ಮ ಲಾಯದಲ್ಲಿ ಇಟ್ಟುಕೊಳ್ಳುತ್ತೀರಾ?" ಎಂದನು. ರಾಮು ಅಂದನು, "ಇಲ್ಲ, ಕಾರಣ ನಮ್ಮ ರಾಜನು ಪ್ರತಿ ದಿನ ರಾತ್ರಿ ಕುದುರೆಗಳ ಎಣಿಕೆ ಮಾಡುತ್ತಾನೆ. ನಿಮ್ಮ ಕುದುರೆ ಕಟ್ಟಲು ನನ್ನ ಹತ್ತಿರ ಸ್ಥಳವಿಲ್ಲ." ರಾಜನು ನಿಮಗೆ ಅನುಮತಿ ಕೊಡುವುದಿಲ್ಲ. ಎಂದು ಹೇಳಿದನು. ಆಗ ಪ್ರಯಾಣಿಕನು ಹೇಳಿದ, "ನಾನು ನನ್ನ ಕುದುರೆಗಳನ್ನು ನಿಮ್ಮ ಲಾಯದಲ್ಲಿ ಹೀಗೆ ಕಟ್ಟುವೇನೆಂದರೆ ರಾಜನಿಗೆ ಇಲ್ಲಿ ಹೊಸ ಕುದುರೆಗಳು ಬಂದಿವೆ, ಎಂಬುದು ತಿಳಿಯುವುದಿಲ್ಲ." ಪ್ರಯಾಣಿಕನು ಕುದುರೆಗಳ ರಚನೆ ಹೇಗೆ ಮಾಡಿದನೆಂದರೆ, ರಾಜನಿಗೆ ಪ್ರತಿಯೊಂದು ಬದಿಯಿಂದ ಎಣಿಕೆ ಮಾಡಿದರೂ ಒಟ್ಟು ಒಂಬತ್ತು ಕುದುರೆಗಳು ಕಾಣಿಸುತ್ತಿದ್ದವು. ಈಗ ಒಟ್ಟು ಕುದುರೆಗಳು ಎಷ್ಟು?

| | | |
|---|---|---|
| ೨ | ೫ | ೨ |
| ೫ | | ೫ |
| ೨ | ೫ | ೨ |

- ಮರುದಿನ ಜಾಣ ಪ್ರಯಾಣಿಕ ಒಂದು ಉಪಾಯ ಮಾಡಿದನು. ಅವನು ತನ್ನ ೪ ಕುದುರೆಗಳು ಮತ್ತು ರಾಜನ ೪ ಕುದುರೆಗಳನ್ನು ಜೊತೆಗೆ ತೆಗೆದುಕೊಂಡನು ಮತ್ತು ಉಳಿದ ಕುದುರೆಗಳ ರಚನೆ ಹೇಗೆ ಮಾಡಿದನೆಂದರೆ, ಪ್ರತಿಯೊಂದು ಬದಿಯಿಂದ ಎಣಿಸಿದರೂ ೯ರ ವರೆಗೇನೆ ಎಣಿಸಬೇಕಾಗುತ್ತಿತ್ತು. ಈ ರೀತಿ ರಚನೆಯಿಂದಾಗಿ ಪ್ರಯಾಣಿಕನು ರಾಜನ ೪ ಕುದುರೆಗಳನ್ನು ತೆಗೆದುಕೊಂಡಿದ್ದಾನೆಂಬುದನ್ನು ರಾಜನ ಗಮನಕ್ಕೆ ಬರಲಿಲ್ಲ. ಈಗ ಒಟ್ಟು ಎಷ್ಟು ಕುದುರೆಗಳಿವೆ? ನಿಮಗೆ ಹೀಗೆ ಯಾವುದಾದರೂ ರಚನೆ ಮಾಡಲು ಬರುತ್ತದೆಯೇ ಎಂಬುದನ್ನು ನೋಡಿರಿ.

| | | |
|---|---|---|
| ೪ | ೧ | ೪ |
| ೧ | | ೧ |
| ೪ | ೧ | ೪ |

**ಶಿಕ್ಷಕರಿಗಾಗಿ:** ವಿದ್ಯಾರ್ಥಿಗಳಿಗೆ ಸಂಖ್ಯೆಗಳ ಮೇಲೆ ಆಧರಿಸಿದ ವಿವಿಧ ಪ್ರಕಾರದ ಒಗಟುಗಳನ್ನು ಬಿಡಿಸಲು ಪ್ರೇರಣೆ ಕೊಡಿರಿ.

# ೩. ಬೇರೀಜು ಮತ್ತು ವಜಾಬಾಕಿ (ಸಂಕಲನ/ವ್ಯವಕಲನ)

## ನೆನಪಿಸಿಕೊಳ್ಳಿರಿ.

◉ ಬಿಟ್ಟ ಸ್ಥಳಗಳಲ್ಲಿ ಯೋಗ್ಯ ಸಂಖ್ಯೆಯನ್ನು ಬರೆಯಿರಿ.




## ತಿಳಿದುಕೊಳ್ಳಿರಿ.

## ಬೇರೀಜು (ಸಂಕಲನ/ಕೂಡಿಸುವುದು



◉ ಗೌರಿಯು ೧ ಕಿಲೋ ಸೇಬು ಹಣ್ಣು ಮತ್ತು ೧ ಕಿಲೋ ಚಿಕ್ಕು ಕೊಂಡುಕೊಂಡರೆ ಅವಳು ಒಟ್ಟು ಎಷ್ಟು ರೂಪಾಯಿಗಳ ಖರೀದಿ ಮಾಡಿದಳು? ೨೩೫ + ೬೦ = ?

ಈ ಬೇರೀಜು ಮಾಡುವ ಸಲುವಾಗಿ ಶತಕದ ಪಲಕ, ದಶಕದ ಕಡ್ಡಿಗಳು ಮತ್ತು ಬಿಡಿಯಾದ ತುಂಡುಗಳನ್ನು ಉಪಯೋಗಿಸೋಣ.




◉ ಅಡ್ಡ ಮಂಡನೆ ಮಾಡಿ ಬೇರೀಜು

೨ ೩ ೫ + ೦ ೬ ೦ = ೨ ೯ ೫

◉ ಲಂಬ (ಸ್ತಂಭ) ಮಂಡನೆ ಮಾಡಿ ಬೇರೀಜು

| | ಶ | ದ | ಏ |
|---|---|---|---|
| | ೨ | ೩ | ೫ |
| + | | ೬ | ೦ |
| | ೨ | ೯ | ೫ |

◉ ಸಂಖ್ಯಾ ರೇಷೆಯ ಸಹಾಯದಿಂದ ಬೇರೀಜು




ಗೌರಿಯು ಅಂಗಡಿಕಾರನಿಂದ ಒಟ್ಟು ೧೯೫ ರೂಪಾಯಿಗಳ ಹಣ್ಣುಗಳನ್ನು ಖರೀದಿಸಿದಳು.



**ಯೋಚನೆ ಮಾಡಿರಿ.** ಮೇಲಿನ ಹಣ್ಣುಗಳನ್ನು ಖರೀದಿಸಲು ಗೌರಿಯು ೧೦೦ ರೂಪಾಯಿಗಳ ೩ ನೋಟುಗಳನ್ನು ಅಂಗಡಿಕಾನಿಗೆ ಕೊಟ್ಟರೆ, ಅಂಗಡಿಕಾರನು ಅವಳಿಗೆ ಎಷ್ಟು ರೂಪಾಯಿಗಳನ್ನು ಮರಳಿ ಕೊಡುವನು?

## ತಿಳಿದುಕೊಳ್ಳಿರಿ.

ಮೀನಾಳು ಒಂದು ಅಂಗಡಿಯಿಂದ ಒಂದು ಕಂಪಾಸ ಪೆಟ್ಟಿಗೆ ಮತ್ತು ಒಂದು ಕೊಡೆ ಕೊಂಡುಕೊಂಡಳು, ಹಾಗಾದರೆ ಅವಳು ಅಂಗಡಿಕಾರನಿಗೆ ಎಷ್ಟು ರೂಪಾಯಿಗಳನ್ನು ಕೊಟ್ಟಳು?

**ಕೊಟ್ಟ ಮಾಹಿತಿ:**







**ಕೇಳಲಾದ ಮಾಹಿತಿ:** ಒಟ್ಟು ಬೆಲೆ = ?

| | ಶ | ದ | ಏ | |
|---|---|---|---|---|
| | ೧ | ೪ | ೫ | ಕಂಪಾಸ ಪೆಟ್ಟಿಗೆಯ ಬೆಲೆ |
| + | ೩ | ೨ | ೦ | ಕೊಡೆಯ ಬೆಲೆ |
| | ೪ | ೬ | ೫ | ಅಂಗಡಿಕಾರನಿಗೆ ಕೊಟ್ಟ ಒಟ್ಟು ಹಣ |

| ಕಂಪಾಸ ಪೆಟ್ಟಿಗೆಯ ಬೆಲೆ | | ಕೊಡೆ ಬೆಲೆ | | ಒಟ್ಟು ಹಣ |
|---|---|---|---|---|
| ೧೪೫ | + | ೩೨೦ | = | ೪೬೫ |

ಮೀನಾಳು ಅಂಗಡಿಕಾರನಿಗೆ ಕೊಟ್ಟ ಒಟ್ಟು ಹಣ ೪೬೫ ರೂಪಾಯಿಗಳು.

## ಕೃತಿ ಮಾಡಿರಿ

| ೧ ಕೂಡಿಸಿ | ೨ ಕೂಡಿಸಿ | ೫ ಕೂಡಿಸಿ | ೧೦ ಕೂಡಿಸಿ | ೧೦೦ ಕೂಡಿಸಿ |
|---|---|---|---|---|
| ೪೭೬ | ೪೭೬ | ೪೭೬ | ೪೭೬ | ೪೭೬ |
| ೪೭೭ | | | | |
| | | | | |
| | | ೪೯೧ | | |

## ಸ್ವಾಧ್ಯಾಯ

**(೧) ಲಂಬ (ಸ್ತಂಭ) ಮಂಡನೆ ಮಾಡಿ ಬೇರೀಜು ಮಾಡಿರಿ.**

- ೩೨೧ + ೪

| ಶ | ದ | ಏ |
|---|---|---|
| | | |
| | | |

- ೨೬೭ + ೨೧

| ಶ | ದ | ಏ |
|---|---|---|
| | | |
| | | |

- ೪೦೭ + ೩೧೨

| ಶ | ದ | ಏ |
|---|---|---|
| | | |
| | | |

◉ ೪೫೭ + ೨೧೦

| ಶ | ದ | ಏ |
|---|---|---|
| | | |
| | | |

◉ ೩೫೪ + ೫೧೩

| ಶ | ದ | ಏ |
|---|---|---|
| | | |
| | | |

◉ ೬೭೫ + ೩೨೪

| ಶ | ದ | ಏ |
|---|---|---|
| | | |
| | | |

**(೨) ಅಡ್ಡ ಮಂಡನೆ ಮಾಡಿ ಬೇರೀಜು ಮಾಡಿರಿ.**

◉ ೧೪೭ + ೫೨೧ ◉ ೨೦೯ + ೫೮೦ ◉ ೨೧೦ + ೭೯

**(೩) ಕೊಟ್ಟ ಅಂಕಿಗಳನ್ನು ಒಂದೇ ಸಲ ಬಳಸಿ ಎಲ್ಲಕ್ಕೂ ದೊಡ್ಡ ಮೂರಂಕಿ ಸಂಖ್ಯೆ ಮತ್ತು ಎಲ್ಲಕ್ಕೂ ಚಿಕ್ಕ ಮೂರಂಕಿ ಸಂಖ್ಯೆಯನ್ನು ತಯಾರಿಸಿರಿ ಮತ್ತು ಆ ಸಂಖ್ಯೆಗಳ ಬೇರೀಜು ಮಾಡಿರಿ.**

◉ ೨, ೪, ೩ ◉ ೪, ೫, ೧ ◉ ೭, ೨, ೦ ◉ ೬, ೪, ೩

## ಬೇರೀಜು (ಕೈಯಲೆ ಇರುವ)



### ತಿಳಿದುಕೊಳ್ಳಿರಿ.

- ಬೇರೀಜು ಮಾಡಿರಿ. ೪೨೮ + ೩೫೭
- ಮೊದಲು ೮ ಹಾಗೂ ೭ ಈ ಏಕಕಗಳ ಬೇರೀಜು ಮಾಡುವಾ.
  ಏಕಕಗಳ ಬೇರೀಜು ೧೫ ಬಂದಿತು. ೧೫ ಏಕಕ ಅಂದರೆ ೧ ದಶಕ ೫ ಏಕಕ.
  ದಶಕದ ಮನೆಯಲ್ಲಿ ಮೇಲೆ ೧ ಕೈಯಲೆ ಬರೆಯೋಣ.
  ಏಕಕದ ಮನೆಯಲ್ಲಿ ರೇಷೆಯ ಕೆಳಗೆ ೫ ಬರೆಯುವಾ.
  ದಶಕದಲ್ಲಿಯ ಅಂಕಿಗಳ ಬೇರೀಜು ೮ ಆಯಿತು. ಹೀಗಾಗಿ ದಶಕದ ಮನೆಯಲ್ಲಿ ರೇಷೆಯ ಕೆಳಗೆ ೮ ಬರೆಯುವಾ.ಶತಕದ ಮನೆಯಲ್ಲಿಯ ಅಂಕಿಗಳ ಬೇರೀಜು ೯ ಆಯಿತು.

| ಶ | ದ | ಏ |
|---|---|---|
| | ೧ | |
| ೬ | ೨ | ೮ |
| + ೩ | ೫ | ೭ |
| ೯ | ೮ | ೧೫ |

೬೨೮ + ೩೫೭ = ೯೮೫

- ಒಬ್ಬ ವ್ಯಾಪಾರಿಯು ಮೂರು ದಿನಗಳಲ್ಲಿ ಕ್ರಮವಾಗಿ ೨೧೨, ೩೮೬ ಮತ್ತು ೨೫೯ ಕಿಲೋ ಅಕ್ಕಿಯನ್ನು ಮಾರಿದರೆ, ಅವನು ಒಟ್ಟು ಎಷ್ಟು ಕಿಲೋಗ್ರಾಮ್ ಅಕ್ಕಿಯನ್ನು ಮಾರಿದನು?

  ವ್ಯಾಪಾರಿಯು ಮೂರು ದಿನಗಳಲ್ಲಿ ಒಟ್ಟು ...... ಕಿಲೋಗ್ರಾಮ್ ಅಕ್ಕಿಯನ್ನು ಮಾರಿದನು.

| ಶ | ದ | ಏ |
|---|---|---|
| | | |
| ೨ | ೧ | ೨ |
| + ೩ | ೮ | ೬ |
| + ೨ | ೫ | ೯ |
| | | |

## ಸ್ವಾಧ್ಯಾಯ

### (೧) ಬೇರೀಜು ಮಾಡಿರಿ.

| ಶ | ದ | ಏ |
|---|---|---|
| | | |
| ೪ | ೭ | ೮ |
| + ೩ | ೪ | ೫ |
| | | |

| ಶ | ದ | ಏ |
|---|---|---|
| | | |
| ೨ | ೭ | ೬ |
| + ೫ | ೦ | ೮ |
| | | |

| ಶ | ದ | ಏ |
|---|---|---|
| | | |
| ೪ | ೫ | ೫ |
| + ೨ | ೬ | ೭ |
| | | |

| ಶ | ದ | ಏ |
|---|---|---|
| | | |
| ೬ | ೩ | ೨ |
| + | ೫ | ೭ |
| + | | ೬ |
| | | |

| ಶ | ದ | ಏ |
|---|---|---|
| | | |
| ೩ | ೨ | ೭ |
| + ೨ | ೬ | ೪ |
| + | ೯ | ೫ |
| | | |

| ಶ | ದ | ಏ |
|---|---|---|
| | | |
| ೪ | ೭ | ೮ |
| + ೨ | ೦ | ೯ |
| + ೧ | ೬ | ೫ |
| | | |

### (೨) ಕೆಳಗಿನ ಉದಾಹರಣೆಗಳನ್ನು ಬಿಡಿಸಿರಿ.

- ಒಂದು ಗ್ರಂಥಾಲಯದಲ್ಲಿ ೩೮೧ ಪುಸ್ತಕಗಳಿದ್ದವು. ಸುಭಾಷನು ೫೧ ಪುಸ್ತಕಗಳನ್ನು ಗ್ರಂಥಾಲಯಕ್ಕೆ ಕಾಣಿಕೆಯಾಗಿ ಕೊಟ್ಟರೆ ವಾಚನಾಲಯದಲ್ಲಿ ಈಗ ಒಟ್ಟು ಎಷ್ಟು ಪುಸ್ತಕಗಳಾದವು?
- ಒಂದು ತೋಟದಲ್ಲಿ ೪೭೮ ಮಾವಿನ ಮತ್ತು ೨೫೬ ಚಿಕ್ಕುಗಳ ಗಿಡಗಳಿವೆ. ಹಾಗಾದರೆ ತೋಟದಲ್ಲಿ ಒಟ್ಟು ಎಷ್ಟು ಗಿಡಗಳಿವೆ?

**ಮಾಹಿತಿ:** ಕೂಲಿಕಾರರು ೩೫೨, ಹೊಸ ಕೂಲಿಕಾರರು ೧೮೭.

**ತಯಾರಿಸಿದ ಉದಾಹರಣೆ:** ಒಂದು ಕಾರಖಾನೆಯಲ್ಲಿ ೩೫೨ ಕೂಲಿಕಾರರು ಇದ್ದರು, ಅದರಲ್ಲಿ ೧೮೭ ಹೊಸ ಕೂಲಿಕಾರರು ಬಂದು ಸೇರಿದರೆ, ಕಾರಖಾನೆಯಲ್ಲಿ ಒಟ್ಟು ಕೂಲಿಕಾರರ ಸಂಖ್ಯೆ ಎಷ್ಟಾಗುವುದು?

ಕಾರಖಾನೆಯಲ್ಲಿ ಒಟ್ಟು ☐ ಕೂಲಿಕಾರರು ಆಗುವರು.

| ಶ | ದ | ಏ | |
|---|---|---|---|
| | | | |
| ೩ | ೫ | ೨ | ಕೂಲಿಕಾರರು |
| + ೧ | ೮ | ೭ | ಹೊಸ ಕೂಲಿಕಾರರು |
| | | | ಒಟ್ಟು ಕೂಲಿಕಾರರು |

## ಸ್ವಾಧ್ಯಾಯ

### (೧) ಕೊಟ್ಟ ಮಾಹಿತಿಯಿಂದ ಉದಾಹರಣೆಗಳನ್ನು ತಯಾರಿಸಿ ಮತ್ತು ಬಿಡಿಸಿರಿ.

- ಬುಟ್ಟಿಯಲ್ಲಿ – ಮಾವಿನ ಹಣ್ಣು ೩೫, ಪೇರಲ ೪೮ ಮತ್ತು ಚಿಕ್ಕೂ ೨೪.
- ಬಟ್ಟೆಗಳು – ಅಂಗಿಯ ಬೆಲೆ ೩೯೯, ಪ್ಯಾಂಟಿನ ಬೆಲೆ ೪೯೯.
- ಶಾಲೆಯಲ್ಲಿ – ಮೂರನೆಯ ಇಯತ್ತೆಯ ೧೩೪ ವಿದ್ಯಾರ್ಥಿಗಳು, ನಾಲ್ಕನೆಯ ಇಯತ್ತೆಯ ೧೪೩ ವಿದ್ಯಾರ್ಥಿಗಳು, ಐದನೆಯ ಇಯತ್ತೆಯ ೧೩೯ ವಿದ್ಯಾರ್ಥಿಗಳು.

## ತಿಳಿದುಕೊಳ್ಳಿರಿ.

| ವಸ್ತು | ಬೆಲೆ |
|---|---|
| ಡ್ರಮ್ | ₹೩೪೦ |
| ಫುಟಬಾಲ್ | ₹೩೩೦ |
| ಪ್ಯಾಂಟ್ | ₹೪೯೯ |
| ಕ್ಯಾರಮ್ ಬೋರ್ಡ್ | ₹೨೪೦ |
| ಟೀ-ಶರ್ಟ್ | ₹೪೭೦ |
| ಚದುರಂಗ ಸಂಚು | ₹೩೫೦ |
| ಬೂಟ್ | ₹೫೮೮ |




### ◉ ಟೀ-ಶರ್ಟಿನ ಬೆಲೆಯು ಫುಟಬಾಲ ಬೆಲೆಕ್ಕಿಂತ ಎಷ್ಟರಿಂದ ಹೆಚ್ಚಿಗೆ ಇದೆ?

ಟೀ-ಶರ್ಟಿನ ಬೆಲೆ = ೪೭೦ ರೂಪಾಯಿಗಳು
ಫುಟಬಾಲಿನ ಬೆಲೆ = ೩೩೦ ರೂಪಾಯಿಗಳು
ಟೀ-ಶರ್ಟ್ ಹಾಗೂ ಫುಟಬಾಲ ಇವುಗಳ ಬೆಲೆಯಲ್ಲಿಯ ವ್ಯತ್ಯಾಸ ತೆಗೆಯಲು ವಜಾಬಾಕಿ ಮಾಡುವಾ.

ಟೀ-ಶರ್ಟ್ ಬೆಲೆ




| ಶ | ದ | ಏ | |
|---|---|---|---|
| ೪ | ೭ | ೦ | ಟೀ-ಶರ್ಟ್ ಬೆಲೆ |
| − ೩ | ೩ | ೦ | ಫುಟಬಾಲ್ ಬೆಲೆ |
| ೧ | ೪ | ೦ | ಬೆಲೆಯಲ್ಲಿಯ ವ್ಯತ್ಯಾಸ |

ಟೀ-ಶರ್ಟಿನ ಬೆಲೆಯು ಫುಟಬಾಲಿನ ಬೆಲೆಗಿಂತಲೂ ೧೪೦ ರೂಪಾಯಿಗಳಿಂದ ಹೆಚ್ಚಿಗೆ ಇದೆ.

## ಸ್ವಾಧ್ಯಾಯ

### ◉ ಬಿಡಿಸಿರಿ.

(೧) ೨೮೭ − ೫

| ಶ | ದ | ಏ |
|---|---|---|
| − | | |
| | | |

(೨) ೫೯೨ − ೭೧

| ಶ | ದ | ಏ |
|---|---|---|
| − | | |
| | | |

(೩) ೩೮೫ − ೨೬೩

| ಶ | ದ | ಏ |
|---|---|---|
| − | | |
| | | |

(೪) ೬೭೬ – ೩೦೦

| ಶ | ದ | ಏ |
|---|---|---|
| | | |
| – | | |
| | | |

(೫) ೭೬೪ – ೩೪೧

| ಶ | ದ | ಏ |
|---|---|---|
| | | |
| – | | |
| | | |

(೬) ೯೭೨ – ೪೩೨

| ಶ | ದ | ಏ |
|---|---|---|
| | | |
| – | | |
| | | |

## ವಜಾಬಾಕಿ (ಕೈಯಲೆ ಇರುವ)

### ತಿಳಿದುಕೊಳ್ಳಿರಿ.

- **ಯಶ್‌ನು ಒಂದು ಕ್ಯಾರಮ್ ಬೋರ್ಡ್ ಮತ್ತು ಒಂದು ಚದುರಂಗದ ಸಂಚನ್ನು ಖರೀದಿಸಿದನು. ಹಾಗಾದರೆ ಯಶ್‌ನು ಒಟ್ಟು ಎಷ್ಟು ರೂಪಾಯಿಗಳ ಖರೀದಿಯನ್ನು ಮಾಡಿದನು?**

೨೪೦ ರೂ. + ೩೫೦ ರೂ. = ...... ರೂ.

ಯಶ್‌ನು ................. ರೂಪಾಯಿಗಳ ಖರೀದಿಯನ್ನು ಮಾಡಿದನು.

ಖರೀದಿಯ ಮೊತ್ತವು ೫೦೦ ರೂಪಾಯಿಗಳಿಗಿಂತ ಹೆಚ್ಚಾಗಿದೆ ಎಂಬುದು ಯಶ್‌ನ ಗಮನಕ್ಕೆ ಬಂದಿತು. ಹಾಗಾಗಿ ಯಶ್‌ನು ಅಂಗಡಿಕಾರನಿಗೆ ತನ್ನ ಹತ್ತಿರದ ಒಂದು ೫೦೦ ರೂಪಾಯಿಯ ನೋಟು ಹಾಗೂ ಒಂದು ೨೦೦ ರೂಪಾಯಿಯ ನೋಟು ಸೇರಿ ೭೦೦ ರೂಪಾಯಿಗಳನ್ನು ಕೊಟ್ಟರೆ, ಅಂಗಡಿಕಾರನು ಅವನಿಗೆ ಎಷ್ಟು ಹಣವನ್ನು ಮರಳಿ ಕೋಡುತ್ತಾನೆ?

೭೦೦ – ೫೯೦ = ಎಷ್ಟು ?

| ಶ | ದ | ಏ |
|---|---|---|
| ೬ | ೧೦ | |
| ~~೭~~ | ~~೦~~ | ೦ |
| – ೫ | ೯ | ೦ |
| ೧ | ೧ | ೦ |

ಮೊದಲು ಏಕಕದಿಂದ ಏಕಕವನ್ನು ಕಳೆಯೋಣ.

೦–೦=೦

ಈಗ ೦ ದಶಕದಿಂದ ೯ ದಶಕಗಳನ್ನು ಕಳೆಯಲು ಬರುವುದಿಲ್ಲ ಆದ್ದರಿಂದ ೭ ಶತಕಗಳಿಂದ ಒಂದು ಶತಕವನ್ನು ಬಿಡಿ ಮಾಡಲಾಯಿತು, ಅದರ ೧೦ ದಶಕಗಳಾದವು. ಈ ೧೦ ದಶಕದಿಂದ ೯ ದಶಕಗಳನ್ನು ಕಳೆದರೆ ೧ ದಶಕ ಉಳಿಯಿತು. ಉಳಿದ ೬ ಶತಕಗಳಿಂದ ೫ ಶತಕ ಕಳೆಯಲಾಯಿತು.

ಅಂಗಡಿಕಾರನು ಯಶ್‌ಗೆ ೧೧೦ ರೂಪಾಯಿಗಳನ್ನು ಮರಳಿ ಕೊಡುತ್ತಾನೆ.

- **ಸಂಖ್ಯಾರೇಷೆಯ ಸಹಾಯದಿಂದ ವಜಾಬಾಕಿ ತೋರಿಸುವುದು.**

ಅಂಗಡಿಕಾರನು ಯಶ್‌ಗೆ ಎಷ್ಟು ರೂಪಾಯಿಗಳನ್ನು ಮರಳಿ ಕೊಡಬೇಕು, ಇದನ್ನು ಹೀಗೆ ಸಹ ಮಾಡಬಹುದು.




ಯಶ್‌ನ ಬಿಲ್ ೫೯೦ ರೂ.ಗಳು.

೧೦ + ೧೦೦ = ೧೧೦ ರೂ.ಗಳು. ಅಂಗಡಿಕಾರನು ಯಶ್‌ಗೆ ೧೧೦ ರೂ.ಗಳನ್ನು ಮರಳಿ ಕೊಟ್ಟನು.

**ಶಿಕ್ಷಕರಿಗಾಗಿ:** ಬೇರೀಜು ಮತ್ತು ವಜಾಬಾಕಿಗಳ ಉದಾಹರಣೆಗಳ ರೂಢಿ ತೆಗೆದುಕೊಳ್ಳಿರಿ. ಗಣಿತ ಪೆಟ್ಟಿಗೆಯಲ್ಲಿಯ ನೋಟುಗಳ ಉಪಯೋಗ ಮಾಡಿ ವ್ಯವಹಾರ ಮಾಡಿರಿ.

◉ ೫೦೭ - ೨೬೮ =

| ಶ | ದ | ಏ |
|---|---|---|
| ೪ | ೯ ~~೧೦~~ | ೧೭ |
| ~~೫~~ | ~~೦~~ | ~~೭~~ |
| -೨ | ೬ | ೮ |
| ೨ | ೩ | ೯ |

- ೭ ಏಕಕಗಳಿಂದ ೮ ಏಕಕಗಳನ್ನು ಕಳೆಯಲು ಬರುವುದಿಲ್ಲ. ಆದ್ದರಿಂದ ೧ ದಶಕ ಬಿಡಿಸುವಾ (ಮುಕ್ತ ಮಾಡುವಾ).
- ಆದರೆ ದಶಕ ಸ್ಥಾನದಲ್ಲಿ ಏನೂ ಇಲ್ಲ, ಆದ್ದರಿಂದ ೧ ಶತಕ ಬಿಡಿಸಿ ೧೦ ದಶಕ ಮಾಡುವಾ, ಅದರಲ್ಲಿಯ ೧ ದಶಕ ಬಿಡಿಸುವಾ.
- ಈಗ ಬಿಡಿಯಾದ ೧೦ ಏಕಕ ಮತ್ತು ಮೊದಲಿನ ೭ ಏಕಕ ಕೂಡಿ ೧೭ ಏಕಕಗಳಾದವು. ಅವುಗಳಲ್ಲಿಂದ ೮ ಏಕಕಗಳನ್ನು ೯ ಏಕಕ ಉಳಿದವು.
- ದಶಕ ಮನೆಯಲ್ಲಿಯ ೯ ದಶಕಗಳಿಂದ ೬ ದಶಕಗಳನ್ನು ಕಳೆದರೆ ೩ ದಶಕ ಉಳಿದವು.
- ೪ ಶತಕಗಳಿಂದ ೨ ಶತಕ ಕಳೆದರೆ ೨ ಶತಕ ಉಳಿದವು.

೫೦೭ - ೨೬೮ = ೨೩೯

## ಸ್ವಾಧ್ಯಾಯ

(೧) ಬಿಡಿಸಿರಿ.

◉

| ಶ | ದ | ಏ |
|---|---|---|
| | | |
| ೩ | ೫ | ೪ |
| - | ೫ | ೮ |
| | | |

◉

| ಶ | ದ | ಏ |
|---|---|---|
| | | |
| ೭ | ೮ | ೫ |
| - ೩ | ೫ | ೮ |
| | | |

◉

| ಶ | ದ | ಏ |
|---|---|---|
| | | |
| ೮ | ೬ | ೪ |
| - ೧ | ೯ | ೬ |
| | | |

| ಶ | ದ | ಏ |
|---|---|---|
| | | |
| ೫ | ೦ | ೦ |
| - ೩ | ೭ | ೫ |
| | | |

(೨) ಸಾಯಲಿಯ ಹತ್ತಿರ ೫೦೦ ರೂ.ಗಳಿವೆ. ಅದರಿಂದ ಅವಳು ೩೭೫ ರೂಪಾಯಿಗಳ ಪುಸ್ತಕ ಕೊಂಡು ಕೊಂಡರೆ ಅವಳ ಹತ್ತಿರ ಎಷ್ಟು ರೂಪಾಯಿಗಳು ಉಳಿದವು?

(೩) ಒಂದು ಶಾಲೆಯಲ್ಲಿ ೮೩೨ ವಿದ್ಯಾರ್ಥಿಗಳಿದ್ದಾರೆ. ಅವರಲ್ಲಿ ೭೪೯ ವಿದ್ಯಾರ್ಥಿಗಳು ಶೈಕ್ಷಣಿಕ ಪ್ರವಾಸಕ್ಕೆ ಹೋದರೆ, ಪ್ರವಾಸಕ್ಕೆ ಹೋಗದ ವಿದ್ಯಾರ್ಥಿಗಳೆಷ್ಟು?

(೪) ಜಾನನ ಮನೆಯ ವಿದ್ಯುತ್ ಬಿಲ್ ೪೮೯ ರೂಪಾಯಿ ಬಂದಿದೆ. ಅದನ್ನು ತುಂಬುವ ಸಲುವಾಗಿ ಅವನು ವಿದ್ಯುತ್ ಬಿಲ್ ತುಂಬುವ ಕೇಂದ್ರದಲ್ಲಿ ೫೦೦ ರೂಪಾಯಿಯ ಒಂದು ನೋಟು ಕೊಟ್ಟರೆ, ಅವನಿಗೆ ಎಷ್ಟು ರೂಪಾಯಿ ಮರಳಿ ದೊರೆಯುತ್ತವೆ?

(೫) ಆದರ್ಶ ಗ್ರಂಥಾಲಯದಲ್ಲಿ ಮರಾಠಿ, ಹಿಂದಿ ಮತ್ತು ಇಂಗ್ಲೀಷ್ ಭಾಷೆಗಳ ಒಟ್ಟು ೮೨೦ ಪುಸ್ತಕಗಳಿವೆ. ಅವುಗಳಲ್ಲಿ ಹಿಂದಿ ಭಾಷೆಯ ೨೫೨ ಪುಸ್ತಕಗಳು ಹಾಗೂ ಇಂಗ್ಲಿಷ್ ಭಾಷೆಯ ೨೭೯ ಪುಸ್ತಕಗಳಿದ್ದರೆ, ಮರಾಠಿ ಭಾಷೆಯ ಪುಸ್ತಕಗಳು ಎಷ್ಟು ಇವೆ?

ಮರಾಠಿ ಪುಸ್ತಕಗಳ ಸಂಖ್ಯೆ + ಹಿಂದಿ ಪುಸ್ತಕಗಳ ಸಂಖ್ಯೆ + ಇಂಗ್ಲೀಷ್ ಪುಸ್ತಕಗಳ ಸಂಖ್ಯೆ = ಒಟ್ಟು ಪುಸ್ತಕಗಳು

? + ೨೫೨ + ೨೭೯ = ೮೨೦

| ಶ | ದ | ಏ | |
|---|---|---|---|
| | | | |
| ೨ | ೫ | ೨ | ಇಂಗ್ಲೀಷ್ ಪುಸ್ತಕಗಳು |
| + ೨ | ೭ | ೯ | ಹಿಂದಿ ಪುಸ್ತಕಗಳು |
| | | | ಹಿಂದಿ ಮತ್ತು ಇಂಗ್ಲೀಷ್ ಪುಸ್ತಕಗಳು |

| ಶ | ದ | ಏ | |
|---|---|---|---|
| | | | |
| ೮ | ೨ | ೦ | ಒಟ್ಟು ಪುಸ್ತಕಗಳು |
| − | | | ಹಿಂದಿ ಹಾಗೂ ಇಂಗ್ಲೀಷ್ ಪುಸ್ತಕಗಳು |
| | | | ಮರಾಠಿ ಪುಸ್ತಕಗಳು |

ಆದರ್ಶ ಗ್ರಂಥಾಲಯದಲ್ಲಿ ಮರಾಠಿ ಭಾಷೆಯ.........ಪುಸ್ತಕಗಳಿವೆ.

(೬) ಅಮ್ಮನ ಹತ್ತಿರ ೭೦೦ ರೂಪಾಯಿಗಳಿದ್ದವು. ಅವಳು ೨೪೫ ರೂಪಾಯಿಯ ಸಕ್ಕರೆ ಮತ್ತು ೧೨೮ ರೂಪಾಯಿಯ ಚಹಾ ಪುಡಿಯನ್ನು ಖರೀದಿಸಿದಳು. ಹಾಗಾದರೆ ಅವಳ ಹತ್ತಿರ ಎಷ್ಟು ರೂಪಾಯಿಗಳು ಉಳಿದಿವೆ? ಬಿಟ್ಟ ಸ್ಥಳಗಳನ್ನು ತುಂಬುವ ಮೂಲಕ ಕೃತಿ ಪೂರ್ಣ ಮಾಡಿರಿ.

ಸಕ್ಕರೆಗಾಗಿ ☐ ರೂ. ಕೊಟ್ಟಳು.

ಚಹಾ ಪುಡಿಗಾಗಿ ☐ ರೂ. ಕೊಟ್ಟಳು.

ಒಟ್ಟು ಖರ್ಚು ☐ ರೂ. ಆದವು.

ಅಮ್ಮನ ಹತ್ತಿರ ☐ ರೂ.ಗಳು ಇದ್ದವು.

ಅಮ್ಮನ ಹತ್ತಿರ ☐ ರೂ.ಗಳು ಉಳಿದವು.

| | |
|---|---|
| | ೨ ೪ ೫ |
| ☐ | ೧ ೨ ೮ |
| | ☐ |

| | |
|---|---|
| | ೭ ೦ |
| ☐ | ೦ ☐ |
| | ☐ |

(೭) ಒಂದು ಹಾಲು ಸಂಗ್ರಹಣಾ ಕೇಂದ್ರದಲ್ಲಿ ಮೊದಲು ೬೨೪ ಲೀಟರ ಹಾಲು ಇತ್ತು. ರೈತರಿಂದ ಮತ್ತೆ ೩೪೭ ಲೀಟರ ಹಾಲು ಸಂಗ್ರಹಿಸಲಾಯಿತು. ಅದರಲ್ಲಿಯ ೫೧೨ ಲೀಟರ ಹಾಲು ಉಪಹಾರ ಗೃಹದ ಚಾಲಕರಿಗೆ ಮತ್ತು ೩೪೬ ಲೀಟರ ಹಾಲನ್ನು ಇತರ ಗ್ರಾಹಕರಿಗೆ ಕೊಡಲಾಯಿತು. ಹಾಗಾದರೆ ಹಾಲು ಸಂಗ್ರಹಣಾ ಕೇಂದ್ರದಲ್ಲಿ ಎಷ್ಟು ಲೀಟರ ಹಾಲು ಉಳಿದಿದೆ?

◉ ಕೊಟ್ಟ ಮಾಹಿತಿಯ ಮೇಲಿಂದ ವಜಾಬಾಕಿಯ ಶಾಬ್ದಿಕ ಉದಾಹರಣೆಗಳನ್ನು ತಯಾರಿಸಿ ಬಿಡಿಸಿರಿ.

**ಕೊಟ್ಟ ಮಾಹಿತಿ:** ಪುಸ್ತಕಗಳ ಒಟ್ಟು ಪುಟಗಳು ೧೫೦, ಓದಿದ ಪುಟಗಳು ೧೨೬.

**ಮಾಹಿತಿ ಮೇಲಿಂದ ತಯಾರಿಸಿದ ಉದಾಹರಣೆ:** ಸಾಯಲಿಯು ಒಂದು ಪುಸ್ತಕದಲ್ಲಿಯ ೧೫೦ ಪುಟಗಳಲ್ಲಿ ೧೨೬ ಪುಟಗಳನ್ನು ಓದಿದಳು ಹಾಗಾದರೆ ಅವಳ ಎಷ್ಟು ಪುಟಗಳು ಓದುವುದು ಉಳಿದಿವೆ?

| ಶ | ದ | ಏ | |
|---|---|---|---|
| | ೪ | ೧೦ | |
| ೧ | ~~೫~~ | ~~೦~~ | ಒಟ್ಟು ಪುಟಗಳು |
| − ೧ | ೨ | ೬ | ಓದಿದ ಪುಟಗಳು |
| ೦ | ೨ | ೪ | ಓದಲಾರದೇ ಉಳಿದ ಪುಟಗಳು |

◉ ಪುಸ್ತಕ ಪ್ರದರ್ಶನ: ಒಟ್ಟು ಪುಸ್ತಕಗಳು ೭೭೫, ಅವುಗಳಲ್ಲಿ ಮಾರಾಟವಾದ ಪುಸ್ತಕಗಳು ೨೮೩.

◉ ಮಾವಿನ ಮರಗಳು ೨೧೭, ಚಿಕ್ಕು ಮರಗಳು ೪೭೬


**ಶಿಕ್ಷಕರಿಗಾಗಿ:** ವಿದ್ಯಾರ್ಥಿಗಳಿಂದ ಬೇರೀಜು ಮತ್ತು ವಜಾಬಾಕಿಯ ರೂಢಿಯಸಲುವಾಗಿ ಶಾಬ್ದಿಕ ಉದಾಹರಣೆಗಳನ್ನು ತಯಾರಿಸಿ ತರಗತಿಯಲ್ಲಿ ಬಿಡಿಸಿಕೊಳ್ಳಬೇಕು.

# ಸಂಖ್ಯಾಬಂಧ

## ತಿಳಿದುಕೊಳ್ಳಿರಿ.

◉ ೨೦ರ ವರೆಗಿನ ಸಂಖ್ಯಾಬಂಧವನ್ನು ತಯಾರಿಸಿರಿ.




**ಶಿಕ್ಷಕರಿಗಾಗಿ:** ಶಿಕ್ಷಕರು ೨೦ರ ವರೆಗಿನ ಸಂಖ್ಯೆಗಳ ಸಂಖ್ಯಾಬಂಧ ತಯಾರಿಸಿಕೊಳ್ಳಿ ಹಾಗೂ ಅವುಗಳ ಸಾಕಷ್ಟು ರೂಢಿ ಮಾಡಿಸಿಕೊಳ್ಳಿರಿ. ಅವುಗಳ ಉಪಯೋಗ ಬೇರೀಜು ಮತ್ತು ವಜಾಬಾಕಿ ಮಾಡುವಾಗ ಗಮನಕ್ಕೆ ತಂದುಕೊಡಿರಿ.

## ◉ ಕೆಳಗಿನ ಚೌಕಟ್ಟಿನಲ್ಲಿ ಯೋಗ್ಯ ಸಂಖ್ಯೆಯನ್ನು ಬರೆಯಿರಿ.

| | | | | |
|---|---|---|---|---|
| ೫ | + | ೪ | = | ೯ |
| ೪ | + | | = | ೯ |
| ೯ | − | ೪ | = | ೫ |
| | − | | = | |

೫ + ೪ = ೯

ಎರಡು ಸಂಖ್ಯೆಗಳ ಬೇರೀಜು ಮಾಡಿದಾಗ ಬರುವ ಉತ್ತರದಿಂದ ಅದರಲ್ಲಿಯ ಒಂದು ಸಂಖ್ಯೆಯನ್ನು ಕಡಿಮೆ ಮಾಡಿದರೆ ಎರಡನೆಯ ಸಂಖ್ಯೆ ದೊರೆಯುತ್ತದೆ.

## ಸ್ವಾಧ್ಯಾಯ

### (೧) ಬಿಡಿಸಿರಿ.

| ದ | ಏ |
|---|---|
| ೨ | ೬ |
| + | |
| ೬ | ೭ |

→

| ದ | ಏ |
|---|---|
| | |
| − ೪ | ೧ |
| ೨ | ೬ |

→

| ದ | ಏ |
|---|---|
| | |
| + ೨ | ೬ |
| ೬ | ೭ |

→

| ದ | ಏ |
|---|---|
| ೬ | ೭ |
| − | |
| ೪ | ೧ |

| ಶ | ದ | ಏ |
|---|---|---|
| ೨ | ೩ | ೭ |
| + | | |
| ೫ | ೫ | ೭ |

| ಶ | ದ | ಏ |
|---|---|---|
| ೩ | ೫ | ೮ |
| + | | |
| ೭ | ೪ | ೩ |

| ಶ | ದ | ಏ |
|---|---|---|
| | | |
| − ೪ | ೩ | ೬ |
| ೧ | ೫ | ೧ |

| ಶ | ದ | ಏ |
|---|---|---|
| ೯ | ೬ | ೭ |
| − | | |
| ೫ | ೩ | ೫ |

| ಶ | ದ | ಏ |
|---|---|---|
| ೩ | | ೨ |
| − | | |
| ೨ | ೧ | ೩ |

### (೨) ಕೆಳಗಿನ ಒಗಟನ್ನು ಬಿಡಿಸಿರಿ.



## (೩) ಹತ್ತಿರದ ಶತಕ ಬರೆಯಿರಿ.

| ಸಂಖ್ಯೆಗಳು | ಹತ್ತಿರದ ಶತಕ |
|---|---|
| ೧೭೮ + ೨೪ | ೨೦೦ |
| ೧೩೪ – ೫೬ | |
| ೪೫೭ + ೬೭ | |
| ೮೬೩ – ೧೫೬ | |

## (೪) ಮುಂದಿನ ಜೋಡಿಗಳಲ್ಲಿ ಯಾವುದರ ಉತ್ತರ ಹೆಚ್ಚಾಗಿರುತ್ತದೆಯೋ, ಅದರ ಸುತ್ತಲೂ ಗೋಲು ಹಾಕು.

- ೩೫೨ + ೧೪     ೩೫೨ – ೧೪
- ೪೫೬ + ೨೦     ೪೩೬ + ೫೦
- ೬೫೪ + ೨೭     ೫೯೮ + ೬೭
- ೯೬೭ – ೧೨     ೮೯೭ + ೬೬

## (೫) ಸಮಾನ ಉತ್ತರ ವಿರುವ ಜೋಡಿಗಳನ್ನು ಹುಡುಕಿರಿ.

| | | |
|---|---|---|
| ೨೫೬ + ೨೯೨ | ೮೧೩ – ೨೩೭ | ೪೬೨ + ೧೦೬ |
| ೨೫೯ + ೨೮೯ | ೭೧೯ – ೧೪೩ | ೯೧೬ – ೩೪೮ |

# ೪. ಅಪೂರ್ಣಾಂಕಗಳು






## ಯೋಚನೆ ಮಾಡಿರಿ.

(೧) ಪಿಹುಳು ಒಂದು ಲಡ್ಡುವಿನ ಎರಡು ಸಮಾನ ಭಾಗಗಳನ್ನು ಮಾಡಿದಳು.

(೨) ಒಂದು ರೊಟ್ಟಿಯ ಎರಡು ಸಮಾನ ಭಾಗಗಳನ್ನು ಮಾಡುವುದು ಹಾಗೂ ಒಂದು ಲಡ್ಡುವಿನ ಎರಡು ಸಮಾನ ಭಾಗಗಳನ್ನು ಮಾಡುವುದು, ಇವೆರಡರಲ್ಲಿ ನಿಮಗೆ ಯಾವುದು ಸುಲಭ ಎನಿಸುತ್ತದೆ? ಏಕೆ ಎಂಬುವನ್ನು ಹೇಳಿರಿ.

## ಅರ್ಧ

## ತಿಳಿದುಕೊಳ್ಳಿರಿ.

◉ **ಒಂದು ವರ್ತುಳಾಕಾರ ಕಾಗದದ ಎರಡು ಸಮಾನ ಭಾಗಗಳನ್ನು ಮಾಡಿರಿ.**



| ಒಂದು ವರ್ತುಳಾಕಾರದ ಕಾಗದವನ್ನು ತೆಗೆದುಕೊಳ್ಳಿರಿ. | ಮಧ್ಯದಲ್ಲಿ ಮಡಿಕೆ ಹಾಕಿರಿ. | ಮಡಿಕೆ ತೆಗೆಯಿರಿ ಮಡಿಕೆ ಹಾಕಿದ ರೇಷೆಯ ಮೇಲೆ ಕತ್ತರಿಸಿ. | ಎರಡು ಸಮಾನ ಭಾಗಗಳು ತಯಾರಾಗುತ್ತವೆ. ಈ ಪ್ರತಿಯೊಂದು ಭಾಗ ಎಂದರೆ, ಪೂರ್ಣ ವರ್ತುಳದ ಅರ್ಧಭಾಗ. |
|---|---|---|---|

## ನನಗೆ ತಿಳಿಯಿತು.

ಯಾವುದೇ ಒಂದು ಆಕಾರದ, ವಸ್ತುವಿನ ಅಥವಾ ಸಮೂಹದ. ಅಂದರೇನೆ ಒಂದು ಪೂರ್ಣ ಭಾಗದ ಎರಡು ಸಮಾನ ಭಾಗ ಮಾಡಿದರೆ ಅದರಲ್ಲಿಯ ಪ್ರತಿಯೊಂದು ಭಾಗವು ಆ ಆಕಾರದ ವಸ್ತುವಿನ ಅಥವಾ ಸಮೂಹದ ಅರ್ಧ ಭಾಗ ವಾಗಿರುತ್ತದೆ.

## ಸ್ವಾಧ್ಯಾಯ

**(೧) ಕೆಳಗಿನವುಗಳಲ್ಲಿ ಯಾವ ಆಕಾರವು ಬಿಂದುಗಳ ರೇಷೆಯಿಂದ ಎರಡು ಸಮಾನ ಭಾಗಗಳಾಗಿರುವುದು ಕಾಣಿಸುತ್ತದೆ. ಆ ಆಕಾರಗಳ ಕೆಳಗೆ ಕೊಟ್ಟ ಚೌಕಟ್ಟಿನಲ್ಲಿ ✓ ಹೀಗೆ ಗುರುತು ಹಾಕಿರಿ.**



(೨) ಉಳಿದ ಅರ್ಧಭಾಗವನ್ನು ತೆಗೆದು ಆಕೃತಿ ಪೂರ್ಣ ಮಾಡಿರಿ.



## ಕೃತಿ ಮಾಡಿರಿ.

(೧) A ದಿಂದ Z ವರೆಗಿನ ಇಂಗ್ಲೀಷ್ ದೊಡ್ಡ ಅಕ್ಷರಗಳಲ್ಲಿಯ ಯಾವ ಅಕ್ಷರಗಳನ್ನು ನಮಗೆ ಎರಡು ಸಮಾನ ಭಾಗ ಮಾಡಲು ಬರುವುದು?

(೨) ವರ್ತುಳ, ಚೌರಸ, ತ್ರಿಕೋನ ಆಕಾರಗಳ ಕಾಗದ ತೆಗೆದುಕೊಂಡು, ಮಡಿಕೆ ಮಾಡಿ ಬೇರೆ-ಬೇರೆ ಎಷ್ಟು ಪ್ರಕಾರಗಳಲ್ಲಿ ಎರಡು ಸಮಾನ ಭಾಗ ಮಾಡಲು ಬರುತ್ತದೆ ಎಂಬುದನ್ನು ಪ್ರಾತ್ಯಕ್ಷಿಕೆ ಮಾಡಿ ನೋಡಿರಿ.

# ಕಾಲು ಭಾಗ

## ತಿಳಿದುಕೊಳ್ಳಿರಿ.

**ಮೇಘನಾಳ ಹತ್ತಿರ ಒಂದು ರೊಟ್ಟಿ ಇದೆ. ಅವಳು ಆ ರೊಟ್ಟಿಯ ನಾಲ್ಕು ಸಮಾನ ಭಾಗ ಮಾಡಿದಳು.**




ಅರ್ಧದ ಅರ್ಧ ಭಾಗ ಎಂದರೆ ಕಾಲು ಭಾಗ

ರೊಟ್ಟಿಯನ್ನು ನಾಲ್ಕು ಸಮಾನ ಭಾಗ ಮಾಡಲಾಯಿತು. ಅವುಗಳಲ್ಲಿಯ ಪ್ರತಿಯೊಂದು ಭಾಗ ಇದು **ಒಂದು ಪೂರ್ಣದ ಕಾಲು ಭಾಗ.**

## ನನಗೆ ತಿಳಿಯಿತು.

ಒಂದು ವಸ್ತುವಿನ ಅಥವಾ ಆಕಾರದ ನಾಲ್ಕು ಸಮಾನ ಭಾಗಗಳನ್ನು ಮಾಡಿದರೆ, ಅದರಲ್ಲಿಯ ಪ್ರತಿಯೊಂದು ಭಾಗ ಇದು ಕಾಲುಭಾಗ ಇರುತ್ತದೆ. ಎರಡು ಕಾಲು ಭಾಗ ಕೂಡಿಸಿ ತಯಾರಾಗುವ ಭಾಗವೆಂದರೆ, ಅರ್ಧ ಭಾಗ.

# ಸ್ವಾಧ್ಯಾಯ

**ಕೆಳಗಿನ ಆಕಾರಗಳ ಕಾಲು ಭಾಗಕ್ಕೆ ಬಣ್ಣ ತುಂಬಿರಿ.**



ಶಿಕ್ಷಕರಿಗಾಗಿ: ವಿವಿಧ ಆಕಾರಗಳ ಕಾಗದವನ್ನು ಕೊಟ್ಟು ಅವುಗಳ ನಾಲ್ಕು ಸಮಾನ ಭಾಗ ಮಾಡುವ ಕೃತಿಯನ್ನು ವಿದ್ಯಾರ್ಥಿಗಳಿಂದ ಮಾಡಿಸಿಕೊಳ್ಳಿರಿ. ವಿದ್ಯಾರ್ಥಿಗಳಿಗೆ ಪ್ರತಕ್ಷ್ಯ ಅನುಭವದಿಂದ ಅಪೂರ್ಣಾಂಕ ಸಂಕಲ್ಪನೆಯನ್ನು ತಿಳಿದುಕೊಳ್ಳುವ ಅವಕಾಶವನ್ನು ಮಾಡಿ ಕೊಡಿ.

# ಮುಕ್ಕಾಲು

## ತಿಳಿದುಕೊಳ್ಳಿರಿ.



ಸಮಯವಾಯಿತು ಊಟದ್ದು,

ಹೋಳಿಗೆ ಮಾಡಿದೇವು ಹೂರಣದ್ದು,

ಪಿಹೂಗೆ ಆಯಿತು ಹಸಿವು ತುಂಬಾ,

ಹೋಳಿಗೆಯ ಮಾಡಿದೇವು
ನಾಲ್ಕು ಸಮಾನ ಭಾಗ,







ಪಿಹೂಳು ತಿಂದಳು
ಮೂರು ಕಾಲು ಭಾಗ,

ಉಳಿದಿದೆ ಮಾತ್ರ
ಒಂದು ಕಾಲು ಭಾಗ



## ನನಗೆ ತಿಳಿಯಿತು.

ಒಂದು ವಸ್ತುವಿನ ಅಥವಾ ಆಕಾರದ ನಾಲ್ಕು ಸಮಾನ ಭಾಗ ಮಾಡಿ, ಅವುಗಳಲ್ಲಿಯ ಮೂರು ಭಾಗಗಳನ್ನು ತೆಗೆದುಕೊಂಡರೆ ಅದು ಮುಕ್ಕಾಲು ಭಾಗ ಇರುತ್ತದೆ. ಅರ್ಧ ಭಾಗ ಮತ್ತು ಕಾಲು ಭಾಗ ಕೂಡಿ ಮುಕ್ಕಾಲು ಭಾಗ ಆಗುತ್ತದೆ.

ಒಂದು ಪೂರ್ಣದಿಂದ ಕಾಲು ಭಾಗ ಕಡಿಮೆ ಮಾಡಿದರೂ ಸಹ ಮುಕ್ಕಾಲು ಭಾಗ ದೊರೆಯುತ್ತದೆ.
ಮೂರು ಕಾಲು ಭಾಗ ಕೂಡಿ ತಯಾರಾಗುವ ಭಾಗ ಎಂದರೆ ಮುಕ್ಕಾಲು ಭಾಗ.

### ⦿ ಬಣ್ಣ ತುಂಬಿದ ಭಾಗ: ಕಾಲು ಭಾಗದಿಂದ ಪೂರ್ಣ



| ೧ ಕಾಲು ಭಾಗ – ಕಾಲುಭಾಗ | ೨ ಕಾಲು ಭಾಗ – ಅರ್ಧ | ೩ ಕಾಲು ಭಾಗ – ಮುಕ್ಕಾಲು | ೪ ಕಾಲು ಭಾಗ – ಒಂದು ಪೂರ್ಣ |
|---|---|---|---|

**ಶಿಕ್ಷಕರಿಗಾಗಿ:** ಗಣಿತದ ಸಂಕಲ್ಪನೆಗಳ ಮೇಲೆ ಆಧಾರಿಸಿದ ಹಾಡುಗಳನ್ನು ತಯಾರಿಸಿ, ಅವುಗಳನ್ನು ತಾಳ-ಲಯದೊಂದಿಗೆ ಅಭಿನಯದೊಂದಿಗೆ ಪ್ರಸ್ತುತಪಡಿಸಿಕೊಳ್ಳಿರಿ.

## ಸ್ವಾಧ್ಯಾಯ

(೧) ಮುಕ್ಕಾಲು ಭಾಗ ಬಣ್ಣದಿಂದ ತುಂಬಲಾಗಿದೆ ಆ ಆಕೃತಿಗಳ ಕೆಳಗಿನ ಚೌಕಟ್ಟಿನಲ್ಲಿ ✓ ಈ ಗುರುತು ಮಾಡಿರಿ. ಇಲ್ಲದಿದ್ದರೆ × ಈ ಗುರುತು ಮಾಡಿರಿ.



(೨) ಕೆಳಗಿನ ಕೋಷ್ಟಕವನ್ನು ಪೂರ್ಣ ಮಾಡಿರಿ.

| ಆಕೃತಿ |  |  |  |  |  |
|---|---|---|---|---|---|
| ಬಣ್ಣ ತುಂಬಿದ ಭಾಗ | ಕಾಲು ಭಾಗ | .... | .... | .... | ಅರ್ಧ |
| ಬಣ್ಣ ತುಂಬಲಾರದ ಭಾಗ | .... | ಅರ್ಧ | .... | ಮುಕ್ಕಾಲು ಭಾಗ | .... |

(೩) ಆಕೃತಿಯ ಕೆಳಗೆ ಕೊಟ್ಟ ಭಾಗದಷ್ಟು ಭಾಗವನ್ನು ಬಣ್ಣದಿಂದ ತುಂಬಿರಿ.



ಮುಕ್ಕಾಲು ಭಾಗ ಕಾಲು ಭಾಗ ಅರ್ಧ ಅರ್ಧ ೩ ಕಾಲು

(೪) ಅಕ್ಷರಗಳ ಕೆಳಗೆ ಕೊಟ್ಟ ಭಾಗವನ್ನು ತೋರಿಸಲು ರೇಷೆಯನ್ನು ತೆಗೆಯಿರಿ. ಅಕ್ಷರದ ಅಷ್ಟೇ ಭಾಗವನ್ನು ಬಣ್ಣದಿಂದ ತುಂಬಿರಿ.



ಅರ್ಧ ಅರ್ಧ ಮುಕ್ಕಾಲು ಭಾಗ ಕಾಲು ಭಾಗ



## ಕೃತಿ ಮಾಡಿರಿ.

◉ **ಕೆಳಗಿನ ಸಮೂಹಗಳ ವಿಚಾರ ಮಾಡಿ ಸೂಚಿಸಿದ ಭಾಗವನ್ನು ಬಣ್ಣದಿಂದ ತುಂಬಿರಿ.**



(೧) ಈ ಚಿತ್ರದಲ್ಲಿ ಕೊಟ್ಟ ಮಾಣಿಗಳ ಹಾರದಲ್ಲಿಯ ಅರ್ಧದಷ್ಟು ಮಾಣಿಗಳನ್ನು ಕೆಂಪು ಬಣ್ಣದಿಂದ ಮತ್ತು ಅರ್ಧ ಕಪ್ಪು ಬಣ್ಣದಿಂದ ತುಂಬಿರಿ.



(೨) ಚಿತ್ರದಲ್ಲಿ ಕೊಟ್ಟ ಬಲೂನಗಳಲ್ಲಿ ಕಾಲು ಭಾಗ ಬಲೂನುಗಳನ್ನು ಹಳದಿ ಬಣ್ಣದಿಂದ ತುಂಬಿರಿ.



(೩) ಚಿತ್ರದಲ್ಲಿ ಕೊಟ್ಟ ಗೋಲಿಗಳಲ್ಲಿ ಮುಕ್ಕಾಲು ಭಾಗದಷ್ಟು ಗೋಲಿಗಳಿಗೆ ನೀಲಿ ಬಣ್ಣದಿಂದ ತುಂಬಿರಿ.

## ಸ್ವಾಧ್ಯಾಯ

**(೧) ಏಂಜಲ್‌ಳು ೧ ಡಝನ್ ಬಾಳೆಹಣ್ಣು ತಂದಳು. ಅದರಲ್ಲಿಯ ಅರ್ಧ ಡಝನ್ ಬಾಳೆಹಣ್ಣು ಗೆಳತಿಗೆ ಕೊಟ್ಟರೆ, ಅವಳ ಹತ್ತಿರ ಎಷ್ಟು ಬಾಳೆಹಣ್ಣುಗಳು ಉಳಿದವು?**




**ಎಷ್ಟು ಎಂಬುದನ್ನು ಬರೆಯಿರಿ.**

೧ ಡಝನ್ = ೧೨ ಬಾಳೆಹಣ್ಣು

ಅರ್ಧ ಡಝನ್ = ☐ ಬಾಳೆಹಣ್ಣು

ಕಾಲು ಭಾಗ ಡಝನ್ = ☐ ಬಾಳೆಹಣ್ಣು

ಮುಕ್ಕಾಲು ಭಾಗ ಡಝನ್ = ☐ ಬಾಳೆಹಣ್ಣು

**(೨) ಒಂದು ವರ್ಷದಲ್ಲಿ ೧೨ ತಿಂಗಳುಗಳು ಇರುತ್ತವೆ ಹಾಗಾದರೆ ಅರ್ಧ ವರ್ಷದಲ್ಲಿ ಎಷ್ಟು ತಿಂಗಳುಗಳು ಇರುತ್ತವೆ? ☐**

**ಕಾಲು ಭಾಗ ವರ್ಷದಲ್ಲಿ ಎಷ್ಟು ತಿಂಗಳುಗಳು ಇರುತ್ತವೆ? ☐**

**(೩) ಬಿಡಿಸಿರಿ**




**ಎಷ್ಟು ಎಂಬುದನ್ನು ಬರೆಯಿರಿ**

೧ ಗಂಟೆ = ೬೦ ನಿಮಿಷಗಳು

ಅರ್ಧ ಗಂಟೆ = ☐ ನಿಮಿಷಗಳು

ಕಾಲು ಗಂಟೆ = ☐ ನಿಮಿಷಗಳು

ಮುಕ್ಕಾಲು ಗಂಟೆ = ☐ ನಿಮಿಷಗಳು

**ಎಷ್ಟು ಎಂಬುದನ್ನು ಬರೆಯಿರಿ**

೬೦ರ ಅರ್ಧ = ☐

೬೦ರ ಕಾಲು ಭಾಗ = ☐

೬೦ರ ಮುಕ್ಕಾಲು ಭಾಗ = ☐



**ಶಿಕ್ಷಕರಿಗಾಗಿ:** ಸಮೂಹದಲ್ಲಿ ಕೊಡಲಾದ ಭಾಗಗಳಿಗೆ ಅನುಗುಣವಾಗಿ ಅರ್ಧ, ಕಾಲು ಭಾಗ, ಮುಕ್ಕಾಲು ಭಾಗದಷ್ಟು ವಸ್ತುವಿಗೆ ಬಣ್ಣ ತುಂಬಿ ಅವುಗಳ ಬಗ್ಗೆ ಚರ್ಚೆ ನಡೆಸಬೇಕು. ಸಮೂಹದ ೨ ಸಮಾನ ಭಾಗ ಮಾಡಿ ಅರ್ಧ, ೪ ಸಮಾನ ಭಾಗ ಮಾಡಿ ಕಾಲು ಭಾಗ ಹಾಗೆಯೇ ಅರ್ಧ ಮತ್ತು ಕಾಲು ಭಾಗ ಕೂಡಿಸಿ ಮುಕ್ಕಾಲು ಭಾಗ ದೊರಕಿಸಿಕೊಳ್ಳುವುದು. ಈ ರೀತಿ ಉದಾಹರಣೆಗಳೊಂದಿಗೆ ಸಾಕಷ್ಟು ರೂಢಿ ಮಾಡಿಸಿಕೊಳ್ಳಿರಿ.

## (೪) ಬಿಡಿಸಿರಿ.

**ಎಷ್ಟು ಆದನ್ನು ಬರೆಯಿರಿ.**

೧೦೦ರ ಅರ್ಧ = [ ]

೧೦೦ರ ಕಾಲು ಭಾಗ = [ ]

೧೦೦ರ ಮುಕ್ಕಾಲು ಭಾಗ = [ ]

**ಹೊಂದಿಸಿ ಬರೆಯಿರಿ.**

| | |
|---|---|
| ೧೨ರ ಅರ್ಧ | ೨೫ |
| ೧೦೦ರ ಕಾಲು ಭಾಗ | ೬೦ |
| ೮೦ರ ಮುಕ್ಕಾಲು ಭಾಗ | ೬ |

**ಬಿಟ್ಟ ಸ್ಥಳಗಳನ್ನು ತುಂಬಿರಿ.**

೧೫ ನಿಮಿಷಗಳು ಎಂದರೆ = [ ] ತಾಸು

೩ ಬಾಳೆಹಣ್ಣುಗಳು ಎಂದರೆ = [ ] ಡಝನ್ ಬಾಳೆಹಣ್ಣು

೧೦೦ ಓಟಗಳು = [ ] ಶತಕ

## ಅರ್ಧಪಟ್ಟು ಮತ್ತು ಎರಡು ಪಟ್ಟು (ದುಪ್ಪಟ್ಟು)



### ತಿಳಿದುಕೊಳ್ಳಿರಿ.

- ನನ್ನ ಹತ್ತಿರ ೪ ಗೋಲಿಗಳಿವೆ. ನನ್ನ ಹತ್ತಿರ ನಿನ್ನ ಗೋಲಿಗಳ ಅರ್ಧ ಪಟ್ಟು ಗೋಲಿಗಳು ಇವೆ.



- ನನ್ನ ಹತ್ತಿರ ೮ ಗೋಲಿಗಳಿವೆ. ನನ್ನ ಹತ್ತಿರ ನಿನ್ನ ಗೋಲಿಗಳ ಎರಡು ಪಟ್ಟು ಗೋಲಿಗಳು ಇವೆ. ೮ ಗೋಲಿಗಳ ಎರೆಡು ಸಮಾನ ಗುಂಪು.





### ನನಗೆ ತಿಳಿಯಿತು.

- **ಅರ್ಧ ಪಟ್ಟು ಎಂದರೆ ಸಮೂಹದ ಅರ್ಧವಾಗಿದೆ.**
- **ಎರಡು ಪಟ್ಟು ಮಾಡುವುದು ಎಂದರೆ ಸಂಖ್ಯೆಗೆ ೨ ರಿಂದ ಗುಣಿಸುವುದು ಎಂದರ್ಥ.**

## ಸ್ವಾಧ್ಯಾಯ

**(೧) ಎರಡು ಪಟ್ಟು ಮತ್ತು ಅರ್ಧ ಪಟ್ಟು ಈ ಶಬ್ದಗಳನ್ನು ಉಪಯೋಗಿಸಿ ಕೆಳಗಿನ ಬಿಟ್ಟ ಸ್ಥಳಗಳನ್ನು ತುಂಬಿರಿ.**

ರಾಜು ಮತ್ತು ಮೀನಾ ಹಗ್ಗ ಜಿಗಿಯುವ ಆಟ ಆಡುತ್ತಿದ್ದರು. ರಾಜು ೧೦ ಸಲ ಜಿಗಿದನು, ಮೀನಾ ೨೦ ಸಲ ಜಿಗಿದಳು.

- ೧೦ ಜಿಗಿತಗಳು, ಇವು ೨೦ ಜಿಗಿತಗಳ [ ] ಇವೆ.
- ೨೦ ಜಿಗಿತಗಳು, ಇವು ೧೦ ಜಿಗಿತಗಳ [ ] ಇವೆ.

**(೨) ಬಿಟ್ಟ ಚೌಕಟ್ಟಿನಲ್ಲಿ ಯೋಗ್ಯ ಸಂಖ್ಯೆಯನ್ನು ಬರೆಯಿರಿ.**

- ಮೂರನೆಯ ತರಗತಿಯಲ್ಲಿ ೩೦ ವಿದ್ಯಾರ್ಥಿಗಳಿದ್ದಾರೆ. ಅವರಲ್ಲಿ ಅರ್ಧದಷ್ಟು ವಿದ್ಯಾರ್ಥಿಗಳು ಓಟದ ಸ್ಪರ್ಧೆಯಲ್ಲಿ ಭಾಗವಹಿಸಿದರು. ಅಂದರೆ ಎಷ್ಟು ವಿದ್ಯಾರ್ಥಿಗಳು ಓಟದ ಸ್ಪರ್ಧೆಯಲ್ಲಿ ಭಾಗವಹಿಸಿದರು? [ ] ವಿದ್ಯಾರ್ಥಿಗಳು.
- ತಂದೆಯವರು ಗೋಧಿ ಮತ್ತು ಅಕ್ಕಿಯನ್ನು ತಂದರು. ಗೋಧಿಯ ತೂಕವು ಅಕ್ಕಿಯ ತೂಕದ ಎರಡು ಪಟ್ಟು ಇದೆ. ಒಂದು ವೇಳೆ ಅಕ್ಕಿಯ ತೂಕ ೫ ಕಿಲೋಗ್ರಾಂ ಇದ್ದರೆ, ಗೋಧಿಯ ತೂಕ ಎಷ್ಟು ಕಿಲೋಗ್ರಾಂ? [ ] ಕಿಲೋಗ್ರಾಂ.
- ಸಚೀನನ ತಂದೆಯು ಅರ್ಧ ಡಝನ್ ವಹಿಗಳನ್ನು ತಂದರು. ಅದರಲ್ಲಿ ಅರ್ಧದಷ್ಟು ಅಕ್ಕಳಿಗೆ ಕೊಟ್ಟರು. ಉಳಿದ ವಹಿಗಳನ್ನು ಸಚೀನನಿಗೆ ಕೊಟ್ಟರೆ, ಸಚೀನನಿಗೆ ಎಷ್ಟು ವಹಿಗಳು ದೊರೆತವು? [ ] ವಹಿಗಳು.
- ಅಜಯನ ಹತ್ತಿರ ಇರುವ ಹಣದ ಕಾಲು ಭಾಗ ೧೦ ರೂಪಾಯಿಗಳಿವೆ. ಹಾಗಾದರೇ ಅವನ ಹತ್ತಿರ ಒಟ್ಟು ಎಷ್ಟು ರೂಪಾಯಿಗಳಿವೆ? [ ] ರೂಪಾಯಿಗಳು.

# ಅಪೂರ್ಣಾಂಕಗಳ ವಾಚನ ಮತ್ತು ಲೇಖನ

## ತಿಳಿದುಕೊಳ್ಳಿರಿ.

| ಆಕೃತಿ | ಭಾಗ | ಸಂಖ್ಯಾರೂಪದಲ್ಲಿ ಲೇಖನೆ |
|---|---|---|
|  | ೪ ಪೂರ್ಣ | ೪ |
|  | ೨ ಪೂರ್ಣ | ೨ |
|  | ೧ ಪೂರ್ಣ | ೧ |
|  | ಒಂದು ಪೂರ್ಣದ ಅರ್ಧ ಭಾಗ | ೧/೨ |

**ಅಣ್ಣ:** ಮೇಘನಾ, ಈ ಕೋಷ್ಟಕದಲ್ಲಿಯ ಕೊನೆಯ ಆಕೃತಿಯು ಒಂದು ಪೂರ್ಣ ಆಕೃತಿಯ ಎಷ್ಟು ಭಾಗ ಇದೆ?

**ಮೇಘನಾ:** ಅರ್ಧ ಭಾಗವಿದೆ.

**ಅಣ್ಣ:** ಮೇಘನಾ, 'ಅರ್ಧ' ಭಾಗ ಇದು ಅಪೂರ್ಣ ಭಾಗವಾಗಿದೆ. ಹಾಗೆಯೇ ಕಾಲು ಭಾಗ ಮತ್ತು ಮುಕ್ಕಾಲು ಭಾಗ ಇವು ಸಹ ಅಪೂರ್ಣ ಭಾಗಗಳಿವೆ.

**ಮೇಘನಾ:** ಅಣ್ಣ! ಈ 'ಅರ್ಧ' ಭಾಗವನ್ನು ಸಂಖ್ಯಾರೂಪದಲ್ಲಿ ಹೇಗೆ ಬರೆಯುವುದು? ಮತ್ತು ಹೇಗೆ ಓದುವುದು? ಹೇಳು ನೋಡೋಣ.

**ಅಣ್ಣ:**

ವಿಚಾರಕ್ಕೆ ತೆಗೆದುಕೊಂಡ ಭಾಗ (ಬಣ್ಣ ತುಂಬಿದ ಭಾಗ) (ಅಂಶ) / ಒಂದು ಪೂರ್ಣದ ಮಾಡಿದ ಒಟ್ಟು ಸಮಾನ ಭಾಗ (ಛೇದ) = ೧/೨

**೧/೨ ದ ವಾಚನ 'ಒಂದು ಛೇದ ಎರಡು' ಅಥವಾ 'ಒಂದು ಅಂಶ ಛೇದ ಎರಡು' ಹೀಗೆ ಮಾಡುತ್ತಾರೆ.**

**ಮೇಘನಾ:** ಇಷ್ಟು ಸುಲಭ! ತಿಳಿಯಿತು!

### (೧) ಅಪೂರ್ಣಾಂಕಗಳನ್ನು ಸಂಖ್ಯಾರೂಪದಲ್ಲಿ ಹೇಗೆ ಬರೆಯುವುದು?



ಬಣ್ಣ ತುಂಬಿದ ಭಾಗ / ಒಂದು ಪೂರ್ಣದ ಮಾಡಿದ ಸಮಾನ ಭಾಗ = ಅಂಶ / ಛೇದ = ೪/೫

೪/೫ ದ ವಾಚನ 'ನಾಲ್ಕು ಛೇದ ಐದು' ಹೀಗೆ ಮಾಡುತ್ತಾರೆ.

### (೨) 'ಕಾಲು ಭಾಗ' ಸಂಖ್ಯಾರೂಪದಲ್ಲಿ ಹೇಗೆ ಬರೆಯುವುದು?



ಬಣ್ಣ ತುಂಬಿದ ಭಾಗ (ಅಂಶ) / ಒಂದು ಪೂರ್ಣದ ಮಾಡಿದ ಸಮಾನ ಭಾಗ (ಛೇದ) = ೧/೪

೧/೪ ರ ವಾಚನ 'ಒಂದು ಛೇದ ನಾಲ್ಕು' ಹೀಗೆ ಮಾಡುತ್ತಾರೆ.

### (೩) 'ಮುಕ್ಕಾಲು ಭಾಗ' ಸಂಖ್ಯಾರೂಪದಲ್ಲಿ ಹೇಗೆ ಬರೆಯುವುದು?



ಬಣ್ಣ ತುಂಬಿದ ಭಾಗ (ಅಂಶ) / ಒಂದು ಪೂರ್ಣದ ಮಾಡಿದ ಒಟ್ಟು ಸಮಾನ ಭಾಗ (ಛೇದ) = ೩/೪

೩/೪ ರ ವಾಚನ 'ಮೂರು ಛೇದ ನಾಲ್ಕು' ಅಥವಾ 'ಮೂರು ಅಂಶ ಛೇದ ನಾಲ್ಕು' ಹೀಗೆ ಮಾಡುತ್ತಾರೆ.

### (೪) ಬಿಟ್ಟ ಸ್ಥಳಗಳನ್ನು ತುಂಬಿ ಅಪೂರ್ಣಾಂಕವನ್ನು ಸಂಖ್ಯಾರೂಪದಲ್ಲಿ ಬರೆಯಿರಿ.



ಬಣ್ಣ ತುಂಬಿದ ಭಾಗ / ಒಂದು ಪೂರ್ಣದ ಮಾಡಿದ ಸಮಾನ ಭಾಗ = ಅಂಶ / ಛೇದ = ☐/☐

೩/೮ ರ ವಾಚನ '----------' ಹೀಗೆ ಮಾಡುತ್ತಾರೆ.

## ಸ್ವಾಧ್ಯಾಯ

**(೧) ಮುಂದಿನ ಕೋಷ್ಟಕವನ್ನು ಪೂರ್ಣ ಮಾಡಿರಿ.**

| ಆಕೃತಿ | ಸಮಾನ ಭಾಗಗಳಲ್ಲಿ ಬಣ್ಣ ತುಂಬಿದ ಭಾಗ | ಮಾಡಿದ ಒಟ್ಟು ಸಮಾನ ಭಾಗ | ಅಂಶ | ಛೇದ | ಲೇಖನ | ವಾಚನ |
|---|---|---|---|---|---|---|
|  | ೩ | ೪ | ೩ | ೪ | $\frac{೩}{೪}$ | ಮೂರು ಛೇದ ನಾಲ್ಕು |
|  | ೨ | ೪ | ೨ | ೪ | $\frac{೨}{೪}$ | ಎರಡು ಛೇದ ನಾಲ್ಕು |
|  | □ | ೨ | □ | □ | $\frac{□}{೨}$ | ಒಂದು ಛೇದ ಎರಡು |
|  | ೩ | □ | □ | ೫ | $\frac{೩}{೫}$ | ........ ಛೇದ ........ |
|  | ೪ | ೬ | □ | □ | $\frac{□}{□}$ | ...................... |
|  | ೨ | □ | □ | □ | $\frac{□}{□}$ | ...................... |

**◉ ಅಂಶ ಮತ್ತು ಛೇದ ಇವುಗಳ ನಿರೀಕ್ಷಣೆ ಮಾಡಿರಿ.**



೧ ಕಾಲು ಭಾಗ = 'ಕಾಲು ಭಾಗ' $\left(\frac{೧}{೪}\right)$



೨ ಕಾಲು ಭಾಗ = 'ಅರ್ಧ' $\left(\frac{೨}{೪}\right)$



೩ ಕಾಲು ಭಾಗ = 'ಮುಕ್ಕಾಲು ಭಾಗ' = $\left(\frac{೩}{೪}\right)$



೪ ಕಾಲು ಭಾಗ = 'ಒಂದು ಪೂರ್ಣ' = $\left(\frac{೪}{೪}\right)$



### ನನಗೆ ತಿಳಿಯಿತು.

- ◉ ಅರ್ಧ, ಕಾಲುಭಾಗ, ಮುಕ್ಕಾಲು ಭಾಗ ಈ ಮೂರು ಅಪೂರ್ಣಾಂಕದಲ್ಲಿ ಛೇದಕ್ಕಿಂತಲೂ ಅಂಶ ಚಿಕ್ಕದೇ ಇರುತ್ತದೆ.
- ◉ ಅಂಶ ಮತ್ತು ಛೇದ ಸಮಾನವಾದರೆ, ಒಂದು ಪೂರ್ಣ ಆಗುತ್ತದೆ.

## ಏಕಕ ಅಪೂರ್ಣಾಂಕ

### ತಿಳಿದುಕೊಳ್ಳಿರಿ.




೪ ಸಮಾನ ಭಾಗ ಮಾಡಲಾಯಿತು. ೪ ಕಾಲು ಭಾಗಗಳು ಆದವು. ಪ್ರತಿಯೊಂದು ಭಾಗ $\frac{೧}{೪}$ ಇದೆ.

ಇಲ್ಲಿ $\frac{೧}{೪}$ ಈ ಅಪೂರ್ಣಾಂಕವನ್ನು ನಾಲ್ಕು ಸಲ ತೆಗೆದುಕೊಂಡರೆ, ಒಂದು ಪೂರ್ಣವಾಗುತ್ತದೆ.

ಹಾಗಾದರೆ ಈ ಪೂರ್ಣದ ಬಗೆಗೆ ಇಲ್ಲಿ $\frac{೧}{೪}$ ಇದು ಏಕಕ ಅಪೂರ್ಣಾಂಕ ಇದೆ.

-  ಇಲ್ಲಿ ಹೂವಿನ ೫ ಎಸಳುಗಳಲ್ಲಿ ೨ ಎಸಳುಗಳಿಗೆ ಬಣ್ಣ ತುಂಬಲಾಗಿದೆ.

  ಇಲ್ಲಿ ಬಣ್ಣ ತುಂಬಿದ ಭಾಗ $\frac{೨}{೫}$ ಈ ಅಪೂರ್ಣಾಂಕವನ್ನು ಸೂಚಿಸುತ್ತದೆ.

ಒಂದು ಪೂರ್ಣದ ೫ ಸಮಾನ ಭಾಗ ಮಾಡಲಾಯಿತು. ಅದರಲ್ಲಿಯ ಪ್ರತಿಯೊಂದು ಭಾಗವು $\frac{೧}{೫}$ ಆಗಿದೆ. ಇಲ್ಲಿ $\frac{೧}{೫}$ ಈ ಅಪೂರ್ಣಾಂಕವು ಏಕಕ ಅಪೂರ್ಣಾಂಕ ಆಗಿದೆ.

$\frac{೨}{೫}$ ಇದರ ಅರ್ಥ $\frac{೧}{೫}$ ಈ ಏಕಕ ಅಪೂರ್ಣಾಂಕ ೨ ಸಲ ತೆಗೆದುಕೊಳ್ಳಲಾಗಿದೆ.

## ಅಂಶಾಧಿಕ ಹಾಗೂ ಛೇದಾಧಿಕ ಅಪೂರ್ಣಾಂಕ

### ಚರ್ಚೆ ಮಾಡಿ.

- ಅಪೂರ್ಣಾಂಕಗಳಲ್ಲಿ ಛೇದ ಇದು ಅಂಶಕ್ಕಿಂತ ದೊಡ್ಡದಿರುತ್ತದೆಯೇ?
- ಒಂದು ವೇಳೆ ಅಂಶವು ಛೇದದ ಎರಡು ಪಟ್ಟು ಇದ್ದರೆ, ಅದು ಅಪೂರ್ಣಾಂಕ ಇರುತ್ತದೆಯೋ ಅಥವಾ ಪೂರ್ಣವಾಗುವುದು?

**ಒಂದು ಪೂರ್ಣ**  **ದ**  **ಇದು ಕಾಲು ಭಾಗ ಇದೆ. ಹೀಗೆ ಕಾಲು ಭಾಗ ಅನೇಕ ಸಲ ತೆಗೆದುಕೊಳ್ಳಲಾಗಿದೆ. ಅದರ ನಿರೀಕ್ಷಣೆ ಮಾಡಿರಿ.**



| $\frac{೧}{೪}$ | $\frac{೨}{೪}$ | $\frac{೩}{೪}$ | $\frac{೪}{೪}$ | $\frac{೫}{೪}$ |
|---|---|---|---|---|
| ಏಕಕ ಅಪೂರ್ಣಾಂಕ | $\frac{೧}{೪}$ ಎರಡು ಸಲ | $\frac{೧}{೪}$ ಮೂರು ಸಲ | $\frac{೧}{೪}$ ನಾಲ್ಕು ಸಲ | $\frac{೧}{೪}$ ಐದು ಸಲ |



**ಶಿಕ್ಷಕರಿಗಾಗಿ:** ಚಿತ್ರ, ಬಿಂದುಗಳು, ರೇಷೆಗಳು, ವಸ್ತುಗಳ ಸಮೂಹ ಇತ್ಯಾಧಿಗಳ ಬಳಕೆ ಮಾಡಿ ಅರ್ಧ, ಕಾಲು ಭಾಗ ಮುಕ್ಕಾಲು ಭಾಗ ಸಂಬಂಧಿಸಿದ ಉದಾಹರಣೆಗಳನ್ನು ಬಿಡಿಸಲು ವಿದ್ಯಾರ್ಥಿಗಳಿಗೆ ಅವಕಾಶ ಮಾಡಿಕೊಡಿ. ಅರ್ಧ ಕಾಲು ಭಾಗ, ಮುಕ್ಕಾಲು ಭಾಗ, ಅರ್ಧ ಪಟ್ಟು, ಎರಡು ಪಟ್ಟು ಈ ಸಂಬಂಧಿಸಿದ ವ್ಯವಹಾರಿಕ ಉದಾಹರಣೆಗಳನ್ನು ಸ್ವತಃ ಗೆಳೆಯರ, ತಯಾರಿಸಲು ವಿದ್ಯಾರ್ಥಿಗಳಿಗೆ ಪ್ರೇರಣೆ ಕೊಡಿರಿ. ಅವಶ್ಯಕತೆಗೆ ಅನುಸರಿಸಿ ಪೋಷಕರ ಸಹಾಯ ತೆಗೆದುಕೊಳ್ಳಲು ಸೂಚಿಸಿರಿ.

## ನನಗೆ ತಿಳಿಯಿತು.

ನಾವು ಯಾವುದೇ ಏಕಕ ಅಪೂರ್ಣಾಂಕವನ್ನು ಎಷ್ಟು ಸಲ ವಾದರೂ ತೆಗೆದುಕೊಳ್ಳಬಹುದು.

ಉದಾಹರಣೆಗೆ ೩ ಸಲ $\frac{೧}{೪}$ ಅಂದರೆ $\frac{೩}{೪}$, ೭ ಸಲ $\frac{೧}{೪}$ ಅಂದರೆ $\frac{೭}{೪}$

- $\frac{೧}{೪}, \frac{೨}{೪}, \frac{೩}{೪}$ ಈ ಅಪೂರ್ಣಾಂಕಗಳಲ್ಲಿ ಅಂಶಕ್ಕಿಂತಲೂ ಛೇದ ದೊಡ್ಡದಿದೆ. ಆದ್ದರಿಂದ ಇವು ಛೇದಾಧಿಕ ಅಪೂರ್ಣಾಂಕಗಳಾಗಿವೆ.
- $\frac{೫}{೪}, \frac{೬}{೪}, \frac{೭}{೪}$ ಈ ಅಪೂರ್ಣಾಂಕಗಳಲ್ಲಿ ಛೇದಕ್ಕಿಂತಲೂ ಅಂಶ ದೊಡ್ಡದಿದೆ. ಎಂದು ಅಂಶಾಧಿಕ ಅಪೂರ್ಣಾಂಕಗಳಾಗಿವೆ.

ಯಾವ ಅಪೂರ್ಣಾಂಕಗಳಲ್ಲಿ ಅಂಶಕ್ಕಿಂತಲೂ ಛೇದ ದೊಡ್ಡದಿರುತ್ತದೆ. ಆ ಅಪೂರ್ಣಾಂಕಗಳು 'ಛೇದಾಧಿಕ ಅಪೂರ್ಣಾಂಕಗಳು' ಆಗಿರುತ್ತವೆ. ಉದಾಹರಣೆಗೆ $\frac{೧}{೨}, \frac{೧}{೪}, \frac{೩}{೪}, \frac{೫}{೯}, .......$

ಯಾವ ಅಪೂರ್ಣಾಂಕಗಳಲ್ಲಿ ಛೇದಕ್ಕಿಂತಲೂ ಅಂಶ ದೊಡ್ಡದಿರುತ್ತದೆ. ಆ ಅಪೂರ್ಣಾಂಕಗಳು 'ಅಂಶಾಧಿಕ ಅಪೂರ್ಣಾಂಕಗಳು' ಆಗಿರುತ್ತವೆ. ಉದಾಹರಣೆಗೆ $\frac{೫}{೪}, \frac{೭}{೨}, \frac{೬}{೫}, \frac{೧೩}{೯}, \frac{೧೯}{೧೧} .....$

## ಸ್ವಾಧ್ಯಾಯ

(೧) ಕೆಳಗಿನ ಅಪೂರ್ಣಾಂಕಗಳಲ್ಲಿ ಅಂಶಾಧಿಕ ಅಪೂರ್ಣಾಂಕ ಮತ್ತು ಛೇದಾಧಿಕ ಅಪೂರ್ಣಾಂಕ ಹೀಗೆ ಗುಂಪು ಮಾಡಿರಿ.

$\frac{೩}{೫}, \frac{೨}{೬}, \frac{೬}{೫}, \frac{೩}{೮}, \frac{೫}{೪}, \frac{೭}{೯}, \frac{೪}{೩}$

| ಅಂಶಾಧಿಕ ಅಪೂರ್ಣಾಂಕ | | ಛೇದಾಧಿಕ ಅಪೂರ್ಣಾಂಕ | |
|---|---|---|---|
| | | | |

(೨) ಛೇದದ ವಿಚಾರ ಮಾಡಿ ಅಂಶಸ್ಥಾನದಲ್ಲಿ ಇಂತಹ ಸಂಖ್ಯೆಯನ್ನು ಬರೆಯಿರಿ, ಆಗ ಆ ಅಪೂರ್ಣಾಂಕವು ಅಂಶಾಧಿಕ ಆಗುವುದು?

$\frac{\square}{೪}, \frac{\square}{೫}, \frac{\square}{೩}, \frac{\square}{೭}, \frac{\square}{೨}, \frac{\square}{೪}$

(೩) ಅಂಶದ ವಿಚಾರ ಮಾಡಿ ಛೇದ ಸ್ಥಾನದಲ್ಲಿ ಇಂತಹ ಸಂಖ್ಯೆಯನ್ನು ಬರೆಯಿರಿ, ಆಗ ಆ ಅಪೂರ್ಣಾಂಕವು ಛೇದಾಧಿಕ ಆಗುವುದು.

$\frac{೧}{\square}, \frac{೪}{\square}, \frac{೨}{\square}, \frac{೫}{\square}, \frac{೩}{\square}, \frac{೬}{\square}$

(೪) ಅಂಶಾಧಿಕ ಅಪೂರ್ಣಾಂಕ ತಯಾರಾಗಲೂ ಬಿಟ್ಟ ಚೌಕಟ್ಟಿನಲ್ಲಿ ಯೋಗ್ಯ ಸಂಖ್ಯೆಯನ್ನು ಬರೆಯಿರಿ.

$\frac{\square}{೧೭}, \frac{೩೭}{\square}, \frac{೫೯}{\square}, \frac{೩}{\square}, \frac{\square}{\square}$

ಶಿಕ್ಷಕರಿಗಾಗಿ: ಗಣಿತ ಪೆಟ್ಟಿಗೆಯಲ್ಲಿಯ ಸಾಹಿತ್ಯಗಳ ಆಧಾರದಿಂದ ಅಂಶಾಧಿಕ ಮತ್ತು ಛೇದಾಧಿಕ ಅಪೂರ್ಣಾಂಕಗಳನ್ನು ತಯಾರಿಸುವ ರೂಢಿ ಮಾಡಿಸಿಕೊಳ್ಳಿರಿ.

# ೫. ಉದ್ದಳತೆ ಮತ್ತು ತೂಕ

## ಉದ್ದವನ್ನು ಅಳೆಯುವುದು

### ಚರ್ಚೆ ಮಾಡಿರಿ.

◉ ಕೆಳಗಿನ ಚಿತ್ರದ ನಿರೀಕ್ಷಣೆ ಮಾಡಿ ಕೊಟ್ಟ ಪ್ರಶ್ನೆಗಳ ಮೇಲೆ ಗೆಳೆಯರೊಂದಿಗೆ ಚರ್ಚೆ ಮಾಡಿರಿ.



(೧) ಶ್ಯಾಮ್ ಕಿಟಕಿಯ ಬದಿಯ (ಭುಜದ) ಉದ್ದವನ್ನು ಯಾವುದರ ಸಹಾಯದಿಂದ ಅಳೆಯುತ್ತಿದ್ದಾನೆ?

(೨) ಅನುಜ ಮತ್ತು ರೀನಾ ಮೇಜಿನ ಉದ್ದವನ್ನು ಅಳೆಯುವುದಕ್ಕಾಗಿ ಯಾವುದರ ಉಪಯೋಗ ಮಾಡುತ್ತಿದ್ದಾರೆ?

(೩) ಅನುಜ ಹಾಗೂ ರೀನಾ ಇಬ್ಬರೂ ಅಳೆದ ಮೇಜಿನ ಉದ್ದವು ಸಮಾನ ಆಗಿರುತ್ತದೆಯೇ? ಇರದಿದ್ದರೆ ಏಕೆ ಇರುವುದಿಲ್ಲ?

(೪) ತನುಶ್ರೀ ಬಾಗಿಲಿನ ಉದ್ದವನ್ನು ಯಾವುದರಿಂದ ಅಳೆಯುತ್ತಿದ್ದಾಳೆ?

(೫) ಅರ್ಣವ ಕಪ್ಪು ಹಲಗೆಯ (ಬೋರ್ಡ್) ಉದ್ದವನ್ನು ಯಾವುದರಿಂದ ಅಳೆಯುತ್ತಿದ್ದಾನೆ?

(೬) ಗೇಣು, ಹೆಜ್ಜೆ, ಕೈ, ಪೆನ್ಸಿಲ್, ಕಟ್ಟಿಗೆ, ಹಗ್ಗ ಅಳತೆ ಪಟ್ಟಿ ಇವುಗಳಲ್ಲಿ ಯಾವ-ಯಾವುದರಿಂದ ಉದ್ದವನ್ನು ಅಳೆದರೆ ಮತ್ತು ಯಾರಾದರೂ ಅಳೆದಾಗ ಅಳತೆ ಸಮನಾಗಿ ಬರುತ್ತದೆ?

**ಶಿಕ್ಷಕರಿಗಾಗಿ:** ಗೇಣು, ಪೆನ್ಸಿಲ್, ಹಗ್ಗ, ಕೈ, ಹೆಜ್ಜೆ ಈ ತೆರನಾದ ಬೇರೆ-ಬೇರೆ ಅಪ್ರಮಾಣಿತ ಸಾಧನಗಳ ಉಪಯೋಗ ಮಾಡಿ ಉದ್ದವನ್ನು ಅಳೆಯುವ ಕೃತಿ ವಿದ್ಯಾರ್ಥಿಗಳಿಂದ ಮಾಡಿಸಿಕೊಳ್ಳಿರಿ. ಅಪ್ರಮಾಣಿತ ಮೂಲಮಾನಗಳ ಕಡೆಯಿಂದ ಪ್ರಮಾಣಿತ ಮೂಲಮಾನಗಳ ಅವಶ್ಯಕತೆ, ಈ ವಿಷಯದ ಮೇಲೆ ಚರ್ಚೆ ಮಾಡಿಸಿರಿ.

## ◉ ಮೀಟರ್ ಪಟ್ಟಿಯಿಂದ ಅಳೆಯುವುದು.

ಬಟ್ಟೆಯನ್ನು ಅಳೆಯಲು ಅಂಗಡಿಕಾರನು ಯಾವಾಗಲೂ ಮೀಟರ್ ಪಟ್ಟಿಯನ್ನು ಉಪಯೋಗಿಸುತ್ತಾನೆ. ಇದರಿಂದಾಗಿ ಒಂದೇ ಬಟ್ಟೆಯ ಉದ್ದವನ್ನು ಯಾರಾದರೂ ಅಳೆದರೆ ಅದು ಸಮನಾಗಿರುತ್ತದೆ. ನಮಗೆ ೨ ಮೀಟರ್ ಬಟ್ಟೆಯನ್ನು ತೆಗೆದುಕೊಳ್ಳುವುದು ಇದ್ದರೆ, ನಾವು ಅದನ್ನು ಯಾವುದೇ ಅಂಗಡಿಯಲ್ಲಿ ಖರೀದಿಸಿದರೂ ಅದರ ಉದ್ದ ೨ ಮೀಟರ್‌ಗಳಷ್ಟೆ ಇರುತ್ತದೆ.




ಮೀಟರ್ ಪಟ್ಟಿಯ ಉದ್ದವು ಒಂದು ಮೀಟರ್ ಇರುತ್ತದೆ. 'ಮೀಟರ' ಇದು ಉದ್ದವನ್ನು ಅಳೆಯುವ ಪ್ರಮಾಣಿತ ಮೂಲಮಾನವಾಗಿದೆ. ಒಂದು ಮೀಟರ್‌ಕ್ಕಿಂತಲೂ ಕಡಿಮೆ ಉದ್ದ ಇದ್ದರೆ, ಅದನ್ನು 'ಸೆಂಟಿಮೀಟರ್' ಈ ಮೂಲಮಾನದಲ್ಲಿ ಅಳೆಯುತ್ತಾರೆ.

೧ ಮೀಟರ್‌ದ ೧೦೦ ಸಮಾನ ಭಾಗ ಮಾಡಿದರೆ, ಪ್ರತಿಯೊಂದು ಭಾಗವು ಒಂದು ಸೆಂಟಿಮೀಟರ್ ಉದ್ದವಾಗಿರುತ್ತದೆ.

**೧ ಮೀಟರ್‌ದ = ೧೦೦ ಸೆಂಟಿಮೀಟರ್**

### ಕೃತಿ ಮಾಡಿರಿ.

**ನಾವು ೧ ಮೀಟರ್ ಉದ್ದದ ಹಗ್ಗವನ್ನು ತಯಾರಿಸೋಣ.**




**ಶಿಕ್ಷಕರಿಗಾಗಿ:** ವಿದ್ಯಾರ್ಥಿಗಳಿಂದ ೧ ಮೀಟರ್ ಉದ್ದದ ಒಂದು ಹಗ್ಗವನ್ನು ತಯಾರಿಸಿಕೊಳ್ಳಿರಿ. ಹಗ್ಗದ ಸಹಾಯದಿಂದ ವಿವಿಧ ವಸ್ತುಗಳ ಉದ್ದ ಮೀಟರ್ ಮತ್ತು ಮೀಟರ್‌ಕ್ಕಿಂತಲೂ ಕಡಿಮೆ ಉದ್ದದ ವಸ್ತುಗಳ ಉದ್ದ ಸೆಂಟಿಮೀಟರ್‌ದಲ್ಲಿ ಹೇಗೆ ಅಳೆಯಬೇಕು ಎಂಬುದರ ರೂಢಿ ಮಾಡಿಸಬೇಕು.

**⊙ ನೀವು ತಯಾರಿಸಿದ ಹಗ್ಗದಿಂದ ವಸ್ತುಗಳ ಉದ್ದವನ್ನು ಅಳೆದು ಕೋಷ್ಟಕ ಪೂರ್ಣ ಮಾಡಿ.**

| ವಸ್ತುಗಳು | ಅಂದಾಜು ಉದ ಒಂದು ಮೀಟರ್‌ಗಿಂತಲೂ ಕಡಿಮೆ/ಹೆಚ್ಚು/ಸಮಾನ | ಪ್ರತ್ಯಕ್ಷ ಅಳೆದು ಖಚಿತ ಮಾಡಿಕೊಳ್ಳಿರಿ |
|---|---|---|
| ಮೇಜು | ........................ | ........................ |
| ಕಿಟಕಿ | ........................ | ........................ |
| ಕುರ್ಚಿ | ........................ | ........................ |

## ಒಂದು ಮೀಟರ್‌ದ ಕಾಲುಭಾಗ, ಅರ್ಧ, ಮುಕ್ಕಾಲು ಭಾಗ



**ತಿಳಿದುಕೊಳ್ಳಿರಿ.**



ಇದು ಒಂದು ಮೀಟರ್ ಉದ್ದದ ಹಗ್ಗವಿದೆ.



ಎರಡು ತುದಿಗಳನ್ನು ಕೂಡಿಸಿದ್ದೇನೆ. ಈಗ ಅರ್ಧ ಮೀಟರ್ ಉದ್ದದ ಹಗ್ಗ ತಯಾರಾಯಿತು. ಅರ್ಧ ಮೀಟರ್‌ದ ಮೇಲೆ ಗುರುತು ಹಾಕಿರಿ.



ಅರ್ಧ ಮೀಟರ್ ಉದ್ದದ ಹಗ್ಗಿನ ಎರಡೂ ತುದಿಗಳನ್ನು ಮತ್ತೆ ಕೂಡಿಸಿದರೆ, ಕಾಲುಭಾಗ ಮೀಟರ್‌ದ ಹಗ್ಗ ತಯಾರಾಯಿತು. ಕಾಲುಭಾಗದ ಮೇಲೆ ಗುರುತು ಹಾಕಿರಿ.



ಹಗ್ಗವನ್ನು ಮತ್ತೆ ಸರಳ ಮಾಡಿದರೆ ಅದರ ಮೇಲೆ ೩ ಗುರುತುಗಳು ಕಾಣಿಸುತ್ತವೆ.



**ಮಾಡಿ ನೋಡಿರಿ.**

(೧) ಒಂದು ಮೀಟರ್, ಅರ್ಧ ಮೀಟರ್ ಮತ್ತು ಕಾಲು ಮೀಟರ್ ಹೀಗೆ ಗುರುತಿಸಿದ ಹಗ್ಗವನ್ನು ಉಪಯೋಗಿಸಿ ಬೇರೆ-ಬೇರೆ ವಸ್ತುಗಳ ಉದ್ದ ಕಾಲು ಭಾಗ, ಅರ್ಧ ಮತ್ತು ಒಂದು ಮೀಟರ್‌ಗಿಂತಲೂ ಕಡಿಮೆ ಇದೆಯೋ ಅಥವಾ ಹೆಚ್ಚು ಇದೆ ಎಂಬುದನ್ನು ನಿರ್ಧರಿಸಿರಿ. ಯೋಗ್ಯ ಚೌಕಟ್ಟಿನಲ್ಲಿ ☑ ಗುರುತು ಮಾಡಿರಿ.

| ವಸ್ತುವಿನ ಹೆಸರು | ಕಾಲು ಭಾಗ ಮೀಟರಗಿಂತಲೂ | | ಅರ್ಧ ಮೀಟರಗಿಂತಲೂ | | ಒಂದು ಮೀಟರಗಿಂತಲೂ | |
|---|---|---|---|---|---|---|
| | ಕಡಿಮೆ | ಹೆಚ್ಚು | ಕಡಿಮೆ | ಹೆಚ್ಚು | ಕಡಿಮೆ | ಹೆಚ್ಚು |
| | | | | | | |
| | | | | | | |
| | | | | | | |
| | | | | | | |



**ಶಿಕ್ಷಕರಿಗಾಗಿ:** ಒಂದು ಮೀಟರ್ ಉದ್ದದ ಹಗ್ಗ ತೆಗೆದುಕೊಳ್ಳಿರಿ. ಅದನ್ನು ಉದ್ದ, ಅಡ್ಡ, ವಕ್ರ, ಮಾಡಿ ಅದರ ಉದ್ದವನ್ನು ಅಳೆಯಿರಿ. ಒಂದು ಮೀಟರ್ ಉದ್ದದ ಸಮಾನ ಉದ್ದವಿರುವ ಎರಡು ಭಾಗ ಮಾಡಿರಿ. ಆ ಸಮಾನ ಭಾಗದ ಮತ್ತೆ ಎರಡು ಸಮಾನ ಭಾಗ ಮಾಡಿರಿ. ತಯಾರಾದ ನಾಲ್ಕು ಭಾಗಗಳನ್ನು ಒಂದರ ನಂತರ ಒಂದು ಜೋಡಿಸಿ ಅದರ ಉದ್ದವನ್ನು ಅಳೆಯಿರಿ.

## ಅಂತರ ಅಳೆಯುವುದು



ಎರಡು ಮರಗಳ ಬುಡದ ನಡುವಿನ ಅಂತರವನ್ನು ಮೀಟರ್ ಹಗ್ಗದ ಸಹಾಯದಿಂದ ಅಳೆದರೆ, ಆ ಅಂತರವು (ಉದ್ದ) ೫ ಮೀಟರ್‌ಗಿಂತಲೂ ಹೆಚ್ಚು ಇದೆ. ಈಗ ಆ ಅಂತರವನ್ನು ಮೀಟರ್ ಪಟ್ಟಿಯ ಸಹಾಯದಿಂದ ಮೀಟರ್ ಮತ್ತು ಸೆಂಟಿಮೀಟರ್‌ದಲ್ಲಿ ಮತ್ತೆ ಅಳೆಯುವಾ. ಎರಡು ಮರಗಳಲ್ಲಿಯ ಅಂತರ ೫ ಮೀಟರ್‌ಗಿಂತಲೂ ಹೆಚ್ಚು ಇದೆ. ಆ ಉಳಿದ ಅಂತರವನ್ನು ಅಳೆಯುವ ಪಟ್ಟಿಯ ಸಹಾಯದಿಂದ ಅಳೆಯುವಾ. ಎರಡು ಮರಗಳ ಬುಡಗಳ ನಡುವಿನ ಅಂತರ ೫ ಮೀಟರ್ ೪೦ ಸೆಂಟಿಮೀಟರ್ ಇದೆ. ಕಡಿಮೆ ಅಂತರವನ್ನು ಅಳೆಯಲು ಅಳತೆ ಪಟ್ಟಿ ಉಪಯೋಗಿಸುತ್ತಾರೆ. ಹೆಚ್ಚು ಉದ್ದವನ್ನು ಅಳೆಯಲು ಮೀಟರ್ ಹಾಗೂ ಕಡಿಮೆ ಉದ್ದವನ್ನು ಅಳೆಯಲು ಸೆಂಟಿಮೀಟರ್ ಈ ಮೂಲಮಾನಗಳ ಬಳಕೆ ಮಾಡುತ್ತಾರೆ.

### ಕೃತಿ ಮಾಡಿರಿ.

(೧) ಕೆಳಗಿನ ಅಂತರ/ಉದ್ದವನ್ನು ಸೆಂಟಿಮೀಟರ್‌ನಲ್ಲಿ ಅಳೆಯುತ್ತಿರಿ ಅಥವಾ ಮೀಟರ್‌ದಲ್ಲಿ ಅಳೆಯುತ್ತಿರಿ ಎಂಬುದನ್ನು ಬರೆಯಿರಿ.

| | | | |
|---|---|---|---|
| ಪೆನ್ಸಿಲಿನ ಉದ್ದ | | ವಹಿಯ ಉದ್ದ | |
| ಎರಡು ಮನೆಗಳ ನಡುವಿನ ಅಂತರ | | ಮನೆಯಿಂದ ಶಾಲೆಯ ಅಂತರ | |
| ರಸ್ತೆಯ ಅಗಲ | | ತರಗತಿಯಿಂದ ಮೈದಾನದ ಅಂತರ | |

(೨) ಮೈದಾನದಲ್ಲಿ/ಖಾಲಿ ಸ್ಥಳದಲ್ಲಿ ಹೋಗಿ ಒಂದು ನಿಶ್ಚಿತ ಸ್ಥಳದಿಂದ ಒಂದು ರಿಂಗ್ ದೂರದಲ್ಲಿ ಎಸೆಯಿರಿ ಮತ್ತು ಆ ರಿಂಗ್ ಎಷ್ಟು ದೂರ ಬಿದ್ದಿದೆ, ಆ ಅಂತರವನ್ನು ಮೀಟರ್ ಪಟ್ಟಿಯ ಸಹಾಯದಿಂದ ಅಳೆಯಿರಿ.

(೩) ತರಗತಿಯ ಬಾಗಿಲು ಮತ್ತು ಕಪ್ಪು ಹಲಗೆಯ ನಡುವಿನ ಅಂತರವನ್ನು ಮೀಟರ್ ಪಟ್ಟಿಯಿಂದ ಅಳೆಯಿರಿ.

೪) ತರಗತಿಯ ಉದ್ದವನ್ನು ಮೀಟರ್ ಪಟ್ಟಿಯಿಂದ ಅಳೆಯಿರಿ.



## ತೂಕ ಅಳೆಯುವುದು

### ⦿ ಭಾರ ಅಥವಾ ಹಗುರ?

ಭಾವನಾ ಒಂದು ಕೈಯಲ್ಲಿ ಪಠ್ಯಪುಸ್ತಕ ಮತ್ತು ಇನ್ನೊಂದು ಕೈಯಲ್ಲಿ ಪೆನ್ ಹಿಡಿದಿದ್ದಾಳೆ.

ಭಾವನಾಳ ಕೈಯಲ್ಲಿರುವ ಭಾರವಾದ ವಸ್ತುವಿನ ಕೆಳಗೆ ✓ ಹೀಗೆ ಗುರುತು ಮಾಡಿರಿ.

◉ ಕೆಳಗೆ ಕೊಟ್ಟ ವಸ್ತುಗಳ ಸಂದರ್ಭದಲ್ಲಿ ನಿಮ್ಮ ಅನಿಸಿಕೆ ಹಾಗೂ ನಿಮ್ಮ ಗೆಳೆಯನ ಅನಿಸಿಕೆಯನ್ನು ಯೋಗ್ಯ ಶಬ್ದದ ಸುತ್ತಲೂ ◯ ಮಾಡಿರಿ.

| ಹೋಲಿಕೆ ಮಾಡಲು ವಸ್ತುಗಳು | ನನ್ನ ಅನುಭವ | ನನ್ನ ಗೆಳೆಯನ ಅನುಭವ |
|---|---|---|
|  | ಕಂಪಾಸ್ ಪೆಟ್ಟಿಗೆಗಿಂತ ಊಟದ ಡಬ್ಬಿಯು ಭಾರ/ಹಗುರಾಗಿದೆ. | ಕಂಪಾಸ್ ಪೆಟ್ಟಿಗೆಗಿಂತ ಊಟದ ಡಬ್ಬಿಯು ಭಾರ/ಹಗುರಾಗಿದೆ. |
|  | ಊಟದ ಡಬ್ಬಿಯು ಶಾಲೆಯ ಬ್ಯಾಗ್‌ಗಿಂತಲೂ ಭಾರ/ಹಗುರಾಗಿದೆ. | ಊಟದ ಡಬ್ಬಿಯು ಶಾಲೆಯ ಬ್ಯಾಗ್‌ಗಿಂತಲೂ ಭಾರ/ಹಗುರಾಗಿದೆ. |
|  | ಕ್ರಿಕೆಟ್ ಬ್ಯಾಟ್ ಕ್ರಿಕೆಟ್ ಚೆಂಡುಗಿಂತಲೂ ಭಾರ/ಹಗುರಾಗಿದೆ. | ಕ್ರಿಕೆಟ್ ಬ್ಯಾಟ್ ಕ್ರಿಕೆಟ್ ಚೆಂಡುಗಿಂತಲೂ ಭಾರ/ಹಗುರಾಗಿದೆ. |
|  | ಬ್ಯಾಟ್‌ಗಿಂತಲೂ ವಹಿ ಭಾರ/ಹಗುರಾಗಿದೆ. | ಬ್ಯಾಟ್‌ಗಿಂತಲೂ ವಹಿ ಭಾರ/ಹಗುರಾಗಿದೆ. |



## ಮಾಡಿ ನೋಡಿರಿ.



◉ **ವಹಿಯ ತೂಕ ಮಾಡಿರಿ.**

(೧) ಪ್ರತಿಯೊಬ್ಬರೂ ಬೇರೆ-ಬೇರೆ ಆಕಾರಗಳ ೧೫ ರಿಂದು ೨೦ ಗೋಲಿಗಳನ್ನು ತೆಗೆದುಕೊಳ್ಳಿರಿ.

(೨) ತಕ್ಕಡಿಯ ಒಂದು ತಟ್ಟೆಯಲ್ಲಿ ವಹಿ ಇಡಿ ಮತ್ತು ಎರಡನೆಯ ತಟ್ಟೆಯಲ್ಲಿ ಗೋಲಿಗಳನ್ನು ಇಡುತ್ತಾ ಹೋಗಿ. ಎರಡೂ ತಟ್ಟೆಗಳು ಸಮಾನವಾಗುವವರೆಗೆ ಈ ಕ್ರಿಯೆಯನ್ನು ಮಾಡಿರಿ.

(೩) ಆ ವಹಿಯ ತೂಕ ಮಾಡಲು ಎಷ್ಟು ಗೋಲಿಗಳು ಬೇಕಾದವು? ಅದೇ ವಹಿಯ ತೂಕ ಮಾಡಲು ಗೆಳೆಯನು ತಂದ ಗೋಲಿಗಳಲ್ಲಿ ಎಷ್ಟು ಗೋಲಿಗಳು ಬೇಕಾದವು? ಇವುಗಳನ್ನು ಬರೆದಿಡಿರಿ.

◉ **ಕೆಳಗಿನ ಕೋಷ್ಟಕವನ್ನು ಪೂರ್ಣ ಮಾಡಿರಿ.**

| ಗೆಳೆಯರ ಹೆಸರುಗಳು | ಒಂದು ವಹಿಯ ತೂಕ ಮಾಡಲು ಬೇಕಾದ ಗೋಲಿಗಳು |
|---|---|
| ಅನುಜಾ | ೧೫ ಗೋಲಿಗಳು |
| ಮೀನಾ | ೨೦ ಗೋಲಿಗಳು |
| ......... | ☐ ಗೋಲಿಗಳು |



## ಚರ್ಚೆ ಮಾಡಿರಿ.

◉ ಅನುಜಾ ಮಾಡಿದ ವಹಿಯ ತೂಕ ೧೫ ಗೋಲಿಗಳಿದ್ದರೆ, ಮೀನಾಳು ಮಾಡಿದ ತೂಕ ೨೦ ಗೋಲಿಗಳಿದ್ದದೆ ಹೀಗೇಕೆ ಆಗಿರಬಹುದು?

◉ ವಹಿಯ ತೂಕ ಮಾಡಲು ಪ್ರತಿಯೊಬ್ಬರು ಉಪಯೋಗಿಸಿದ ಗೋಲಿಗಳ ಸಂಖ್ಯೆ, ಇದು ಗೋಲಿಗಳ ಆಕಾರ, ಅವು ಯಾವುದರಿಂದ ತಯಾರಾಗಿವೆ (ಗಾಜು, ಸೀಸ, ಇತ್ಯಾದಿ) ಈ ಅಂಶಗಳ ಮೇಲೆ ಚರ್ಚೆ ಮಾಡಿರಿ.

◉ ಅನುಜಾಳು ವಹಿಯ ತೂಕ ಮಾಡಲು ಉಪಯೋಗಿಸಿದ ಗೋಲಿಗಳನ್ನು ಉಪಯೋಗಿಸಿ ಬೇರೆಯವರು ಅದೇ ವಹಿಯ ತೂಕ ಮಾಡಿದರೆ, ತೂಕದಲ್ಲಿ ವ್ಯತ್ಯಾಸವಾಗುತ್ತದೆಯೇ?



**ಶಿಕ್ಷಕರಿಗಾಗಿ:** ಭಾರವಾದ ವಸ್ತುಗಳು ಅವುಗಳ ತೂಕದ ಕಾರಣದಿಂದಾಗಿ ಕೆಳಗಿನ ದಿಕ್ಕಿಗೆ ಹೋಗುತ್ತವೆ, ಎಂಬುದನ್ನು ವಿದ್ಯಾರ್ಥಿಗಳು ಅರ್ಥಮಾಡಿಕೊಳ್ಳುವುದು ಅಗತ್ಯವಾಗಿದೆ. ವಿದ್ಯಾರ್ಥಿಗಳಿಂದ ತಕ್ಕಡಿಯನ್ನು ತಯಾರಿಸಿಕೊಳ್ಳಿರಿ. ತಕ್ಕಡಿಯನ್ನು ಉಪಯೋಗಿಸಿ ವಿವಿಧ ವಸ್ತುಗಳ ತೂಕ ಮಾಡುವ ಅನುಭವ ನೀಡಿರಿ ಮತ್ತು ರೂಢಿ ಮಾಡಿಸಿಕೊಳ್ಳಿರಿ..

## ನನಗೆ ತಿಳಿಯಿತು.

ಒಂದೇ ವಸ್ತುವಿನ ತೂಕವನ್ನು ಒಂದೇ ಅಳತೆಯ ಸಾಧನದ ಸಹಾಯದಿಂದ ಯಾರೇ ಮಾಡಿದರೂ ಅದು ಸಮನಾಗಿಯೇ ಇರುತ್ತದೆ. ತೂಕವನ್ನು ಅಳೆಯಲು ಪ್ರಮಾಣಿತ ಮೂಲಮಾನಗಳು ಮತ್ತು ಪ್ರಮಾಣಿತ ಅಳತೆಗಳು ಇರುತ್ತವೆ.

ಕಿಲೋಗ್ರಾಮ್ ಇದು ತೂಕವನ್ನು ಅಳೆಯುವ ಪ್ರಮಾಣಿತ ಮೂಲಮಾನ ಇದೆ.

**೧ ಕಿಲೋಗ್ರಾಂ = ೧೦೦೦ ಗ್ರಾಂ**

### ತೂಕ ಅಳೆಯುವ ವಿವಿಧ ಸಾಧನಗಳು









ದೈನಂದಿನ ವ್ಯವಹಾರದಲ್ಲಿ ವಸ್ತುಗಳ ತೂಕವನ್ನು ಅಳೆಯಲು ಈ ಅಳತೆಗಳನ್ನು ಬಳಸಲಾಗುತ್ತದೆ.

**ಚಿತ್ರಗಳ ನಿರೀಕ್ಷಣೆ ಮಾಡಿರಿ.**




**ಶಿಕ್ಷಕರಿಗಾಗಿ:** ತಕ್ಕಡಿ ಮತ್ತು ೧ ಕಿಲೋ ತೂಕದ ಉಪ್ಪಿನ ಪುಡಿಕೆ ಉಪಯೋಗಿಸಿ ಮಕ್ಕಳಿಗೆ ೧ ಕಿಲೋ, ಅರ್ಧ ಕಿಲೋ, ಕಾಲು ಭಾಗ ಕಿಲೋ ಇವುಗಳ ಪ್ರತ್ಯಕ್ಷ ಅನುಭವ ನೀಡಬೇಕು.



## ಕೃತಿ ಮಾಡಿರಿ.

(೧) ನಿಮ್ಮ ಪೋಷಕರ ಸಹಾಯದಿಂದ ಇಂತಹ ವಸ್ತುಗಳನ್ನು ತೆಗೆದುಕೊಳ್ಳಿರಿ. ಅವುಗಳ ತೂಕ ೧ ಕಿಲೋಗ್ರಾಂ ಇರಬೇಕು ಮತ್ತು ಪ್ರತ್ಯಕ್ಷ ಕೈಯಿಂದ ಎತ್ತಿ ಅದರ ಅನುಭವ ತೆಗೆದುಕೊಳ್ಳಿರಿ. ೧ ಕಿಲೋಗ್ರಾಂ ತೂಕ ವಿರುವ ಇನ್ನೂ ಯಾವ-ಯಾವ ವಸ್ತುಗಳು ಇರಬಹುದು ಎಂಬುದನ್ನು ಊಹಿಸಿರಿ.

(೨) ದಿನನಿತ್ಯ ಬಳಕೆಯಲ್ಲಿಯ ಯಾವ ವಸ್ತುಗಳ ಮೇಲೆ ೧ ಕಿಲೋಗ್ರಾಂ ಎಂದು ಬರೆದಿರುತ್ತದೆಯೋ ಅಂತಹ ವಸ್ತುಗಳ ಹೆಸರುಗಳನ್ನು ಬರೆಯಿರಿ.

.................... .................... .................... ....................

.................... .................... .................... ....................

ಮೊದಲಿನ ಕಾಲದಲ್ಲಿ ತೂಕವನ್ನು ಅಳೆಯುವ ಸಲುವಾಗಿ ಮಣ, ಸೇರು, ತೋಲಿ ಮತ್ತು ಗುಂಜಿ ಎಂಬ ಮೂಲಮಾನಗಳನ್ನು ಉಪಯೋಗಿಸುತ್ತಿದ್ದರು.

## ಸ್ವಾಧ್ಯಾಯ

**೧) ಕೆಳಗೆ ಕೊಟ್ಟ ವಸ್ತುಗಳ ತೂಕ ೧ ಕಿಲೋಗ್ರಾಂಕ್ಕಿಂತ ಕಡಿಮೆ ಅಥವಾ ಹೆಚ್ಚು ಇದೆ, ಎಂಬುದನ್ನು ಮೊದಲು ಊಹಿಸಿ ಹಾಗೂ ನಂತರ ಪ್ರತ್ಯಕ್ಷ ಅಳೆದು ನೋಡಿರಿ. ವಸ್ತುಗಳ ಕೆಳಗೆ ಕೊಟ್ಟ ಚೌಕಟ್ಟಿನಲ್ಲಿ ಯೋಗ್ಯ ಸ್ಥಳದಲ್ಲಿ ✓ ಈ ಗುರುತು ಹಾಕಿರಿ.**

| | ನೀರಿನಿಂದ ತುಂಬಿದ ಬಕೇಟ | ಪುಸ್ತಕ | ಬೊಗಸೆ ತುಂಬ ಅಕ್ಕಿ | ಫುಟಬಾಲ್ |
|---|---|---|---|---|
| ವಸ್ತುಗಳು |  |  |  |  |
| ಅಂದಾಜು ೧ ಕಿಲೋಗ್ರಾಂಕ್ಕಿಂತಲೂ ಕಡಿಮೆ/ಹೆಚ್ಚು | | | | |
| ಪ್ರತ್ಯಕ್ಷ ಅಳಿದು ೧ ಕಿಲೋಗ್ರಾಂಕ್ಕಿಂತಲೂ ಹೆಚ್ಚು/ಕಡಿಮೆ | | | | |

**೨) ಕೆಳಗಿನ ತಕ್ಕಡಿಗಳನ್ನು ನೋಡಿರಿ ಮತ್ತು ಅದರ ಕೆಳಗೆ ಕೊಟ್ಟ ವಾಕ್ಯದಲ್ಲಿಯ ಯೋಗ್ಯ ಶಬ್ದದ ಸೂತ್ತಲೂ ಗೋಲು ಹಾಕಿರಿ.**



- ಬೇಳೆಯ ಒಂದು ಪ್ಯಾಕೇಟಿನ ತೂಕ ೧ ಕಿಲೋ/ಅರ್ಧ ಕಿಲೋ ಇದೆ.

- ಬೇಳೆಯ ಒಂದು ಪ್ಯಾಕೇಟಿನ ತೂಕ ೧ ಕಿಲೋ/ಅರ್ಧ ಕಿಲೋ/ಕಾಲು ಭಾಗ ಕಿಲೋ ಇದೆ.



# ೬. ಮಾಹಿತಿಯ ವ್ಯವಸ್ಥಾಪನೆ

## ಕೃತಿ ಮಾಡಿರಿ.

'ಆನಂದ ಮೇಳ'ಕ್ಕಾಗಿ ವಿವಿಧ ಬಣ್ಣದ ಬಟ್ಟೆಗಳನ್ನು ಧರಿಸಿ ಮಕ್ಕಳು ಶಾಲೆಗೆ ಬಂದಿದ್ದರು. ಆ ಸಮಯದಲ್ಲಿ ಮಕ್ಕಳು ಧರಿಸಿದ ಬಟ್ಟೆಗಳ ಬಣ್ಣದ ನೋಂದಣಿಯನ್ನು ಮುನೀಷಾ, ನೀರಜ ಮತ್ತು ಸಲ್ಮಾ ಇವರು ಮಾಡಿದ್ದಾರೆ.












(೧) ಮನೀಷಾ, ಸಲ್ಮಾ ಮತ್ತು ನೀರಜ ಇವರು ಸಂಕಲನ (ಸಂಗ್ರಹಿಸಿದ) ಮಾಹಿತಿಯ ವರ್ಗೀಕರಣ ಮಾಡುವಾಗ ತಾಳೆಯ ಗುರುತುಗಳ ಬಳಕೆ ಮಾಡಿದ್ದಾರೆ. ಆ ತಾಳೆಯ ಗುರುತುಗಳನ್ನು ಎಣಿಸಿ ಮಕ್ಕಳ ಸಂಖ್ಯೆಯನ್ನು ಬರೆಯಿರಿ.

| ಬಟ್ಟೆಗಳ ಬಣ್ಣ | ಕೆಂಪು | ಹಸಿರು | ಹಳದಿ | ನೀಲಿ | ಒಟ್ಟು ವಿದ್ಯಾರ್ಥಿಗಳು |
|---|---|---|---|---|---|
| ತಾಳೆಯ ಗುರುತುಗಳು | ||||| | | ||||| ||| | |||| | ||||| ||||| | |
| ವಿದ್ಯಾರ್ಥಿಗಳ ಸಂಖ್ಯೆ | ೬ | .......... | .......... | .......... | .......... |

**ಮನಿಷಾ** : ಒಟ್ಟು ೨೮ ವಿದ್ಯಾರ್ಥಿಗಳು ಇದ್ದಾರೆ. ಅದರಲ್ಲಿ ನೀಲಿ ಬಣ್ಣದ ಬಟ್ಟೆಯನ್ನು ಧರಿಸಿದ ಮಕ್ಕಳ ಸಂಖ್ಯೆ ಎಲ್ಲಕ್ಕೂ ಹೆಚ್ಚಿಗೆ ಅಂದರೆ ೧೦ ಇದೆ.

**ಸಲ್ಮಾ** : ಹಳದಿ ಬಣ್ಣದ ಬಟ್ಟೆ ಧರಿಸಿದ ಮಕ್ಕಳ ಸಂಖ್ಯೆ ಎಲ್ಲಕ್ಕೂ ಕಡಿಮೆ ಎಂದರೆ ೪ ಇದೆ.

**ಮನಿಷಾ** : ಹಸಿರು ಬಣ್ಣದ ಬಟ್ಟೆಯನ್ನು ಧರಿಸಿದ ಮಕ್ಕಳ ಸಂಖ್ಯೆಯು ಕೆಂಪು ಬಣ್ಣದ ಬಟ್ಟೆ ಧರಿಸಿದ ಮಕ್ಕಳಿಗಿಂತ ೨ ರಿಂದ ಹೆಚ್ಚಿಗಿದೆ.

**ಶಿಕ್ಷಕರು** : ನೀವು ಈ ಮಾಹಿತಿಯನ್ನು ಯಾವುದರ ಮೇಲಿಂದ ಸಂಗ್ರಹಿಸಿದ್ದೀರಿ?

**ಸಲ್ಮಾ** : ನಾವು ೨೮ ಮಕ್ಕಳ ಬಟ್ಟೆಯ ಬಣ್ಣವನ್ನು ಗಮನಿಸಿ ಈ ಕೋಷ್ಟಕವನ್ನು ತಯಾರಿಸಿದ್ದೇವು. ಒಂದು ಮಗುವಿಗೆ ಒಂದು ಲಂಬ ರೇಷೆ ಉಪಯೋಗಿಸಿದ್ದೇವೆ.

**ನೀರಜ** : ಹೌದು ಈ ರೇಷೆಗಳನ್ನು ಎಣಿಸಿ ಅವುಗಳನ್ನು ಸಂಖ್ಯೆಯ ರೂಪದಲ್ಲಿ ಬರೆದೇವು.

**ಶಿಕ್ಷಕರು** : ಈ ರೇಷೆಗಳಿಗೆ 'ತಾಳೆಯ ಗುರುತು' ಎನ್ನುತ್ತಾರೆ.

ಶಾಲೆಯ ಮಕ್ಕಳಿಗಾಗಿ ಒಂದು ಕ್ಷೇತ್ರಭೇಟ್ಟಿಯನ್ನು ಆಯೋಜಿಸಿತ್ತು. ಕ್ಷೇತ್ರಭೇಟ್ಟಿ ಸಲುವಾಗಿ ಬರುವಾಗ ಪ್ರತಿಯೊಬ್ಬರು ತಮ್ಮ ಊಟದ ಡಬ್ಬಿಯ ಜೊತೆಗೆ ತಮಗೆ ಇಷ್ಟವಾದ ಒಂದು ಹಣ್ಣನ್ನು ತರಬೇಕೆಂದು ನಿರ್ಧರಿಸಲಾಗಿತ್ತು.



(೧) ಮೇಲಿನ ಚಿತ್ರದ ನೀರಿಕ್ಷಣೆ ಮಾಡಿರಿ. ಅದರಲ್ಲಿ ತೋರಿಸಿದ ಮಾಹಿತಿಯ ಮೇಲೆ ಚರ್ಚೆ ಮಾಡಿರಿ. ಕೋಷ್ಟಕದಲ್ಲಿಯ ಮಾಹಿತಿಯ ಮೇಲಿಂದ ಕೆಳಗಿನ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.

| ಹಣ್ಣುಗಳ ಹೆಸರುಗಳು | ಚಿಕ್ಕೂ | ಪೇರಲ | ಬಾಳೆ ಹಣ್ಣು | ಕಿತ್ತಳೆ |
|---|---|---|---|---|
| ಇಷ್ಟವಾದ ಹಣ್ಣು ತಂದ ಮಕ್ಕಳ ಸಂಖ್ಯೆ | ೫ | ೨ | ೩ | ೪ |

- ಕ್ಷೇತ್ರ ಭೇಟ್ಟಿಯ ಸಲುವಾಗಿ ಒಟ್ಟು ಎಷ್ಟು ಮಕ್ಕಳು ಬಂದಿದ್ದಾರೆ? ☐
- ಚಿಕ್ಕು ತಂದ ಮಕ್ಕಳ ಸಂಖ್ಯೆ ☐
- ಎಲ್ಲಕ್ಕೂ ಹೆಚ್ಚು ಮಕ್ಕಳು ತಂದಿರುವ ಹಣ್ಣು............................ ಇದೆ.
- ಎಲ್ಲಕ್ಕೂ ಕಡಿಮೆ ಮಕ್ಕಳು ತಂದಿರುವ ಹಣ್ಣು ☐ ಇದೆ.

(೨) ಬಿಟ್ಟ ಸ್ಥಳಗಳಲ್ಲಿ ಹೆಚ್ಚು/ಕಡಿಮೆ/ಸಮಾನ ಇವುಗಳಲ್ಲಿ ಯೋಗ್ಯ ಶಬ್ದವನ್ನು ಬರೆಯಿರಿ.

- ಚಿಕ್ಕು ಇಷ್ಟಪಡುವ ಮಕ್ಕಳಿಗಿಂತಲೂ ಪೇರಲ ಇಷ್ಟಪಡುವ ಮಕ್ಕಳ ಸಂಖ್ಯೆ .......................... ಇದೆ.
- ಬಾಳೆ ಹಣ್ಣು ಇಷ್ಟಪಡುವ ಮಕ್ಕಳಿಗಿಂತಲೂ ಚಿಕ್ಕೂ ಇಷ್ಟಪಡುವ ಮಕ್ಕಳ ಸಂಖ್ಯೆ .................... ಇದೆ.
- ಪೇರಲ ಇಷ್ಟಪಡುವ ಮಕ್ಕಳಿಗಿಂತಲೂ, ಕಿತ್ತಳೆ ಇಷ್ಟಪಡುವ ಮಕ್ಕಳ ಸಂಖ್ಯೆ ........................ ಇದೆ.



**ಶಿಕ್ಷಕರಿಗಾಗಿ:** ಸಂಗ್ರಹಿಸಿದ ಮಾಹಿತಿಯ ವರ್ಗೀಕರಣ ಮಾಡಲು ಉಪಯೋಗಿಸಿದ ರೇಷೆಗಳಿಗೆ ತಾಳೆಯ ಗುರುತುಗಳು ಎನ್ನುತ್ತಾರೆ. ರೇಷೆ ಎಳೆಯುವಾಗ ಪ್ರತಿಯೊಂದು ೫ ರೇಷೆಗಳ ನಂತರ ಸ್ವಲ್ಪ ಸ್ಥಳವನ್ನು ಬಿಡಬೇಕೆಂದು ಹೇಳಿರಿ, 'ತಾಳೆಯ ಗುರುತು' ಈ ಸಂಕಲ್ಪನೆ ಹಳೆಯ ಕಾಲದ ಗಣಿತದಲ್ಲಿ ಹೇಗೆ ಉದಯಕ್ಕೆ ಬಂದಿತು, ಇದನ್ನು ಕಥೆಯ ರೂಪದಲ್ಲಿ ಹೇಳಿರಿ.

## ಸ್ವಾಧ್ಯಾಯ

(೧) ಚಿತ್ರದ ಮೇಲಿಂದ ತಯಾರಿಸಿದ ಕೋಷ್ಟಕದ ನೀರಿಕ್ಷಣೆ ಮಾಡಿರಿ ಹಾಗೂ ಮುಂದಿನ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.




| ಒಂದು ವರ್ಗದಲ್ಲಿಯ ವಿದ್ಯಾರ್ಥಿಗಳು ಶಾಲೆಗೆ ಬರಲು ಬಳಕೆ ಮಾಡಿದ ಸಾಧನಗಳು | ವಿದ್ಯಾರ್ಥಿಗಳ ಸಂಖ್ಯೆ |
|---|---|
|  | ೬ |
|  | ೧೫ |
|  | ೫ |
|  | ೨ |
|  | ೪ |

- ಎಲ್ಲಕ್ಕೂ ಹೆಚ್ಚು ವಿದ್ಯಾರ್ಥಿಗಳು ..................... ಮೂಲಕ ಬರುತ್ತಾರೆ.
- ಎಲ್ಲಕ್ಕೂ ಕಡಿಮೆ ವಿದ್ಯಾರ್ಥಿಗಳು ................... ಮೂಲಕ ಬರುತ್ತಾರೆ.
- ಸ್ಕೂಲ್ ಬಸ್ಸಿನಲ್ಲಿ ಬರುವ ವಿದ್ಯಾರ್ಥಿಗಳ ಸಂಖ್ಯೆ, ಆಟೋರಿಕ್ಷಾದಲ್ಲಿ ಬರುವ ವಿದ್ಯಾರ್ಥಿಗಳ ಸಂಖ್ಯೆಗಿಂತ ................... ಇದೆ.
- ಸೈಕಲ್ ಮೂಲಕ ಬರುವ ವಿದ್ಯಾರ್ಥಿಗಳ ಸಂಖ್ಯೆ, ನಡೆದುಕೊಂಡು ಬರುವ ವಿದ್ಯಾರ್ಥಿಗಳ ಸಂಖ್ಯೆಗಿಂತ ................... ಇದೆ.
- ಸೈಕಲ್ ಮೂಲಕ ಬರುವ ವಿದ್ಯಾರ್ಥಿಗಳ ಸಂಖ್ಯೆ ................... ಮೂಲಕ ಬರುವ ವಿದ್ಯಾರ್ಥಿಗಳ ಸಂಖ್ಯೆಗಿಂತ ಕಡಿಮೆ ಇದೆ.
- ಇಂಧನದ ಬಳಕೆ ಮಾಡಲಾರದೆ ಶಾಲೆಗೆ ಬರುವ ವಿದ್ಯಾರ್ಥಿಗಳ ಸಂಖ್ಯೆ ................... ಇದೆ.



**ಶಿಕ್ಷಕರಿಗಾಗಿ:** ಚಿತ್ರದ ನಿರೀಕ್ಷಣೆ ಮಾಡಿ ಅದರ ಮೇಲೆ ಆಧಾರಿಸಿದ ಕೋಷ್ಟಕ ಇವುಗಳ ಸಹ ಸಂಬಂಧದ ಕುರಿತು ಚರ್ಚೆ ಮಾಡಿರಿ. ಕೋಷ್ಟಕದ ನೀರಿಕ್ಷಣೆ ಹೇಗೆ ಮಾಡಬೇಕು ಎಂಬುದರ ಬಗ್ಗೆ ಮಾರ್ಗದರ್ಶನ ಮಾಡಿರಿ.

(೨) ಅಂತರ ಶಾಲೆಯ ಕ್ರೀಡಾಸ್ಪರ್ಧೆಯಲ್ಲಿ ಭಾಗವಹಿಸಿದ ಮಕ್ಕಳ ಮಾಹಿತಿ ತೋರಿಸುವ ಕೋಷ್ಟಕವನ್ನು ಅಹಮ್ಮದನು ಕೆಳಗಿನಂತೆ ತಯಾರಿಸಿದ್ದಾನೆ. ಅದರ ಮೇಲಿಂದ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.

| ಆಟಗಳ ಪ್ರಕಾರ | ಕ್ರೀಡಾಸ್ಪರ್ಧೆಯಲ್ಲಿ ಭಾಗವಹಿಸಿದ ವಿದ್ಯಾರ್ಥಿಗಳು | ವಿದ್ಯಾರ್ಥಿಗಳ ಸಂಖ್ಯೆ |
|---|---|---|
| ದೂರದ ಜಿಗಿತ |  | ೪ |
| ಓಟ |  | ೬ |
| ಹಗ್ಗ ಜಿಗಿತ |  | ೩ |
| ಎತ್ತರ ಜಿಗಿತ |  | ೫ |

- ಯಾವ ಆಟದಲ್ಲಿ ಎಲ್ಲಕ್ಕೂ ಹೆಚ್ಚು ಮಕ್ಕಳು ಭಾಗವಹಿಸಿದ್ದಾರೆ? ..................
- ದೂರದ ಜಿಗಿತ ಮತ್ತು ಎತ್ತರ ಜಿಗಿತದಲ್ಲಿ ಒಟ್ಟು ಎಷ್ಟು ಮಕ್ಕಳು ಭಾಗವಹಿಸಿದ್ದಾರೆ? ...............
- ಹಗ್ಗ ಜಿಗಿತ ಆಟದಲ್ಲಿ ಎಷ್ಟು ಮಕ್ಕಳು ಭಾಗವಹಿಸಿದ್ದಾರೆ? ...............
- ಒಟ್ಟು ಎಷ್ಟು ಮಕ್ಕಳು ಕ್ರೀಡಾಸ್ಪರ್ಧೆಯಲ್ಲಿ ಭಾಗವಹಿಸಿದ್ದಾರೆ? ...............

(೩) ನಿಮ್ಮ ಶಾಲೆಯಲ್ಲಿಯ 'ಸಾಂಸ್ಕೃತಿಕ ಕಾರ್ಯಕ್ರಮ'ದಲ್ಲಿ ವಿವಿಧ ಕಲಾ ಪ್ರಕಾರಗಳಲ್ಲಿ ಭಾಗವಹಿಸಿದ ಮಕ್ಕಳ ಮಾಹಿತಿ ಕೊಡಲಾಗಿದೆ. ಅದರ ಮೇಲಿಂದ ಕೆಳಗಿನ ಕೋಷ್ಟ ಪೂರ್ಣ ಮಾಡಿರಿ. ಕೆಳಗಿನ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.

| ಕಲೆ ಪ್ರಕಾರ | ಭಾಗವಹಿಸಿದ ವಿದ್ಯಾರ್ಥಿಗಳು | ವಿದ್ಯಾರ್ಥಿಗಳ ಸಂಖ್ಯೆ |
|---|---|---|
| ನೃತ್ಯ |  | ............... |
| ನಾಟಕ |  | ............... |
| ವಾದನ |  | ............... |
| ಗಾಯನ |  | ............... |
| ವೇಷ ಭೂಷಣ |  | ............... |

- ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಒಟ್ಟು ಎಷ್ಟು ಕಲೆಯ ಪ್ರಕಾರಗಳನ್ನು ಆಯೋಜಿಸಲಾಗಿತ್ತು? ☐
- ಗಾಯನ ಕಲಾ ಪ್ರಕಾರದಲ್ಲಿ ಎಷ್ಟು ಮಕ್ಕಳು ಭಾಗವಹಿಸಿದ್ದಾರೆ? ☐
- ಯಾವ ಕಲಾ ಪ್ರಕಾರದಲ್ಲಿ ಎಲ್ಲಕ್ಕೂ ಹೆಚ್ಚು ಮಕ್ಕಳು ಭಾಗವಹಿಸಿದ್ದಾರೆ? ☐
- ಯಾವ ಕಲಾ ಪ್ರಕಾರದಲ್ಲಿ ಎಲ್ಲಕ್ಕೂ ಕಡಿಮೆ ಮಕ್ಕಳು ಭಾಗವಹಿಸಿದ್ದಾರೆ? ☐



**ಶಿಕ್ಷಕರಿಗಾಗಿ:** ವರ್ಗದಲ್ಲಿಯ ಎಷ್ಟು ವಿದ್ಯಾರ್ಥಿಗಳು ಯಾವ-ಯಾವ ವಾಹನಗಳಿಂದ ಶಾಲೆಗೆ ಬರುತ್ತಾರೆ, ಈ ಮಾಹಿತಿಯ ಕೋಷ್ಟಕವನ್ನು ತಾಳೆಯ ಗುರುತುಗಳ ಬಳಕೆ ಮಾಡಿ ತಯಾರಿಸಿರಿ. ಅದರ ಮೇಲೆ ಚರ್ಚೆ ಮಾಡಿಸಿರಿ.

(೪) ಶಾಲೆಯ ಸಹಕಾರ ಅಂಗಡಿಯಲ್ಲಿ ಒಂದು ದಿನದಲ್ಲಿ ಮಾರಾಟವಾದ ಸಾಹಿತ್ಯಗಳ ಮಾಹಿತಿಯನ್ನು ಕೆಳಗಿನ ಕೋಷ್ಟಕದಲ್ಲಿ ಕೊಡಲಾಗಿದೆ.

| ಸಾಹಿತ್ಯಗಳ ಹೆಸರು | ಮಾರಾಟವಾದ ಸಾಹಿತ್ಯಗಳು |
|---|---|
| ವಹಿಗಳು |  |
| ಪೆನ್ನುಗಳು |  |
| ಪೆನ್ಸಿಲ್‌ಗಳು |  |
| ಕಂಪಾಸ್ ಪೆಟ್ಟಿಗೆಗಳು |  |

ಮೇಲಿನ ಕೋಷ್ಟಕದ ಆಧಾರದಿಂದ ಪ್ರಶ್ನೆಗಳನ್ನು ತಯಾರಿಸಿರಿ.

ಉದಾಹರಣೆ: ಸಹಕಾರ ಅಂಗಡಿಯಿಂದ ಯಾವ ವಸ್ತುವಿನ ಮಾರಾಟ ಎಲ್ಲಕ್ಕೂ ಹೆಚ್ಚು ಆಗಿದೆ?

- ------------------------------------------------------------
- ------------------------------------------------------------
- ------------------------------------------------------------

(೫) ಮುಂದಿನ ಚಿತ್ರದ ನೀರಿಕ್ಷಣೆ ಮಾಡಿರಿ. ಅದರಲ್ಲಿ ಯಾವ ಮಾಹಿತಿಯ ವ್ಯವಸ್ಥಾಪನೆ ಮಾಡಲಾಗಿದೆ ಎಂಬುದನ್ನು ಬರೆಯಿರಿ.



| ತರಗತಿ | ಪುಟ ಸಂಖ್ಯೆ |
|---|---|
| ಒಂದನೆಯ | ೨೮ |
| ಎರಡನೆಯ | ೨೪ |
| ಮೂರನೆಯ | ೨೭ |
| ನಾಲ್ಕನೆಯ | ೩೨ |

**ಶಿಕ್ಷಕರಿಗಾಗಿ:** ಮಾಹಿತಿಯನ್ನು ಪ್ರಸ್ತುತಪಡಿಸುವಾಗ ಚಿಹ್ನೆಗಳ/ಚಿತ್ರಗಳ 'ತಾಳೆಯ ಗುರುತು'ಗಳ ಉಪಯೋಗ ಹೇಗೆ ಮಾಡಬೇಕು ಎಂಬುದನ್ನು ಉದಾಹರಣೆಗಳೊಂದಿಗೆ ವಿವರಿಸಬೇಕು. ಅದರ ಸಲುವಾಗಿ ಚಿತ್ರಪಟಗಳು, ದಿನಪತ್ರಿಕೆಗಳಲ್ಲಿರುವ ಚಿತ್ರಾತ್ಮಕ ಮಾಹಿತಿಯ ನೀರಿಕ್ಷಣೆ ಮಾಡಿ ಅಂದಾಜು ಮಾಡುವುದು, ಹೋಲಿಕೆ ಮಾಡುವುದು ಅರ್ಥ ವಿವರಣೆ ಇವುಗಳ ಸ್ಪಷ್ಟೀಕರಣ ಕೊಡಬೇಕು. ಇದರ ಮೇಲಿಂದ ಮಾಹಿತಿಯ ವ್ಯವಸ್ಥಾಪನೆ ಹೇಗೆ ಮಾಡಲಾಗುತ್ತದೆ ಎಂಬುದನ್ನು ವಿವರಿಸಬೇಕು.

# ೭. ದೃಶ್ಯ ನಕ್ಷೆ

**ತಿಳಿದುಕೊಳ್ಳಿರಿ.**

## ಸ್ಥಾನ ಮತ್ತು ಸ್ಥಿತಿ

◉ **ಕಪಾಟಿನ ನಿರೀಕ್ಷಣೆ ಮಾಡಿ ಉತ್ತರಗಳನ್ನು ಬರೆಯಿರಿ.**






- ಕಪಾಟಿನ ಮೇಲಿನ ಸಾಲಿನಲ್ಲಿ ಹಡಗಿನ ಎಡ ಭಾಗದಲ್ಲಿ 'ಗಡಿಯಾರ' ಇದೆ.
- ಕಪಾಟಿನ ಮಧ್ಯದ ಸಾಲಿನಲ್ಲಿ ವಿಮಾನ ಮತ್ತು ಮೋಟಾರ ಕಾರಿನ ಮಧ್ಯದಲ್ಲಿ .................. ಇದೆ.
- ಕಪಾಟಿನ ..................... ಸಾಲಿನಲ್ಲಿ ವಿಮಾನ ಇದು ಪುಸ್ತಕದ .................... ಭಾಗದಲ್ಲಿದೆ.
- ಕಪಾಟಿನಲ್ಲಿ ಮೋಟಾರಕಾರಿನ ಸರಿಯಾಗಿ ಮೇಲ್ಭಾಗದಲ್ಲಿ ...................... ಇದೆ.
- ವಿಮಾನದ ಬಲಭಾಗದಲ್ಲಿ .................. ಇದೆ.

## ದೃಶ್ಯಗಳು: ಎದುರುಗಡೆಯಿಂದ, ಮೇಲಿನಿಂದ, ಬದಿಯಿಂದ

ಕುರ್ಚಿಯ ವಿವಿಧ ದೃಶ್ಯಗಳು ಕೆಳಗಿನಂತಿವೆ.



ಕುರ್ಚಿಯ ಎದುರುಗಡೆಯ ದೃಶ್ಯ



ಕುರ್ಚಿಯ ಮೇಲಿನಿಂದ ದೃಶ್ಯ



ಕುರ್ಚಿಯ ಬದಿಗಿನಿಂದ ದೃಶ್ಯ

**ವಸ್ತುಗಳ ಮೇಲಿನಿಂದ ದೃಶ್ಯ, ಬದಿಯಿಂದ ದೃಶ್ಯ, ಎದುರುಗಡೆಯ ದೃಶ್ಯ ಹೀಗೆ ಬೇರೆ-ಬೇರೆ ದೃಶ್ಯಗಳಿರುತ್ತವೆ.**

|  | .................... | .................... | |
|  | .................... | .................... | |
|  | .................... | .................... | |

## ಮಾಡಿ ನೋಡಿರಿ.

- ಕಡ್ಡಿಗಳ ಉಪಯೋಗ ಮಾಡಿ ಪ್ರಿಯಾ, ಮಹೇಶ ಮತ್ತು ಅಕ್ಷಿತಾ ಇವರು ವಿವಿಧ ಆಕಾರಗಳನ್ನು ತಯಾರಿಸುತ್ತಾರೆ. ಅವುಗಳ ಭುಜ, ಕೋನ, ಶಿರೋಬಿಂದು ಇವುಗಳ ವೈಶಿಷ್ಟ್ಯಗಳ ಬಗ್ಗೆ ಚರ್ಚಿಸುತ್ತಾರೆ.



ಮೂರು ಕಡ್ಡಿಗಳ ಉಪಯೋಗ ಮಾಡಿ ಒಂದು ಮುಚ್ಚಿದ ಆಕಾರದ ಆಕೃತಿಯನ್ನು ತಯಾರಿಸಿರಿ.





ಇದು ತ್ರಿಕೋನ ತಯಾರಾಯಿತು.

ತ್ರಿಕೋನದಲ್ಲಿ ಮೂರು ಕೋನಗಳು, ಮೂರು ಭುಜಗಳು ಮತ್ತು ಮೂರು ಶಿರೋಬಿಂದುಗಳಿರುತ್ತವೆ.



ಕಡ್ಡಿಗಳ ಸಂಖ್ಯೆಯನ್ನು ಒಂದೊಂದಾಗಿ ಹೆಚ್ಚಿಸುತ್ತಾ ಹೋದಂತೆ ಯಾವ ಮುಚ್ಚಿದ ಆಕಾರಗಳು ತಯಾರಾಗುತ್ತವೆ ಎಂಬುದನ್ನು ನೋಡೋಣ. ಅವುಗಳ ಕೋನಗಳು, ಶಿರೋಬಿಂದುಗಳು ಮತ್ತು ಭುಜಗಳ ಬಗ್ಗೆ ಚರ್ಚಿಸೋಣ.

**ಚೌಕೋನ**



ಕೋನಗಳ ಸಂಖ್ಯೆ = ೪

ಭುಜಗಳ ಸಂಖ್ಯೆ = .....

ಶಿರೋಬಿಂದುಗಳ ಸಂಖ್ಯೆ = ......

**ಪಂಚಕೋನ**



ಕೋನಗಳ ಸಂಖ್ಯೆ = ....

ಭುಜಗಳ ಸಂಖ್ಯೆ = ೫

ಶಿರೋಬಿಂದುಗಳ ಸಂಖ್ಯೆ = ......

**ಷಟ್ಕೋನ**



ಕೋನಗಳ ಸಂಖ್ಯೆ = ....

ಭುಜಗಳ ಸಂಖ್ಯೆ = .....

ಶಿರೋಬಿಂದುಗಳ ಸಂಖ್ಯೆ = ೬

**ಸಪ್ತಕೋನ**



ಕೋನಗಳ ಸಂಖ್ಯೆ = ....

ಭುಜಗಳ ಸಂಖ್ಯೆ = .....

ಶಿರೋಬಿಂದುಗಳ ಸಂಖ್ಯೆ = ೭

**ಅಷ್ಟಕೋನ**



ಕೋನಗಳ ಸಂಖ್ಯೆ = ....

ಭುಜಗಳ ಸಂಖ್ಯೆ = .....

ಶಿರೋಬಿಂದುಗಳ ಸಂಖ್ಯೆ = ......

ಒಂಬತ್ತು ಭುಜಗಳು ಮತ್ತು ಒಂಬತ್ತು ಕೋನಗಳಿರುವ ಆಕಾರ ಹೇಗೆ ಬಿಡಿಸಲು ಬರುತ್ತದೆ? ಎಂಬುದರ ಯೋಚನೆ ಮಾಡಿರಿ ಮತ್ತು ಆ ಪ್ರಕಾರವಾಗಿ ವಹಿಯಲ್ಲಿ ಬಿಡಿಸುವ ಪ್ರಯತ್ನ ಮಾಡಿರಿ.

ಮೇಲಿನವುಗಳಲ್ಲಿ ನಾಲ್ಕಕ್ಕಿಂತ ಹೆಚ್ಚು ಭುಜಗಳಿರುವ ಆಕಾರಗಳ ಹೆಸರುಗಳನ್ನು ಬರೆಯಿರಿ.

..............................

..............................

..............................

..............................

## ತ್ರಿಮಿತೀಯ ಆಕಾರದ ಮೇಲಿಂದ ದ್ವಿಮಿತೀಯ ಆಕಾರಗಳನ್ನು ಗುರುತಿಸುವುದು

**ಶಿಕ್ಷಕರು:** ಮೀನಾ ಶುಭಾಂಗಿ ಮತ್ತು ವಿಶಾಲ್ ಇವರಿಗೆ ಕೆಲವು ಖಾಲಿ ಪೆಟ್ಟಿಗೆಗಳನ್ನು ತೆರೆಯಲು ಕೊಟ್ಟರು. ಆ ಪೆಟ್ಟಿಗೆಗಳನ್ನು ತೆರೆದ ನಂತರ ಅವುಗಳ ಮಡಿಕೆಗಳಲ್ಲಿ ಕಾಣಿಸುವ ಆಕಾರಗಳ ನಿರೀಕ್ಷಣೆ ಮಾಡಲು ಹೇಳಿದರು.

**ಮೀನಾ**



**ಶುಭಾಂಗಿ**



**ವಿಶಾಲ್**



ಪೆಟ್ಟಿಗೆಯನ್ನು ತೆರೆದ ನಂತರ ಕೆಳಗೆ ಕಾಣಿಸುವ ಮಡಿಕೆಗಳಲ್ಲಿಯ ದ್ವಿಮಿತೀಯ ಆಕಾರಗಳ ಹೆಸರುಗಳನ್ನು ಅವುಗಳ ಕೆಳಗೆ ಬರೆಯಿರಿ.



**ಚೌರಸ** ..........................

**ಆಯತ** ..........................



..........................

..........................



..........................

..........................

**ಆಯತ**



ಮೇಲೆ ತೋರಿಸಿದಂತೆ ಒಂದು ಆಯತಾಕಾರದ ಕಾಗದವನ್ನು ತೆಗೆದುಕೊಳ್ಳಿರಿ.

ಈಗ ಎದುರುಬದಿರಿನ ಅಂಚುಗಳನ್ನು ಒಂದಕ್ಕೊಂದು ಜೋಡಿಸಲು ಕಾಗದವನ್ನು ಮೇಲೆ ತೋರಿಸಿದಂತೆ ಮಧ್ಯದಲ್ಲಿ ಮಡಚಿರಿ ಅಂದರೆ ಹೆಚ್ಚು ಉದ್ದವಿರುವ ಅಂಚುಗಳು ಒಂದಕ್ಕೊಂದು ಸರಿಯಾಗಿ ಹೊಂದುವವು.

ಅದೇ ರೀತಿ ಕಡಿಮೆ ಉದ್ದವಿರುವ ಅಂಚುಗಳು ಒಂದಕ್ಕೊಂದು ಸರಿಯಾಗಿ ಹೊಂದುವವು.

ಆಯತದ ಎದುರುಬದಿರಿನ ಅಂಚುಗಳು ಸಮಾನ ಉದ್ದವನ್ನು ಹೊಂದಿರುತ್ತವೆ.

**ಶಿಕ್ಷಕರಿಗಾಗಿ:** ಮಡಿಕೆಗಳಿಂದ ಉಂಟಾಗುವ ಆಕಾರಗಳ ಗುಣಧರ್ಮಗಳ ಬಗ್ಗೆ ವಿದ್ಯಾರ್ಥಿಗಳಲ್ಲಿ ಚರ್ಚೆ ಮಾಡಿಸಿರಿ.

## ಚೌರಸ



ಮೇಲೆ ತೋರಿಸಿದಂತೆ ಚೌರಸಾಕೃತಿ ಕಾಗದದ ನಿರೀಕ್ಷಣೆ ಮಾಡಿರಿ.

ಕಾಗದವನ್ನು ಆಯತದಂತೆ ಅಡ್ಡಲಾಗಿ ಮತ್ತು ಉದ್ದವಾಗಿ ಮಡಿಕೆ ಮಾಡಿ ಎದುರುಬದುರಿನ ಬದಿಗಳು ಸಮಾನ ಉದ್ದಳತೆಯವು ಇವೆಯೇ ಎಂಬುದನ್ನು ನೋಡಿರಿ.

ಈಗ ಕಾಗದದ ಎದುರು ಬದುರಿನ ಮೂಲೆಗಳು ಒಂದಕ್ಕೊಂದು ಹೊಂದುತ್ತವೆಯೇ ಎಂದು ನೋಡಲು ಚಿತ್ರದಲ್ಲಿ ತೋರಿಸಿದಂತೆ ಮಡಿಕೆ ಮಾಡಿರಿ.

ಅಂದರೆ ಚೌರಸದ ನಾಲ್ಕು ಬದಿಗಳು ಸಮಾನ ಉದ್ದಳತೆಯವು ಇರುತ್ತವೆ.

## ತ್ರಿಕೋನ

ತ್ರಿಕೋನಕ್ಕೆ ಎಷ್ಟು ಅಂಚುಗಳಿವೆ? ☐ ಮೂಲೆಗಳು ಎಷ್ಟು? ☐



ಸುತ್ತ-ಮುತ್ತಲಿನ ಪರಿಸರದಲ್ಲಿ ತ್ರಿಕೋನ ಆಕಾರಗಳು ಎಲ್ಲೆಲ್ಲಿ ಕಂಡುಬರುತ್ತವೆ ಎಂಬುದನ್ನು ಹುಡುಕಿರಿ.

ಕಡ್ಡಿಗಳ ಮತ್ತು ಚಿಕ್ಕ ರಬ್ಬರಿನ ನಳಿಕೆಗಳ ಉಪಯೋಗ ಮಾಡಿ ಚೌಕೋನ, ಚೌರಸ, ಆಯತ ಮತ್ತು ತ್ರಿಕೋನಗಳನ್ನು ತಯಾರಿಸಿರಿ.

◉ **ಕೆಳಗಿನ ಚಿತ್ರಗಳಲ್ಲಿಯ ವಿವಿಧ ಆಕಾರಗಳನ್ನು ಗುರುತಿಸಿರಿ ಮತ್ತು ಆಕಾರಕ್ಕೆ ತಕ್ಕಂತೆ ಬಣ್ಣ ತುಂಬುವ ಮೂಲಕ ಚಿತ್ರಗಳನ್ನು ಆಕರ್ಷಕವನ್ನಾಗಿ ಮಾಡಿರಿ.**



**ಶಿಕ್ಷಕರಿಗಾಗಿ:** ಗಣಿತ ಪೆಟ್ಟಿಗೆಯಲ್ಲಿಯ ಸಾಹಿತ್ಯಗಳ ಉಪಯೋಗ ಮಾಡಿ ವಿದ್ಯಾರ್ಥಿಗಳಿಂದ ಚೌಕೋನ, ಆಯತ, ಚೌರಸ, ತ್ರಿಕೋನಗಳನ್ನು ತಯಾರಿಸಿಕೊಳ್ಳಿರಿ.

ನಿಮ್ಮ ಶಾಲೆಯಲ್ಲಿ ಅಥವಾ ಸುತ್ತಲಿನ ಪರಿಸರದಲ್ಲಿ ಈ ಕೆಳಗಿನ ಆಕಾರಗಳು ಕಾಣಿಸುತ್ತವೆಯೇ ಅವುಗಳ ನಿರೀಕ್ಷಣೆ ಮಾಡಿರಿ.



ಪರಿಸರದಲ್ಲಿ ಕಾಣಿಸುವ ಇವುಗಳಿಗಿಂತ ಬೇರೆ ಆಕಾರಗಳ ಬಗ್ಗೆ ನಿಮ್ಮ ಸಹಪಾಠಿಗಳೊಂದಿಗೆ ಚರ್ಚೆ ಮಾಡಿರಿ.



## ಗಣಿತ ಮೋಜು.

ಉದಾ. ಚೌರಸದ ಒಂದು ಮೂಲೆಯನ್ನು ಮಡಿಕೆ ಮಾಡಿದಾಗ ಪಂಚಕೋನ ತಯಾರಾಗುತ್ತದೆ.

ಒಂದು ಚೌರಸಾಕೃತಿ ಕಾಗದವನ್ನು ತೆಗೆದುಕೊಳ್ಳಿರಿ ಮತ್ತು ಅದರ ಮೂಲೆಗಳನ್ನು ಒಂದೊಂದಾಗಿ ಮಡಿಕೆ ಮಾಡಿ ನೋಡಿರಿ. ಯಾವ ಆಕಾರಗಳು ತಯಾರಾಗುತ್ತವೆ ಎಂಬುದನ್ನು ನಿರೀಕ್ಷಣೆ ಮಾಡಿರಿ.




- ಎರಡು ವಿರುದ್ಧ ಮೂಲೆಗಳನ್ನು ಮಡಿಕೆ ಮಾಡಿದರೆ ಯಾವ ಆಕಾರ ತಯಾರವಾಗುವುದು?
- ಇದೇ ರೀತಿ ಮೂರು ಹಾಗೂ ನಾಲ್ಕು ಮಡಿಕೆಗಳನ್ನು ಮಾಡಿದರೆ ಯಾವ ಆಕಾರಗಳು ತಯಾರವಾಗುವವು ಎಂಬುದರ ಬಗ್ಗೆ ತರಗತಿಯಲ್ಲಿ ಚರ್ಚೆ ಮಾಡಿರಿ.
- ಮುಂದಿನ ಆಕಾರಗಳಿಗೆ ಹೋಲುವ ನಿಮ್ಮ ಪರಿಸರದಲ್ಲಿ ಕಾಣಿಸುವ ವಸ್ತುಗಳ ಹೆಸರುಗಳನ್ನು ಬರೆಯಿರಿ.



| ವರ್ತುಳ | ತ್ರಿಕೋನ | ಚೌರಸ | ಆಯತ |
|---|---|---|---|
| ಬಳೆ | .............. | .............. | .............. |
| .............. | .............. | .............. | .............. |
| .............. | .............. | .............. | .............. |
| .............. | .............. | .............. | .............. |
| .............. | .............. | .............. | .............. |









## ಕೃತಿ ಮಾಡಿರಿ.

(೧) ಕೆಳಗಿನ ಚಿತ್ರದಲ್ಲಿ ತೋರಿಸಿದಂತೆ ವಿವಿಧ ಆಕಾರಗಳನ್ನು ಉಪಯೋಗಿಸಿ ನಿಮಗೆ ಇಷ್ಟವಾದ ಚಿತ್ರವನ್ನು ತಯಾರಿಸಿರಿ.



ಜಿಯೋ ಬೋರ್ಡ್‌ದ ಮೇಲೆ ರಬ್ಬರ್‌ದ ಸಹಾಯದಿಂದ ತಯಾರಿಸಿದ ಚಿತ್ರ.



ನಾನು ತಯಾರಿಸಿದ ನನ್ನ ನೆಚ್ಚಿನ ಚಿತ್ರ.

(೨) ಸೂರಜ, ಮಹೇಶ ಮತ್ತು ಅಹಮ್ಮದ ಇವರು ವಿವಿಧ ಆಕಾರಗಳ ಪೃಷ್ಠಗಳ ಉಪಯೋಗ ಮಾಡಿ ಕೆಲವು ಚಿತ್ರಗಳನ್ನು ಬಿಡಿಸಿದ್ದಾರೆ. ಹೀಗೆ ಕೆಲವು ಚಿತ್ರಗಳನ್ನು ನಿಮ್ಮ ವಹಿಯಲ್ಲಿ ಬಿಡಿಸಿರಿ.



### ಗಣಿತದ ಒಗಟು

(೧) ಕಡ್ಡಿಗಳಿಂದ ಬದಿಗೆ ಕೆಲವು ಚೌರಸಗಳನ್ನು ತಯಾರಿಸಲಾಗಿದೆ. ಅವುಗಳಲ್ಲಿಯ ೫ ಕಡ್ಡಿಗಳನ್ನು ತೆಗೆದು ಹಾಕಿ, ಕೇವಲ ಮೂರು ಚೌರಸಗಳು ಉಳಿಯುವಂತೆ ರಚನೆಯನ್ನು ಮಾಡಿರಿ.





## ಮಾಡಿ ನೋಡಿರಿ.

◉ ಚೌರಸ ಮತ್ತು ಎರಡು ತ್ರಿಕೋನಗಳ ಉಪಯೋಗ ಮಾಡಿ ಆಯತ ತಯಾರಿಸಿರಿ.



ಚೌರಸ



ತ್ರಿಕೋನ

ಆಯತ

◉ ಆಯತ ಮತ್ತು ಎರಡು ತ್ರಿಕೋನಗಳ ಉಪಯೋಗ ಮಾಡಿ ಷಟ್ಕೋನ ತಯಾರಿಸಿರಿ.



ಆಯತ



ತ್ರಿಕೋನ

ಷಟ್ಕೋನ



## ಯೋಚಿಸಿರಿ.

◉ ಗಣಿತ ಪೆಟ್ಟಿಗೆಯಲ್ಲಿಯ ಟ್ಯಾನ್‌ಗ್ರಾಮ್‌ನ ವಿವಿಧ ಆಕಾರಗಳನ್ನು ಜೋಡಿಸುವುದರಿಂದ ಯಾವ ಯಾವ ಆಕಾರಗಳು ತಯಾರಾಗುತ್ತವೆ?

- ಒಂದು ಚೌರಸ ಮತ್ತು ಒಂದು ತ್ರಿಕೋನ.
- ಒಂದು ಚೌರಸ ಮತ್ತು ಎರಡು ತ್ರಿಕೋನ.

◉ ಕೊಟ್ಟಿರುವ ತುಂಡುಗಳ ಉಪಯೋಗ ಮಾಡಿ ಅಪೂರ್ಣವಾಗಿರುವ ಟ್ಯಾನ್‌ಗ್ರಾಮ್ ಪೂರ್ಣ ಮಾಡಿರಿ.





ಐದು ತುಂಡುಗಳ ಟ್ಯಾನ್‌ಗ್ರಾಮ್

೧) ಕೊಟ್ಟಿರುವ ಚಿತ್ರಗಳಲ್ಲಿ ಯಾವ-ಯಾವ ಆಕಾರಗಳ ಉಪಯೋಗವಾಗಿದೆ ಎಂಬುದನ್ನು ಬರೆಯಿರಿ.

ವಾರ್ಲಿ ಪೇಂಟಿಂಗ್



ಕ್ರಿಕೆಟ್ ಆಟದ ಮೈದಾನ



ಕಬಡ್ಡಿ ಆಟದ ಮೈದಾನ



೨) ನಿರೀಕ್ಷಣೆ ಮಾಡಿ ಕೊಟ್ಟಿರುವ ನಕ್ಷೆಯನ್ನು ಪೂರ್ಣ ಮಾಡಿರಿ.





೩) ಕೆಳಗಿನ ಆಕಾರದಲ್ಲಿ ಒಂದು ಗೆರೆಯನ್ನು ಹೀಗೆ ಎಳೆಯಿರಿ, ಅದರಿಂದ ಮೂರು ತ್ರಿಕೋನಗಳು ತಯಾರಾಗಬೇಕು.



೪) ಕೆಳಗಿನ ಆಕಾರದಲ್ಲಿ ೨ ಗೆರೆಗಳನ್ನು ಹೀಗೆ ಎಳೆಯಿರಿ, ಅದರಿಂದ ಒಂದು ಚೌರಸ ಮತ್ತು ಎರಡು ತ್ರಿಕೋನಗಳು ತಯಾರಾಗಬೇಕು.



## ಚರ್ಚೆ ಮಾಡಿರಿ.

**ಕೆಳಗಿನ ಆಕಾರಗಳಲ್ಲಿ ಯಾವುದೇ ಎರಡು ಆಕಾರಗಳನ್ನು ತೆಗೆದುಕೊಂಡು ಅವುಗಳಲ್ಲಿಯ ಸಾಮ್ಯತೆ ಮತ್ತು ವ್ಯತ್ಯಾಸಗಳ ಬಗ್ಗೆ ತರಗತಿಯಲ್ಲಿ ಚರ್ಚಿಸಿರಿ.**



**೫) ಕೋಷ್ಟಕವನ್ನು ಪೂರ್ಣ ಮಾಡಿರಿ.**

ಕೆಳಗಿನ ಅಕ್ಷರಗಳು ಉದ್ದ, ಅಡ್ಡ, ಓರೆ ಹಾಗೂ ವಕ್ರ ರೇಷೆಗಳಿಂದ ತಯಾರಾಗಿವೆ.

**ಈ ಅಕ್ಷರಗಳಲ್ಲಿ ಯಾವ ರೇಷೆಯನ್ನು ಉಪಯೋಗಿಸಿದ್ದಾರೆಯೋ ಅವುಗಳ ಕೆಳಗೆ ✓ ಹೀಗೆ ಗುರುತು ಮಾಡಿರಿ.**

| ಅಕ್ಷರಗಳು | ಅಡ್ಡ ರೇಷೆ | ಉದ್ದ ರೇಷೆ | ಓರೆ ರೇಷೆ | ವಕ್ರ ರೇಷೆ |
|---|---|---|---|---|
| M | | ✓ | ✓ | |
| Q | | | | ✓ |
| L | | | | |
| ವ | | | | |
| ಚ | | | | |
| ಟ | | | | |

**೬) ರಂಗೋಲಿಯ ಎಡಭಾಗವನ್ನು ಗಮನಿಸಿ ರಂಗೋಲಿಯನ್ನು ಪೂರ್ಣ ಮಾಡಿರಿ.**



ಈ ಚಿತ್ರದಲ್ಲಿರುವ ಒಂದು ರೀತಿಯ ಆಕಾರಗಳಿಗೆ ಒಂದೇ ಬಣ್ಣವನ್ನು ಕೊಡುವ ಮೂಲಕ ರಂಗೋಲಿಯನ್ನು ಸುಂದರ ಮತ್ತು ಆಕರ್ಷಕವಾಗಿ ಮಾಡಿರಿ.

**ಶಿಕ್ಷಕರಿಗಾಗಿ:** ಗಣಿತ ಪೆಟ್ಟಿಗೆಯಲ್ಲಿಯ ವಿವಿಧ ದ್ವಿಮಿತೀಯ ಹಾಗೂ ತ್ರಿಮಿತೀಯ ಆಕಾರಗಳನ್ನು ವಿದ್ಯಾರ್ಥಿಗಳಿಗೆ ಬಳಸಲು ಕೊಟ್ಟು, ಅವುಗಳ ಗುಣಧರ್ಮಗಳ ಬಗ್ಗೆ ತರಗತಿಯಲ್ಲಿ ಚರ್ಚೆಯನ್ನು ಏರ್ಪಡಿಸಿರಿ.

## ತಿಳಿದುಕೊಳ್ಳಿರಿ.






ಮೇಲಿನ ಚಿತ್ರಗಳ ನಿರೀಕ್ಷಣೆ ಮಾಡಿದಾಗ, ಗಮನಕ್ಕೆ ಬರುವುದೇನೆಂದರೆ ಎರಡು ಅಂಚುಗಳು ಅಥವಾ ಎರಡು ರೇಷೆಗಳು ಒಂದು ಬಿಂದುವಿನಲ್ಲಿ ಬಂದು ಕೂಡಿದಾಗ ಅಲ್ಲಿ ಕೋನ ತಯಾರಾಗುತ್ತದೆ. ಹೀಗೆ ತಯಾರಾಗುವ ಕೋನಗಳು ನಿಮ್ಮ ಪರಿಸರದಲ್ಲಿ, ಶಾಲೆಯಲ್ಲಿ ಎಲ್ಲೆಲ್ಲಿ ಕಾಣಿಸುತ್ತವೆ ಎಂಬುದನ್ನು ಹುಡುಕಿರಿ.

## ಕೃತಿ ಮಾಡಿರಿ.

ನಗಮಾ, ಅನೀಲ ಮತ್ತು ದೀಕ್ಷಾ ಇವರು ಕಾಗದದ ಪಟ್ಟಿಗಳನ್ನು ಉಪಯೋಗಿಸಿ ತಿರುಗಿಸಬಹುದಾದ ಮೂಲೆಗಳನ್ನು ಕೆಳಗಿನಂತೆ ತಯಾರಿಸಿದರು.



ಚೌರಸ ಮೂಲೆ

(೧)



ಚೌರಸ ಮೂಲೆಕ್ಕಿಂತ ಚಿಕ್ಕದು

(೨)



ಚೌರಸ ಮೂಲೆಕ್ಕಿಂತ ದೊಡ್ಡದು

(೩)



ಚದುರಂಗದ ಮಣೆಯ ಎಲ್ಲಾ ಮೂಲೆಗಳು ಚೌರಸ ಮೂಲೆಗಳಿವೆಯೇ?

..................................

..................................



ಆಯತದ ಎಲ್ಲಾ ಮೂಲೆಗಳು ಚೌರಸ ಮೂಲೆಗಳಿವೆಯೇ?

..................................

..................................



ತ್ರಿಕೋನದಲ್ಲಿ ಎಷ್ಟು ಚೌರಸ ಮೂಲೆಗಳಿವೆ?

..................................

..................................

**ಶಿಕ್ಷಕರಿಗಾಗಿ:** ತರಗತಿಯ ಬಾಗಿಲನ್ನು ತೆಗೆಯುವ ಅಥವಾ ಮುಚ್ಚುವ ಕೃತಿಯನ್ನು ಜೋಡಿಗಳಲ್ಲಿ ಅಥವಾ ಗುಂಪಿನಲ್ಲಿ ಮಾಡಲು ಹೇಳಿ ತಯಾರಾದ ಕೋನ ಚೌರಸ ಮೂಲೆಯಷ್ಟೇ, ಚೌರಸ ಮೂಲೆಕ್ಕಿಂತ ಚಿಕ್ಕದು, ಚೌರಸ ಮೂಲೆಕ್ಕಿಂತ ದೊಡ್ಡದು ಆಗಿದೆಯೇ? ಎಂಬುದನ್ನು ಗುರುತಿಸಲು ಅವಕಾಶ ಕೊಡಬೇಕು. ಕೈ ಮೊಳಕೈಯಲ್ಲಿ ಉಂಟಾಗುವ ಕೋನಗಳನ್ನು ತೋರಿಸಿ ಗುರುತಿಸಲು ಹೇಳಿರಿ. ಯೋಗಾಸನ ಸಂದರ್ಭದಲ್ಲಿಯೂ ಈ ಕೃತಿಯನ್ನು ಮಾಡಿಸಿಕೊಳ್ಳಬಹುದು.

## ಸ್ವಾಧ್ಯಾಯ

◉ ಕಾಗದದ ಪಟ್ಟಿಗಳಿಂದ ನೀವು ತಯಾರಿಸಿದ ಚೌರಸ ಮೂಲೆಯನ್ನು ಉಪಯೋಗಿಸಿ, ಕೆಳಗಿನ ಯಾವ ಆಕಾರಗಳಲ್ಲಿ ಚೌರಸ ಮೂಲೆಗಳಿವೆ. ಆ ಮೂಲೆಗಳಿಗೆ ✓ ಹೀಗೆ ಗುರುತು ಮಾಡಿರಿ. ಚೌರಸ ಮೂಲೆಗಿಂತ ಚಿಕ್ಕದಾಗಿರುವ ಮೂಲೆಗೆ ● ಹೀಗೆ ಗುರುತು ಮಾಡಿರಿ ಮತ್ತು ಚೌರಸ ಮೂಲೆಗಿಂತ ದೊಡ್ಡದಾಗಿರುವ ಮೂಲೆಗೆ ಶ್ರ * ಹೀಗೆ ಗುರುತು ಮಾಡಿರಿ.



◉ ಕೆಳಗಿನ ಆಕೃತಿಗಳನ್ನು ನೋಡಿ ಅವುಗಳಲ್ಲಿನ ಮೂಲೆಗಳ ಸರಿಯಾದ ಸಂಖ್ಯೆಯನ್ನು ಬರೆಯಿರಿ.



(೧) ಚೌರಸ ಮೂಲೆಗಳು ಎಷ್ಟು ಇವೆ? ☐

(೨) ಚೌರಸ ಮೂಲೆಕ್ಕಿಂತ ಚಿಕ್ಕದಾಗಿರುವ ಮೂಲೆಗಳು ಎಷ್ಟು ಇವೆ? ☐

(೩) ಚೌರಸ ಮೂಲೆಕ್ಕಿಂತ ದೊಡ್ಡದಾಗಿರುವ ಮೂಲೆಗಳು ಎಷ್ಟು ಇವೆ? ☐

### ಕೃತಿ ಮಾಡಿರಿ.

ಜಿಯೋಬೋರ್ಡ್‌ನಲ್ಲಿರುವ ಬಿಂದುಗಳನ್ನು ದಾರದಿಂದ ಅಥವಾ ರಬ್ಬರ್ ಬ್ಯಾಂಡ್‌ನಿಂದ ಜೋಡಿಸಿ ಚೌರಸ, ಆಯತ, ತ್ರಿಕೋನ, ಪಂಚಕೋನ ಇತ್ಯಾದಿಗಳನ್ನು ತಯಾರಿಸಿರಿ.



**ಶಿಕ್ಷಕರಿಗಾಗಿ:** ಜಿಯೋಬೋರ್ಡ್‌ದ ಉಪಯೋಗ ಮಾಡಿರಿ.

# ೧೧. ಸಮಮಿತಿ



ಮೇಲಿನ ಚಿತ್ರದ ನಿರೀಕ್ಷಣೆ ಮಾಡಿ ಎಡಬದಿಗೆ ಮತ್ತು ಬಲಬದಿಗೆ ಯಾವ ವಸ್ತುಗಳು ಒಂದೇ ತರಹ ಕಾಣಿಸುತ್ತವೆ ಎಂಬುದರ ಕುರಿತು ಚರ್ಚೆ ಮಾಡಿರಿ.

## ತಿಳಿದುಕೊಳ್ಳಿರಿ.

### ಆಕಾರಗಳಲ್ಲಿಯ ಸಮಮಿತಿ:

ದೀಪಾವಳಿಯಲ್ಲಿ ಆಕಾಶ ದೀಪ ತಯಾರಿಸಲು ಮಕ್ಕಳು ಬಣ್ಣದ ಕಾಗದವನ್ನು ತಂದರು. ಅವರು ಅದನ್ನು ಬೇರೆ-ಬೇರೆ ಆಕಾರಗಳಲ್ಲಿ ಕತ್ತರಿಸಿದರು ಅದರಲ್ಲಿಯ ಒಂದು ಆಯತಾಕರದ ಕಾಗದ ಎರಡು ಸಮಾನ ಭಾಗಗಳಾಗುವಂತೆ ಮಡಿಕೆ ಮಾಡಿದರು.




ಆಯತಾಕಾರದ ಕಾಗದವನ್ನು ಮೇಲೆ ತೋರಿಸಿದಂತೆ ಮಡಿಕೆ ಹಾಕಿದಾಗ, ಅದರ ಎರಡೂ ಭಾಗಗಳು ಒಂದಕ್ಕೊಂದು ಸರಿಯಾಗಿ ಹೊಂದಿಕೆಯಾಗುತ್ತವೆ ಅಂದರೆ, ಈ ಆಕಾರವು ಆ ಮಡಿಕೆ ಮಾಡಿದ ರೇಷೆಯ ಸಂದರ್ಭದಲ್ಲಿ ಸಮಮಿತಿ ಹೊಂದಿದೆ ಎಂದರ್ಥ.

## ಚರ್ಚೆ ಮಾಡಿರಿ.

 ಆಯತಾಕಾರದ ಕಾಗದವನ್ನು ಈ ರೀತಿಯಾಗಿ ಮಡಿಕೆ ಹಾಕಿದರೆ ಉಂಟಾಗುವ ಭಾಗಗಳು ಒಂದಕ್ಕೊಂದು ಸರಿಯಾಗಿ ಹೊಂದಿಕೊಳ್ಳುತ್ತವೆಯೇ?

**ಯಾವ ಆಕೃತಿಯು ಯಾವುದೇ ಒಂದು ರೇಷೆಯಿಂದ ಎರಡು ಸಮಾನ ಭಾಗಗಳಾಗುತ್ತವೆ. ಆ ಆಕೃತಿಯು ಸಮಮಿತಿ ಆಕೃತಿ ಇರುತ್ತದೆ ಮತ್ತು ಆ ರೇಷೆ ಆ ಆಕೃತಿಯ ಸಮಮಿತಿ ಅಕ್ಷ ಇರುತ್ತದೆ.**



**ಶಿಕ್ಷಕರಿಗಾಗಿ:** ವಿದ್ಯಾರ್ಥಿಗಳಿಗೆ ಸಮಮಿತಿ/ಅಸಮಮಿತಿ ಆಕಾರಗಳನ್ನು ತಯಾರಿಸಲು ಹೇಳಿರಿ.

## ಮಾಡಿ ನೋಡಿರಿ.

(೧) ಕೆಳಗಿನ ಆಕಾರಗಳನ್ನು ಕಾಗದದ ಮೇಲೆ ಬಿಡಿಸಿರಿ ಮತ್ತು ಅಂಚುಗಳ ಮೇಲೆ ಕತ್ತರಿಸಿಕೊಳ್ಳಿರಿ. ಅವುಗಳನ್ನು ಮಡಿಕೆ ಹಾಕುವ ಮೂಲಕ ಆ ಆಕಾರಗಳಲ್ಲಿಯ ಸಮಮಿತಿ ಶೋಧಿಸಿರಿ.



(೨) ಮುಂದಿನ ಪ್ರತಿಯೊಂದು ಆಕೃತಿಯ ಮೇಲೆ ಟ್ರೇಸ ಪೇಪರ ಇಟ್ಟು ರೇಖಾಟನೆ ಮಾಡಿ ಅಂಚುಗಳಿಂದ ಕತ್ತರಿಸಿರಿ. ಮಡಿಕೆ ಮಾಡುವ ಮೂಲಕ ಆ ಆಕಾರಗಳಲ್ಲಿ ಸಮಮಿತಿಯನ್ನು ಹುಡುಕಿರಿ. ಮಡಿಕೆ ಮಾಡಿದಾಗ ಯಾವ ಆಕಾರಗಳು ಒಂದಕ್ಕೊಂದು ಸರಿಹೊಂದುವುದಿಲ್ಲ. ಅವುಗಳನ್ನು ಬೇರೆ-ಬೇರೆ ಮಾಡಿರಿ. ಆ ಆಕಾರಗಳು ಸಮಮಿತಿ ಇರುವುದಿಲ್ಲ ಎಂಬುದನ್ನು ಗಮನದಲ್ಲಿಟ್ಟುಕೊಳ್ಳಿರಿ.



(೩) ಹೊಸ ವರ್ಷದ ಅಂಗವಾಗಿ ವಿವಿಧ ಆಕಾರಗಳ ಶುಭಾಶಯ ಪತ್ರಗಳು ದೊರೆಯುತ್ತವೆ. ಕೆಲವು ಶುಭಾಶಯ ಪತ್ರಗಳ ಆಕಾರಗಳನ್ನು ಕೊಡಲಾಗಿದೆ. ಅವು ಸಮಮಿತಿ ಯಾಗಲು ಯೋಗ್ಯ ಸ್ಥಳದಲ್ಲಿ ಅಕ್ಷವನ್ನು ಎಳೆಯಿರಿ. (ಇಂತಹ ಕೆಲವು ಶುಭಾಶಯ ಪತ್ರಗಳನ್ನು ತಯಾರಿಸಿರಿ.)



(೪) ಸಮಮಿತಿಯ ಗುಣಧರ್ಮಗಳ ಉಪಯೋಗ ಮಾಡಿ, ಬಣ್ಣದ ಕಾಗದವನ್ನು ಉಪಯೋಗಿಸಿ ಮುಖವಾಡಗಳನ್ನು ತಯಾರಿಸಿರಿ.



(೫) ನಿಮ್ಮ ಸುತ್ತ-ಮುತ್ತಲಿನ ಮರಗಳ ಎಲೆಗಳ ನಿರೀಕ್ಷಣೆ ಮಾಡಿರಿ. ಅವುಗಳಲ್ಲಿಯ ಸಮಮಿತಿಯನ್ನು ಹುಡುಕಿರಿ.

(೬) ಮುಂದಿನ ಎಲೆಗಳಲ್ಲಿಯ ಸಮಮಿತಿಗಳನ್ನು ಹುಡುಕಿ, ಅವುಗಳನ್ನು ಪೆನ್/ಪೆನ್ಸಿಲ್‌ನಿಂದ ತೀಡಿರಿ.



**ಶಿಕ್ಷಕರಿಗಾಗಿ:** ಮಕ್ಕಳಿಗೆ ಅವರ ಸುತ್ತ-ಮುತ್ತಲಿನಲ್ಲಿ ಸಮಮಿತಿಯಿರುವ ಮತ್ತು ಸಮಮಿತಿಯಿಲ್ಲದ ಆಕಾರಗಳ ನಡುವಿನ ವ್ಯತ್ಯಾಸವನ್ನು ಸ್ವತಃ ಅನುಭವಿಸಲು ಪ್ರೋತ್ಸಾಹಿಸಿರಿ. ಅವರಿಗೆ ಸ್ಪಷ್ಟೀಕರಣ ನೀಡಲು ಅವಕಾಶ ಕೊಡಿರಿ. ವಿವಿಧ ಹಬ್ಬಗಳನ್ನು ಆಚರಿಸುವಾಗ ಹಾಗೂ ಪ್ರಸಂಗಕ್ಕೆನುಸರಿಸಿ ತಕ್ಕಂತೆ ಅಲಂಕಾರ ಮಾಡುವಾಗ, ಅವು ಸೌಂದರ್ಯಾತ್ಮಕ, ಆಕರ್ಷಕವಾಗಿ ಕಾಣಲು ಸಮಮಿತಿಯು ಹೇಗೆ ಉಪಯುಕ್ತವಾಗುತ್ತದೆ ಎಂಬುದರ ಬಗ್ಗೆ ವಿದ್ಯಾರ್ಥಿಗಳಿಗೆ ಪ್ರತ್ಯಕ್ಷ ಅನುಭವ ಕೊಡಬೇಕು.

◉ ಚುಕ್ಕೆಗಳ ಕಾಗದವನ್ನು ಉಪಯೋಗಿಸಿ ಸಮಮಿತಿ ಆಕೃತಿ ತೆಗೆಯಿರಿ.

(೧) ಕೊಟ್ಟಿರುವ ರೇಷೆ ಸಮಮಿತಿ ಅಕ್ಷವಾಗಲು ಆಕೃತಿ ಪೂರ್ಣ ಮಾಡಿರಿ.



(೨) ಕೊಟ್ಟಿರುವ ಸಮಮಿತಿ ಅಕ್ಷದ ಇನ್ನೊಂದು ಬದಿಯ ಪ್ರತಿಮೆಯನ್ನು ಪೂರ್ಣ ಮಾಡಿ, ಆ ಪ್ರತಿಮೆಯಲ್ಲಿ ಯಾವ ಆಕಾರ ಅಡಗಿದೆ ಎಂಬುದನ್ನು ಗುರುತಿಸಿರಿ ಮತ್ತು ಚಿತ್ರವನ್ನು ಪೂರ್ಣ ಮಾಡಿರಿ.





## ಮಾಡಿ ನೋಡಿರಿ.

◉ ಗಡಿಯಾರದ ಮುಳ್ಳಿನ ದಿಕ್ಕಿನಲ್ಲಿ (ಪ್ರದಕ್ಷಿಣವಾಗಿ) ಸಮಮಿತಿ ಆಕಾರಗಳನ್ನು ತಿರುಗಿಸಿ ನೋಡಿರಿ.



ಪ್ರದಕ್ಷಿಣೆಯ ದಿಕ್ಕು





**ಶಿಕ್ಷಕರಿಗಾಗಿ:** ಮಹಾರಾಷ್ಟ್ರದಲ್ಲಿ ರಂಗೋಲಿಯನ್ನು ಹಬ್ಬ, ಹರಿದಿನಗಳಲ್ಲಿ ಮತ್ತು ಶುಭ ಸಂದರ್ಭಗಳಲ್ಲಿ ಅಲಂಕಾರಕ್ಕಾಗಿ ಬಳಸಲಾಗುತ್ತದೆ. ಅದೇ ರೀತಿ ತಮಿಳುನಾಡಿನಲ್ಲಿ ಇದನ್ನು 'ಕೋಲಂ' ಎಂದು ಮತ್ತು ಬಂಗಾಲದಲ್ಲಿ 'ಅಲಿಪನಾ' ಎಂಬ ಹೆಸರಿನಿಂದ ಈ ಕಲೆಯನ್ನು ಪೋಷಿಸಿಕೊಂಡು ಬರಲಾಗಿದೆ. ಇವುಗಳ ಉಪಯೋಗವನ್ನು ನಮಗೆ ಆಕೃತಿಬಂಧ, ಕ್ರಮಬದ್ಧತೆ, ಸಮರೂಪತೆ, ಸಮಮಿತಿ ಅಭ್ಯಾಸ ಮಾಡಲು ಸಹಾಯವಾಗುತ್ತದೆ ಎಂಬುದನ್ನು ಸ್ಪಷ್ಟಪಡಿಸಬೇಕು. ನಮ್ಮ ಸಂಸ್ಕೃತಿಯನ್ನು ಜೋಪಾಸನೆ ಮಾಡುವಾಗ ನಾವು ಇತರರ ಸಂಸ್ಕೃತಿಯನ್ನು ಸಹ ಗೌರವಿಸಬೇಕು. ಎಂಬುದನ್ನು ವಿದ್ಯಾರ್ಥಿಗಳಿಗೆ ತಿಳಿಸಿಕೊಡಬೇಕು. ಗಣಿತ ವಿಷಯವು ಇತರ ವಿಷಯಗಳೊಂದಿಗೆ ಇರುವ ಸಹಸಂಬಂಧವನ್ನು ಸ್ಪಷ್ಟಪಡಿಸಿರಿ. ಪ್ರಾಚೀನ ಕಾಲದಲ್ಲಿಯ ಅನೇಕ ದೇವಾಲಯಗಳು, ಮಸೀದಿಗಳು, ಚರ್ಚ್ ಮತ್ತು ವಿಹಾರಗಳಲ್ಲಿ ಇಂತಹ ಆಕಾರಗಳ ಕಲಾಕೃತಿ ದೊರೆಯುತ್ತವೆ. ಇದರಮೇಲಿಂದ ಈ ಕಲೆಯು ಸಾವಿರಾರು ವರ್ಷಗಳ ಹಿಂದೆಯೇ ಅಸ್ತಿತ್ವದಲ್ಲಿತ್ತು ಎಂಬ ಅರಿವನ್ನು ವಿದ್ಯಾರ್ಥಿಗಳಲ್ಲಿ ಮೂಡಿಸಬೇಕು. ತಾಜಮಹಲ, ಬೀಬಿ ಕಾ ಮಕಬರಾ, ಮಹಾರಾಷ್ಟ್ರದ ಪ್ರಸಿದ್ಧ ಗುಹೆಗಳು ಮತ್ತು ಪ್ರಾಚೀನ ವಾಸ್ತುಶಿಲ್ಪಗಳಲ್ಲಿಯ ನಕ್ಷೆಗಳಲ್ಲಿ ಈ ಅದ್ಭುತವಾದ ಸಮಮಿತಿಗಳು ಕಂಡುಬರುತ್ತವೆ. ಹೀಗೆ ನಿಮ್ಮ ಪರಿಸರದಲ್ಲಿ ಕಂಡುಬರುವ ಸಮಮಿತಿಗಳ ಉದಾಹರಣೆಗಳನ್ನು ಹೇಳಿರಿ. ಅಂಟಿಸುವ ವಹಿಯಲ್ಲಿ ಇಂತಹ ಚಿತ್ರಗಳ, ಫೋಟೋಗಳ ಸಂಗ್ರಹ ಮಾಡಲು ಹೇಳಿರಿ.

- ಗಡಿಯಾರದ ಮುಳ್ಳಿನ ವಿರುದ್ಧ ದಿಕ್ಕಿನಲ್ಲಿ (ಅಪ್ರದಕ್ಷಿಣವಾಗಿ) ಸಮಮಿತಿ ತಿರುಗಿಸಿ ನೋಡಿರಿ.



ಅಪ್ರದಕ್ಷಿಣ ದಿಕ್ಕು







### ನನಗೆ ತಿಳಿಯಿತು.

ಗಡಿಯಾರದ ಮುಳ್ಳಿನ ದಿಕ್ಕಿನಲ್ಲಿ ಅಥವಾ ವಿರುದ್ಧ ದಿಕ್ಕಿನಲ್ಲಿ ಸಮಮಿತಿ ಆಕಾರಗಳನ್ನು ತಿರುಗಿಸಿದರೂ ಸಹ, ಆ ಆಕಾರಗಳಲ್ಲಿ ಯಾವುದೇ ಬದಲಾವಣೆ ಉಂಟಾಗುವುದಿಲ್ಲ.

## ಸ್ವಾಧ್ಯಾಯ

**(೧) ಕೊಟ್ಟಿರುವ ಆಕೃತಿಗಳ ನಿರೀಕ್ಷಣೆ ಮಾಡಿರಿ. ಆ ಆಕೃತಿಯು ಸಮಮಿತಿಯಾಗಲು ಬೇಕಾದ ಸರಿಯಾದ ಭಾಗವನ್ನು ಪರ್ಯಾಯಗಳಿಂದ ಗುರುತಿಸಿ ಅದರ ಕೆಳಗಿನ ಚೌಕಟ್ಟಿನಲ್ಲಿ ✓ ಹೀಗೆ ಗುರುತು ಮಾಡು.**

- 

೧) 

೨) 

- 

೧) 

೨) 



**ಶಿಕ್ಷಕರಿಗಾಗಿ:** ಗಡಿಯಾರದ ಮುಳ್ಳಿನ ದಿಕ್ಕಿನಲ್ಲಿ ಮತ್ತು ವಿರುದ್ಧ ದಿಕ್ಕಿನಲ್ಲಿ ತಿರುಗಿಸುವಾಗ ವಸ್ತುಗಳ ಆಕಾರ ಹಾಗೂ ಸ್ಥಿತಿಯಲ್ಲಿ ಹೇಗೆ ಬದಲಾವಣೆಯಾಗುತ್ತದೆ ಎಂಬುದನ್ನು ಅಂದಾಜು ಮಾಡಲು ವಿದ್ಯಾರ್ಥಿಗಳಿಗೆ ಹೇಳಿರಿ. ಅವುಗಳ ಉಪಯೋಜನೆ ಸ್ಪಷ್ಟಪಡಿಸಿರಿ. ಈ ಸಮಮಿತಿಗಳ ದೈನಂದಿನ ಜೀವನದಲ್ಲಿಯ ಉದಾಹರಣೆಗಳನ್ನು ಕೊಡಬೇಕು. ವಿವಿಧ ಇನ್ಫೋಗ್ರಾಫಿಕ್ಸ್‌ಗಳಲ್ಲಿ, ಜಾಹೀರಾತುಗಳಲ್ಲಿ ಇವುಗಳ ಉಪಯೋಗ ಹೇಗೆ ಮಾಡುತ್ತಾರೆ ಎಂಬುದನ್ನು ಸ್ಪಷ್ಟಪಡಿಸಬೇಕು.

# ೧೨. ಆಕಾರಮಾನ ಹಾಗೂ ಧಾರಕತೆ

## ನಿರೀಕ್ಷಣೆ ಮಾಡಿರಿ.

   

ಮೇಲಿನ ಪಾತ್ರೆಗಳನ್ನು ನೀರಿನಿಂದ ಪೂರ್ತಿಯಾಗಿ ತುಂಬಿಸಬೇಕಾಗಿದೆ. ಅವುಗಳಲ್ಲಿ ಯಾವ ಪಾತ್ರೆಯಲ್ಲಿ ಎಲ್ಲಕ್ಕೂ ಹೆಚ್ಚು ನೀರು ಹಿಡಿಯುತ್ತದೆಯೋ ಅದರ ಕೆಳಗೆ ✓ ಈ ಗುರುತು ಮಾಡಿರಿ.

## ಚರ್ಚೆ ಮಾಡಿರಿ.

(೧) ರಮೇಶನು ಒಂದು ಪಾತ್ರೆಯಲ್ಲಿ ಒಂದೇ ಆಕಾರದ (ಅಳತೆಯ) ೧೦ ಬಟ್ಟಲು ನೀರು ಹಾಕಿದಾಗ ಪಾತ್ರೆಯು ಪೂರ್ತಿ ತುಂಬಿತು. ಅನಘಾ ಅದೇ ಪಾತ್ರೆಗೆ ೪ ತಂಬಿಗೆ ನೀರನ್ನು ಹಾಕಿದಾಗ ಪಾತ್ರೆ ಪೂರ್ತಿ ತುಂಬಿತು ಹೀಗೇಕೆ ಆಗಿರಬಹುದು?

 

- ಪಾತ್ರೆಯಲ್ಲಿಯ ನೀರಿನ ಅಳತೆಯು ಬೇರೆ-ಬೇರೆ ಬಂದಿತು ಕಾರಣ ಅಳತೆ ಮಾಡಲು ಬೇರೆ-ಬೇರೆ ಸಾಧನಗಳನ್ನು ಉಪಯೋಗಿಸಿದ್ದಾರೆ. ಆ ಪಾತ್ರೆಯ ಸಾಮರ್ಥ್ಯ ೧೦ ಬಟ್ಟಲು ಹಾಗೆಯೇ ೪ ತಂಬಿಗೆ ಇದೆ. ಒಂದೇ ಪಾತ್ರೆಯನ್ನು ತುಂಬಲು ಬೇರೆ-ಬೇರೆ ಪಾತ್ರೆಗಳನ್ನು (ಅಳತೆಗಳನ್ನು) ಉಪಯೋಗಿಸಿದ್ದಾರೆ.

### ಧಾರಕತೆ

## ತಿಳಿದುಕೊಳ್ಳಿರಿ.

 

ಎರಡೂ ಪಾತ್ರೆಗಳ ಧಾರಕತೆ ೪ ತಂಬಿಗೆಗಳು ಇವೆ. ಏಕೆಂದರೆ ಇಲ್ಲಿ ಅಳತೆಯ ಮೂಲಮಾನಗಳು (ತಂಬಿಗೆಗಳು) ಸಮಾನ ಇವೆ. ಇದರಿಂದ ತಿಳಿಯುವುದೇನೆಂದರೆ, ಧಾರಕತೆ ಅಳೆಯಲು ಯಾರೇ ಆದರೂ ಒಂದೇ ರೀತಿಯ ಸಾಧನವನ್ನು ಉಪಯೋಗಿಸಿದರೆ, ಅಳತೆಯು ಒಂದೇ ಸಮನಾಗಿ ಬರುತ್ತದೆ. ಕೊಟ್ಟಿರುವ ಪಾತ್ರೆಯಲ್ಲಿ ಯಾರೇ ಆಗಲಿ ಹಾಗೂ ಯಾವುದೇ ಒಂದು ಸಾಧನದಿಂದ ನೀರನ್ನು ತುಂಬಿದರೂ ಸಹ ಆ ಪಾತ್ರೆಯ ಧಾರಕತೆ (ಸಾಮರ್ಥ್ಯ) ಒಂದೇ ರೀತಿ ಬರಲು ಪ್ರಮಾಣಿತ ಮೂಲಮಾನಗಳನ್ನು ಉಪಯೋಗಿಸುತ್ತಾರೆ.

## ನನಗೆ ತಿಳಿಯಿತು.

ಯಾರೇ ಅಳತೆ ಮಾಡಿದರೂ ಅದು ಒಂದೇ ತರಹ ಬರಲು ಪ್ರಮಾಣಿತ ಅಳತೆಯ ಮೂಲಮಾನಗಳನ್ನು ಉಪಯೋಗಿಸುವುದು ಅವಶ್ಯಕವಾಗಿದೆ.



**'ಲೀಟರ' ಇದು ದ್ರವ ಪದಾರ್ಥಗಳನ್ನು ಅಳೆಯುವ ಪ್ರಮಾಣಿತ ಮೂಲಮಾನ ಇದೆ.**

## ಆಕಾರಮಾನ

ಗೌರಿ ಹಾಲು ಮಾರುವ ಕಾಕಾನು ಪ್ರತಿದಿನ ಅಳತೆ ಪಾತ್ರೆಯನ್ನು ಉಪಯೋಗಿಸಿ ಹಾಲು ಅಳೆಯುವುದನ್ನು ನೋಡುತ್ತಾಳೆ.





ನನ್ನ ಹತ್ತಿರ ಒಂದು ಲೀಟರ್ ನೀರಿನ ಬಾಟಲಿ ಇದೆ. ಅದರಲ್ಲಿರುವ ನೀರನ್ನು ನಾನು ಒಂದು ಜಗನಲ್ಲಿ ಸುರಿದಾಗ ಅದು ನೀರಿನಿಂದ ಪೂರ್ತಿಯಾಗಿ (ತುದಿವರೆಗೆ) ತುಂಬಿತು.

ಹಾಲಿನ ಕಿಟಲಿಯಲ್ಲಿ ೧೦ ಲೀಟರ್ ಹಾಲು ಇತ್ತು ಅಂದರೆ ಕಿಟಲಿಯಲ್ಲಿಯ ಹಾಲಿನ ಆಕಾರಮಾನ ೧೦ ಲೀಟರ್ ಇದೆ. ಅದರಲ್ಲಿಯ ೧ ಲೀಟರ್ ಹಾಲನ್ನು ನನ್ನ ಪಾತ್ರೆಗೆ ಸುರಿಯಲಾಯಿತು ಅಂದರೆ ನನ್ನ ಪಾತ್ರೆಯಲ್ಲಿರುವ ಹಾಲಿನ ಆಕಾರಮಾನ ೧ ಲೀಟರ್ ಇದೆ.

### ಚರ್ಚೆ ಮಾಡಿರಿ.

ಯಾವ ಪದಾರ್ಥಗಳನ್ನು ಅಳೆಯಲು 'ಲೀಟರ್'ದ ಅಳತೆಯನ್ನು ಉಪಯೋಗಿಸುತ್ತಾರೆ? ಚರ್ಚೆ ಮಾಡಿರಿ. 'ಲೀಟರ್' ಎನ್ನುವ ಶಬ್ದವು ಯಾವ ಯಾವ ವಸ್ತುಗಳ ಪ್ಯಾಕೆಟ್‌ಗಳ, ಡಬ್ಬಿಗಳ, ಬಾಟಲಿಗಳ ಮೇಲೆ ಇರುತ್ತದೆ ಎಂಬುದನ್ನು ಶೋಧಿಸಿರಿ. ಅಂತಹ ವಸ್ತುಗಳ ಪಟ್ಟಿಯನ್ನು ತಯಾರಿಸಿ ಚರ್ಚೆ ಮಾಡಿರಿ.

### ಅಂದಾಜು ಮಾಡಿರಿ.

(೧) ಕೆಳಗಿನ ವಾಕ್ಯಗಳಲ್ಲಿಯ ಸರಿಯಾದ ಪರ್ಯಾಯವನ್ನು ಆಯ್ಕೆ ಮಾಡಿರಿ:

- ಲೋಟದಲ್ಲಿ ಅಂದಾಜು ೧ ಲೀಟರ್‌ಗಿಂತ ಹೆಚ್ಚು/ಕಡಿಮೆ ನೀರು ಹಿಡಿಯುತ್ತದೆ.
- ಬಕೆಟ್‌ನಲ್ಲಿ ಅಂದಾಜು ೧ ಲೀಟರ್‌ಗಿಂತ ಹೆಚ್ಚು/ಕಡಿಮೆ ನೀರು ಹಿಡಿಯುತ್ತದೆ.
- ಮಗ್‌ನಲ್ಲಿ ಅಂದಾಜು ೧ ಲೀಟರ್‌ಗಿಂತ ಹೆಚ್ಚು/ಕಡಿಮೆ ನೀರು ಹಿಡಿಯುತ್ತದೆ.

## ಮಾಡಿ ನೋಡಿರಿ.

ನಿಮ್ಮ ಮನೆಯಲ್ಲಿರುವ ಬೇರೆ-ಬೇರೆ ಆಕಾರದ ಎರಡು ಪಾತ್ರೆಗಳನ್ನು ತೆಗೆದುಕೊಳ್ಳಿರಿ. ಉದಾಹರಣೆಗಾಗಿ: ಒಂದು ಸಣ್ಣ ಬಟ್ಟಲು, ಒಂದು ಲೋಟ. ೧ ಲೀಟರ್ ಬಾಟಲಿಯನ್ನು ತುಂಬಿಸಲು ಎಷ್ಟು ಸಣ್ಣ ಬಟ್ಟಲು ಸುರಿಯ ಬೇಕಾಗುತ್ತದೆ? ೧ ಲೀಟರ ಬಾಟಲಿಯನ್ನು ತುಂಬಿಸಲು ಎಷ್ಟು ಲೋಟ ನೀರಿನ್ನು ಸುರಿಯ ಬೇಕಾಗುತ್ತದೆ? ಮೊದಲು ಅಂದಾಜು ಮಾಡಿರಿ ಮತ್ತು ನಂತರ ಪ್ರತ್ಯಕ್ಷವಾಗಿ ನೀರನ್ನು ಸುರಿದು ನಿಮ್ಮ ಅಂದಾಜು ಸರಿಯಾಗಿದೆಯೇ ಎಂದು ಪರೀಕ್ಷಿಸಿ ನೋಡಿರಿ.

| ಪಾತ್ರೆಗಳು | ೧ ಲೀಟರ ಬಾಟಲಿ | ನೀರಿನಿಂದ ಪೂರ್ಣ ತುಂಬಿಸುವುದು |
|---|---|---|
| | ಅಂದಾಜು ಅಳತೆ | ಪ್ರತ್ಯಕ್ಷ ಅಳತೆ |
|  | | |

೧ ಲೀಟರ್‌ಗಿಂತ ಹೆಚ್ಚು ನೀರು ಸಂಗ್ರಹಿಸಬಹುದಾದ ಪಾತ್ರೆಗಳ ಪಟ್ಟಿಯನ್ನು ತಯಾರಿಸಿರಿ.

## ನನಗೆ ತಿಳಿಯಿತು.

ಕೊಡ, ಬಕೆಟ್, ಡ್ರಮ್, ಹಂಡೆ, ಬೊಗೋಣಿ ಅಥವಾ ಇನ್ಯಾವುದೇ ಪಾತ್ರೆಯನ್ನು ಪೂರ್ತಿಯಾಗಿ ತುಂಬಲು ಎಷ್ಟು ನೀರು ಹಿಡಿಯುತ್ತದೆಯೋ ಅದು ಆ ಪಾತ್ರೆಯ ಧಾರಕತೆ ಆಗಿರುತ್ತದೆ. ಒಂದು ಪಾತ್ರೆಯು ೨ ಲೀಟರ ನೀರು ಹಿಡಿಯುತ್ತಿದ್ದರೆ ಆ ಪಾತ್ರೆಯ ಧಾರಕತೆ ೨ ಲೀಟರ ಇದೆ ಎಂಬುದು ಗಮನಕ್ಕೆ ಬರುತ್ತದೆ.

## ಹೇಳಿ ನೋಡೋಣ!





ಮೇಲಿನವುಗಳಲ್ಲಿ ಯಾವ ವಾಹನದಲ್ಲಿಯ ಇಂಧನದ ಟ್ಯಾಂಕಿನಲ್ಲಿ ಹೆಚ್ಚು ಡೀಸೆಲ್ ಹಿಡಿಯುತ್ತದೆ?................

ಯಾವ ವಾಹನದ ಟ್ಯಾಂಕಿನಲ್ಲಿ ಎಲ್ಲಕ್ಕೂ ಹೆಚ್ಚು ಡೀಸೆಲ್ ಹಿಡಿಯುತ್ತದೆಯೋ ಆ ವಾಹನದ ಟ್ಯಾಂಕಿನ ಧಾರಕತೆ ಹೆಚ್ಚು ಇರುತ್ತದೆ.

◉ **ಕೆಳಗಿನ ಚಿತ್ರಗಳ ನಿರೀಕ್ಷಣೆ ಮಾಡಿರಿ.**


ಒಂದು ಲೀಟರ


ಅರ್ಧ ಲೀಟರ


ಕಾಲು ಲೀಟರ


ಮುಕ್ಕಾಲು ಲೀಟರ

(೧) ಇಲ್ಲಿ ಮೊದಲನೆಯ ಬಾಟಲಿಯ ನಾಲ್ಕು ಭಾಗಗಳು ಕೋಕಂ ಶರಬತನಿಂದ ತುಂಬಿವೆ ಅಂದರೆ ಬಾಟಲಿಯಲ್ಲಿ ಒಂದು ಲೀಟರ ಕೋಕಂ ಶರಬತ ಇದೆ.

(೨) ಎರಡನೆಯ ಬಾಟಲಿಯಲ್ಲಿ ೪ ಭಾಗಗಳಲ್ಲಿ ಕೇವಲ ಎರಡು ಭಾಗಗಳು ಮಾತ್ರ ಕೋಕಂ ಶರಬತನಿಂದ ತುಂಬಿದೆ. ಅಂದರೆನೇ ಬಾಟಲಿಯಲ್ಲಿ ಅರ್ಧ ಲೀಟರ್ ಕೋಕಂ ಶರಬತ ಇದೆ.

(೩) ಮೂರನೆಯ ಬಾಟಲಿಯಲ್ಲಿ ೪ ಭಾಗಗಳಲ್ಲಿ ಒಂದು ಭಾಗ ಕೋಕಂ ಶರಬತನಿಂದ ತುಂಬಿದೆ. ಅಂದರೆ ಬಾಟಲಿಯಲ್ಲಿ ಕಾಲು ಲೀಟರ್ ಕೋಕಂ ಶರಬತ ಇದೆ.

(೪) ನಾಲ್ಕನೆಯ ಬಾಟಲಿಯಲ್ಲಿ ೪ ಭಾಗಗಳಲ್ಲಿ ಮೂರು ಭಾಗಗಳು ಕೋಕಂ ಶರಬತನಿಂದ ತುಂಬಿವೆ. ಅಂದರೆ ಬಾಟಲಿಯಲ್ಲಿ ಮುಕ್ಕಾಲು ಲೀಟರ್ ಕೋಕಂ ಶರಬತ ಇದೆ.



## ಮಾಡಿ ನೋಡಿರಿ.

ಎರಡು ಸಲ ಕಾಲು ಲೀಟರ್ ನೀರು ತೆಗೆದುಕೊಂಡರೆ, ಅರ್ಧ ಲೀಟರ್ ನೀರು ಆಗುತ್ತದೆ.

ಕಾಲು ಲೀಟರ್ ಮತ್ತು ಅರ್ಧ ಲೀಟರ್ ಸೇರಿ ಮುಕ್ಕಾಲು ಲೀಟರ್ ಆಗುತ್ತದೆ.

ಮೂರು ಸಲ ಕಾಲು ಲೀಟರ್ ಸೇರಿದರೆ ಮುಕ್ಕಾಲು ಲೀಟರ್ ಆಗುತ್ತದೆ.



## ಕೃತಿ ಮಾಡಿರಿ.

(೧) ಒಂದು ಲೀಟರ್ ಧಾರಕತೆಯ ಒಂದು ಬಾಟಲಿಯನ್ನು ತೆಗೆದುಕೊಳ್ಳಿರಿ.

(೨) ಆ ಬಾಟಲಿಯ ಮೇಲೆ ಶಿಕ್ಷಕರ ಸಹಾಯದಿಂದ ಕಾಲು, ಅರ್ಧ, ಮುಕ್ಕಾಲು ಹೀಗೆ ಗುರುತುಗಳನ್ನು ಮಾಡಿರಿ.

(೩) ಒಂದು ಖಾಲಿ ಪಾತ್ರೆಯನ್ನು ತೆಗೆದುಕೊಳ್ಳಿರಿ.

(೪) ಗುರುತು ಮಾಡಿದ ಬಾಟಲಿಯ ಸಹಾಯದಿಂದ ಖಾಲಿ ಪಾತ್ರೆಯನ್ನು ನೀರಿನಿಂದ ಪೂರ್ತಿಯಾಗಿ ತುಂಬಿರಿ ಪಾತ್ರೆಯ ಧಾರಕತೆ ಕಂಡು ಹಿಡಿಯಿರಿ. ಇದೇ ಕೃತಿಯನ್ನು ಉಪಯೋಗಿಸಿ ಬೇರೆ-ಬೇರೆ ಪಾತ್ರೆಗಳ ಧಾರಕತೆ ತೆಗೆಯಿರಿ.

- **ಮೊದಲು ಅಂದಾಜು ಮಾಡಿ ನಂತರ ೧ ಲೀಟರ್ ಬಾಟಲಿಯನ್ನು ಉಪಯೋಗಿಸಿ ನೀರು ತುಂಬಿಸಿ ನೋಡಿರಿ. ಸರಿಯಾದ ಉತ್ತರಕ್ಕೆ ✓ ಹೀಗೆ ಗುರುತು ಮಾಡಿರಿ.**

| | |
|---|---|
| (೧) ಸಾಧಾರಣವಾಗಿ ಒಂದು ಬಕೆಟ್‌ನಲ್ಲಿ ಎಷ್ಟು ನೀರು ಹಿಡಿಯುತ್ತದೆ? | ಒಂದು ಲೀಟರ್‌ಗಿಂತ ಹೆಚ್ಚು/ಕಡಿಮೆ ನೀರು ಹಿಡಿಯುತ್ತದೆ. |
| (೨) ಸಾಧಾರಣವಾಗಿ ಒಂದು ಮಗ್‌ನಲ್ಲಿ ಎಷ್ಟು ನೀರು ಹಿಡಿಯುತ್ತದೆ? | ಅರ್ಧ ಲೀಟರ್‌ಗಿಂತ ಹೆಚ್ಚು/ಕಡಿಮೆ ನೀರು ಹಿಡಿಯುತ್ತದೆ. |
| (೩) ಸಾಧಾರಣವಾಗಿ ಒಂದು ತಂಬಿಗೆಯಲ್ಲಿ ಎಷ್ಟು ನೀರು ಹಿಡಿಯುತ್ತದೆ? | ಕಾಲು ಲೀಟರ್‌ಗಿಂತ ಹೆಚ್ಚು/ಕಡಿಮೆ ಬೇರೆ-ಬೇರೆ ನೀರು ಹಿಡಿಯುತ್ತದೆ. |



**ಶಿಕ್ಷಕರಿಗಾಗಿ:** ವಿದ್ಯಾರ್ಥಿಗಳಿಗೆ ಬೇರೆ-ಬೇರೆ ಪಾತ್ರೆಗಳನ್ನು ಉಪಯೋಗಿಸಿ ಪ್ರತ್ಯಕ್ಷವಾಗಿ ನೀರಿನ ಅಳತೆ ಮಾಡುವ ಅವಕಾಶವನ್ನು ಕೊಟ್ಟು, ಬಂದಂತಹ ನಿಷ್ಕರ್ಷಗಳ ಮೇಲೆ ಚರ್ಚಿಸಬೇಕು. ಹಾಗೆಯೇ ೧ ಲೀಟರ್ ಅರ್ಧ ಲೀಟರ್ ಅಳತೆಗಳನ್ನು ಉಪಯೋಗಿಸಿ ನೀರನ್ನು ಅಳೆಯುವ ಚಟುವಟಿಕೆಯನ್ನು ಮಾಡಿಸಬೇಕು, ಆಕಾರಮಾನ ಮತ್ತು ಧಾರಕತೆ ಸಂಕಲ್ಪನೆಯನ್ನು ಸ್ಪಷ್ಟಪಡಿಸಬೇಕು. ಅವುಗಳಲ್ಲಿಯ ವ್ಯತ್ಯಾಸವನ್ನು ತಿಳಿಸಿಕೊಡಬೇಕು..

# ೧೩. ಕಾಲಮಾಪನ

## ತಿಳಿದುಕೊಳ್ಳಿರಿ.

- ನಾನು ದೊಡ್ಡ ಮುಳ್ಳು. ನನ್ನ ಹೆಸರು ನಿಮಿಷದ ಮುಳ್ಳು.
- ನಾನು ಗಡಿಯಾರದಲ್ಲಿ ನಿಮಿಷಗಳನ್ನು ತೋರಿಸುತ್ತೇನೆ.
- ಒಂದು ಸಂಖ್ಯೆಯಿಂದ ಮುಂದಿನ ಸಂಖ್ಯೆಗೆ ಹೋದಾಗ ೫ ನಿಮಿಷಗಳಾಗುತ್ತವೆ.



- ನಾನು ಸಣ್ಣ ಮುಳ್ಳು. ನನ್ನ ಹೆಸರು ತಾಸಿನ ಮುಳ್ಳು.
- ನಾನು ಗಡಿಯಾರದಲ್ಲಿಯ ತಾಸುಗಳನ್ನು ತೋರಿಸುತ್ತೇನೆ.
- ನಾನು ಒಂದು ಸಂಖ್ಯೆಯಿಂದ ಮುಂದಿನ ಸಂಖ್ಯೆಗೆ ಹೋದಾಗ ೧ ಗಂಟೆ ವಾಗುತ್ತದೆ.

ಗಂಟೆಯ ಮುಳ್ಳು ೨ರ ಮೇಲೆ ಮತ್ತು ನಿಮಿಷದ ಮುಳ್ಳು ೧೨ರ ಮೇಲೆ ಇದೆ. ಅಂದರೆ ಗಡಿಯಾರದಲ್ಲಿ ೨ ಗಂಟೆಯಾಗಿದೆ. ಗಡಿಯಾರದಲ್ಲಿ ನಿಮಿಷದ ಮುಳ್ಳು ೧೨ ರಿಂದ ಮುಂದೆ ಹೋಗುತ್ತ ಮತ್ತೆ ೧೨-ಕ್ಕೆ ಬಂದಾಗ ಒಟ್ಟು ೬೦ ನಿಮಿಷಗಳಾಗುತ್ತವೆ. ಅಂದರೆ ೧ ಗಂಟೆ ವಾಗುತ್ತದೆ.

### ಗಡಿಯಾರ ವಾಚನ

ಒಂದು ಗಂಟೆಯಲ್ಲಿ ೬೦ ನಿಮಿಷಗಳಿರುತ್ತವೆ. ಗಂಟೆ, ನಿಮಿಷಗಳು ಇವು ಕಾಲಮಾಪನದ ಮೂಲಮಾನಗಳಾಗಿವೆ.





ಅಮ್ಮಾ, ಸಮಯ ಎಷ್ಟಾಯಿತು ಹೇಳು!

ಗಡಿಯಾರದಲ್ಲಿ ಗಂಟೆಯ ಮುಳ್ಳು ೨ರ ಮುಂದೆ ಹೋಗಿದೆ ಅಂದರೆ ೨ ಗಂಟೆಯ ನಂತರದ ಸಮಯ ಎಂದು ಅರ್ಥ. ಪ್ರತಿಯೊಂದು ಎರಡು ಹೊಂದಿಕೊಂಡಿರುವ ಸಂಖ್ಯೆಗಳ ಮನೆಯಲ್ಲಿ ೫-೫ ನಿಮಿಷಗಳ ಅಂತರವಿದೆ, ಆದರಿಂದ ಯಾವ ಸಂಖ್ಯೆಯ ಮೇಲೆ ನಿಮಿಷದ ಮುಳ್ಳು ಇರುತ್ತದೆಯೋ, ಆ ಸಂಖ್ಯೆಯ ವರೆಗೆ ೫ರ ಮಗ್ಗಿ ಹೇಳಬೇಕು. ಇಲ್ಲಿ ನಿಮಿಷದ ಮುಳ್ಳು ೪ರ ಮೇಲಿದೆ, ಹಾಗಾಗಿ ೫ರ ಮಗ್ಗಿಯನ್ನು ೪ರ ವರೆಗೆ ಹೇಳಿರಿ. ೫ ನಾಲ್ಕಲೆ ೨೦ ಅಂದರೆ ೨೦ ನಿಮಿಷಗಳಾಗುತ್ತವೆ. ಆದ್ದರಿಂದ ಗಡಿಯಾರದಲ್ಲಿ ನಿಮಿಷಗಳಾಗುತ್ತವೆ. ಆದ್ದರಿಂದ ಗಡಿಯಾರದಲ್ಲಿ ೨ ಗಂಟೆ ೨೦ ನಿಮಿಷಗಳಾಗಿವೆ.











| | | | |
|---|---|---|---|
| ೩ ಗಂಟೆ ೧೦ ನಿಮಿಷ | ☐ ಗಂಟೆ ೩೫ ನಿಮಿಷ | ೧೨ ಗಂಟೆ ☐ ನಿಮಿಷ | ☐ ಗಂಟೆ ☐ ನಿಮಿಷ |

**ಶಿಕ್ಷಕರಿಗಾಗಿ:** ವಿದ್ಯಾರ್ಥಿಗಳಿಗೆ ಗಡಿಯಾರದ ಪರಿಚಯ ಮಾಡಿಕೊಡಬೇಕು. ಗಣಿತ ಪೆಟ್ಟಿಗೆಯಲ್ಲಿರುವ ಗಡಿಯಾರದ ಸಹಾಯದಿಂದ ಸಮಯವನ್ನು ಹೇಗೆ ಅಳೆಯಬೇಕು ಎಂಬುದನ್ನು ವಿವರಿಸಬೇಕು. ಗಡಿಯಾರದ ಮುಳ್ಳುಗಳ ಸ್ಥಾನ ಬದಲಾದಂತೆ ಗಂಟೆ ಮತ್ತು ನಿಮಿಷಗಳು ಹೇಗೆ ಬದಲಾಗುತ್ತವೆ ಎಂಬುದನ್ನು ಪ್ರಾಯೋಗಿಕವಾಗಿ ಸ್ಪಷ್ಟಪಡಿಸಬೇಕು.

## ಸ್ವಾಧ್ಯಾಯ

**೧) ಶೌರ್ಯ ಬೆಳಿಗ್ಗೆ ೯:೦೦ ಗಂಟೆಗೆ ಶಾಲೆಗೆ ಹೋಗಲು ಹೊರಟನು ಮತ್ತು ೯:೩೦ ಗಂಟೆಗೆ ಶಾಲೆಗೆ ತಲುಪಿದನು.**

   

ಶೌರ್ಯನಿಗೆ ಶಾಲೆಗೆ ತಲುಪಲು........ನಿಮಿಷಗಳು ಬೇಕಾದವು. (ನೀವು ಹೇಗೆ ನಿರ್ಧರಿಸಿದ್ದಿರಿ?)

**೨) ಕೆಳಗಿನ ಗಡಿಯಾರಗಳಲ್ಲಿ ಕಾಣಿಸುವ ಸಮಯವನ್ನು ಗಂಟೆ ಮತ್ತು ನಿಮಿಷಗಳಲ್ಲಿ ಬರೆಯಿರಿ.**

  

☐ ಗಂಟೆಯಾಗಿ ☐ ನಿಮಿಷಗಳು | ☐ ಗಂಟೆಯಾಗಿ ☐ ನಿಮಿಷಗಳು | ☐ ಗಂಟೆಯಾಗಿ ☐ ನಿಮಿಷಗಳು

**೩) ಕೆಳಗೆ ಕೊಟ್ಟಿರುವಂತೆ ನಿಮ್ಮ ದೈನಂದಿನ ಕೆಲಸದ ಸಮಯವನ್ನು ಬರೆದು, ಅದರಂತೆ ಗಡಿಯಾರದಲ್ಲಿ ಮುಳ್ಳುಗಳನ್ನು ತೋರಿಸಿರಿ.**

### ನನ್ನ ದಿನಚರಿ

(೧) ನಾನು ಬೆಳಗ್ಗೆ ...... ಗಂಟೆಗೆ ಏಳುತ್ತೇನೆ.

 

(೨) ನಾನು ಬೆಳಗ್ಗೆ ...... ಗಂಟೆಗೆ ಸ್ನಾನಕ್ಕೆ ಹೋಗುತ್ತೇನೆ.

 

(೩) ನಾನು ...... ಗಂಟೆಗೆ ಉಪಹಾರ ಮಾಡುತ್ತೇನೆ.

 

(೪) ನಾನು ಶಾಲೆಗೆ ...... ಗಂಟೆಗೆ ಹೋಗುತ್ತೇನೆ.

 

(೫) ನನ್ನ ಊಟದ ವಿರಾಮ ...... ಗಂಟೆಗೆ ಇರುತ್ತದೆ.

 

(೬) ನಾನು ಶಾಲೆಯಿಂದ ...... ಗಂಟೆಗೆ ಮನೆಗೆ ಬರುತ್ತೇನೆ.

 

(೭) ನಾನು ಮೈದಾನದಲ್ಲಿ ಆಟವಾಡಲು ...... ಗಂಟೆಗೆ ಹೋಗುತ್ತೇನೆ.

 

(೮) ನಾನು ಊಟ ಮಾಡಲು ...... ಗಂಟೆಗೆ ಕುಳಿತುಕೋಳ್ಳುತ್ತೇನೆ.

 

(೯) ನಾನು ಓದಲು ...... ಗಂಟೆಗೆ ಕುಳಿತುಕೊಳ್ಳುತ್ತೇನೆ.

 

(೧೦) ನಾನು ರಾತ್ರಿ ........ ಗಂಟೆಗೆ ಮಲಗಲು ಹೋಗುತ್ತೇನೆ.

 

## ಕಾಲು, ಅರ್ಧ (ವರೆ), ಮುಕ್ಕಾಲು



### ತಿಳಿದುಕೊಳ್ಳಿರಿ.



೧ ಗಂಟೆ = ೬೦ ನಿಮಿಷಗಳು



ಕಾಲು ಗಂಟೆ = ೧೫ ನಿಮಿಷಗಳು



ಅರ್ಧ ಗಂಟೆ = ೩೦ ನಿಮಿಷಗಳು



ಮುಕ್ಕಾಲು ಗಂಟೆ = ೪೫ ನಿಮಿಷಗಳು



**ಶಿಕ್ಷಕರಿಗಾಗಿ:** ವಿದ್ಯಾರ್ಥಿಗಳೊಂದಿಗೆ ಗಡಿಯಾರದಲ್ಲಿಯ ಮುಳ್ಳುಗಳು ಮತ್ತು ಸಮಯದ ನಡುವಿನ ಸಂಬಂಧದ ಬಗ್ಗೆ ಚರ್ಚಿಸಿರಿ. ಹಾಗೆಯೇ ಗಂಟೆ ಮತ್ತು ನಿಮಿಷಗಳನ್ನು ನೋಡಿ ಸರಿಯಾದ ಸಮಯವನ್ನು ಹೇಳುವುದರ ಬಗ್ಗೆ ಚರ್ಚಿಸಿರಿ.

| ಕಾಲು | ಅರ್ಧ | ಮುಕ್ಕಾಲು |
| --- | --- | --- |
|  |  |  |
| ಗಂಟೆಯ ಮುಳ್ಳು ೧ ಮತ್ತು ೨ರ ನಡುವೆ ಇದೆ. ನಿಮಿಷದ ಮುಳ್ಳು ೩ರ ಮೇಲಿದೆ. ಅಂದರೆ ೧ ಗಂಟೆ ೧೫ ನಿಮಿಷಗಳಾಗಿವೆ. ಇದರರ್ಥ ೧ ಗಂಟೆ (ತಾಸು) ಮತ್ತು ಕಾಲು ಗಂಟೆಯಾಗಿದೆ. '**ಒಂದೂ ಕಾಲು**' ಆಗಿದೆ ಅಂದರೆ, ಇದನ್ನು '**ಒಂದು ಕಾಲು**' ಆಗಿದೆ ಎನ್ನುವರು. | ಗಂಟೆಯ ಮುಳ್ಳು ೩ ಮತ್ತು ೪ರ ನಡುವೆ ಇದೆ. ನಿಮಿಷದ ಮುಳ್ಳು ೬ರ ಮೇಲಿದೆ. ಅಂದರೆ ೩ ಗಂಟೆ ೩೦ ನಿಮಿಷಗಳಾಗಿವೆ. ಇದರರ್ಥ ೩ ಗಂಟೆ ಮತ್ತು ಅರ್ಧ ಗಂಟೆಯಾಗಿದೆ. ಇದನ್ನು '**ಮೂರುವರೆ**' ಆಗಿದೆ ಎನ್ನುವರು. | ಗಂಟೆಯ ಮುಳ್ಳು ೧ ಮತ್ತು ೨ರ ನಡುವೆ ಇದೆ. ನಿಮಿಷದ ಮುಳ್ಳು ೯ರ ಮೇಲಿದೆ. ಅಂದರೆ ೧ ಗಂಟೆ ೪೫ ನಿಮಿಷಗಳಾಗಿವೆ. ೨ ಗಂಟೆಯಾಗಲು ೧೫ ನಿಮಿಷಗಳು ಕಡಿಮೆ ಇವೆ. ಅಂದರೆ '**ಒಂದೂ ಮುಕ್ಕಾಲು**' ಆಗಿದೆ ಎನ್ನುವರು. |
| ೧ ಗಂಟೆ ೧೫ ನಿಮಿಷಗಳು = ಒಂದೂ ಕಾಲು<br>೨ ಗಂಟೆ ೧೫ ನಿಮಿಷಗಳು = ಎರಡೂ ಕಾಲು<br>೪ ಗಂಟೆ ೧೫ ನಿಮಿಷಗಳು = .........<br>೧೦ ಗಂಟೆ ೧೫ ನಿಮಿಷಗಳು = ........ | ೧ ಗಂಟೆ ೩೦ ನಿಮಿಷಗಳು = ಒಂದೂವರೆ<br>೨ ಗಂಟೆ ೩೦ ನಿಮಿಷಗಳು = ಎರಡುವರೆ<br>೫ ಗಂಟೆ ೩೦ ನಿಮಿಷಗಳು = ಐದುವರೆ<br>೧೧ ಗಂಟೆ ೩೦ ನಿಮಿಷಗಳು = ........<br>೭ ಗಂಟೆ ೩೦ ನಿಮಿಷಗಳು = ......... | ೩ ಗಂಟೆ ೪೫ ನಿಮಿಷಗಳು = ಮೂರು ಮುಕ್ಕಾಲು<br>೬ ಗಂಟೆ ೪೫ ನಿಮಿಷಗಳು = ಆರು ಮುಕ್ಕಾಲು<br>೯ ಗಂಟೆ ೪೫ ನಿಮಿಷಗಳು = .............<br>೧೨ ಗಂಟೆ ೪೫ ನಿಮಿಷಗಳು = .......... |

## ಸ್ವಾಧ್ಯಾಯ

**(೧) ಗಡಿಯಾರದಲ್ಲಿ ತೋರಿಸಿದ ಸಮಯವನ್ನು ನೋಡಿ ಬರೆಯಿರಿ.**

| | | | |
| --- | --- | --- | --- |
|  |  |  |  |
| **ಉದಾ:** ೮ ಗಂಟೆ ೧೫ ನಿಮಿಷಗಳು | | ೭ ಗಂಟೆ ೪೫ ನಿಮಿಷಗಳು | |
| ಎಂಟು ಕಾಲು | ಒಂಬತ್ತು ವರೆ | | ನಾಲ್ಕು ಮುಕ್ಕಾಲು |



**ಶಿಕ್ಷಕರಿಗಾಗಿ:** ವಿದ್ಯಾರ್ಥಿಗಳೊಂದಿಗೆ ಕಾಲು, ಅರ್ಧ (ವರೆ) ಮತ್ತು ಮುಕ್ಕಾಲು ಈ ಸಂಕಲ್ಪನೆಗಳ ಬಗ್ಗೆ ಚರ್ಚಿಸಿರಿ. ಅವರಿಗೆ ಗಡಿಯಾರದಲ್ಲಿಯ ಮುಳ್ಳುಗಳ ಸ್ಥಿತಿಯನ್ನು ನೋಡಿ ಕಾಲು, ವರೆ (ಅರ್ಧ) ಮತ್ತು ಮುಕ್ಕಾಲು ಸಹಿತ ಸಮಯ ಹೇಳಲು ರೂಢಿ ಮಾಡಿಸಬೇಕು.

(೨) ಕೆಳಗೆ ಕೊಟ್ಟಿರುವ ಕಾಲಾವಧಿಗೆ ಅನುಗುಣವಾಗಿ ನಿಮ್ಮ ದೈನಂದಿನ ಜೀವನದ ಘಟನೆಗಳನ್ನು ಬರೆಯಿರಿ.

| ಅ.ಕ್ರ. | ಕೆಲವು ವಾರಗಳಲ್ಲಿ ಪೂರ್ಣಗೊಳ್ಳುವ ಕೆಲಸಗಳು | ಕೆಲವು ದಿನಗಳಲ್ಲಿ ಪೂರ್ಣಗೊಳ್ಳುವ ಕೆಲಸಗಳು | ಕೆಲವು ಗಂಟೆಗಳಲ್ಲಿ ಪೂರ್ಣಗೊಳ್ಳುವ ಕೆಲಸಗಳು | ಕೆಲವು ನಿಮಿಷಗಳಲ್ಲಿ ಪೂರ್ಣಗೊಳ್ಳುವ ಕೆಲಸಗಳು |
|---|---|---|---|---|
| ೧. | ತರಗತಿಯಲ್ಲಿ ಪಾಠ ಮುಗಿಸುವುದು | ಸ್ವೆಟರ್ ಹಣೆಯುವುದು | ರಾತ್ರಿ ಮಲಗುವುದು | ಊಟ ಮಾಡುವುದು |
| ೨. | | | | |
| ೩. | | | | |
| ೪. | | | | |

(೩) ಕೆಳಗಿನ ಕೋಷ್ಟಕದಲ್ಲಿ ಕೊಟ್ಟಿರುವ ಸಮಯದಲ್ಲಿ ಮಾಡುವ ಕೆಲಸಗಳ ಪಟ್ಟಿಯನ್ನು ಬರೆಯಿರಿ.

| ಅ.ಕ್ರ. | ಸಮಯ | ಯಾವ ಕೆಲಸಕ್ಕಾಗಿ? |
|---|---|---|
| ೧. | ೫ ನಿಮಿಷಗಳು | ...................., ................., .......................... |
| ೨. | ೧೫ ನಿಮಿಷಗಳು | ..............., .............., ............ ಶಾಲೆಯಿಂದ ಮನೆಗೆ ಬರಲು |
| ೩. | ೩೦ ನಿಮಿಷಗಳು | ...................., ..................., .......................... |
| ೪. | ೬೦ ನಿಮಿಷಗಳು | ...................., ..................., .......................... |

(೪) ಗಂಟೆ ಮತ್ತು ನಿಮಿಷಗಳ ಮುಳ್ಳುಗಳ ಸ್ಥಿತಿಯನ್ನು ನೋಡಿ ಎಷ್ಟು ನಿಮಿಷಗಳ ಸಮಯ ಹಿಡಿಯಿತು ಎಂದು ಬರೆಯಿರಿ.

| ಆರಂಭದ ಸಮಯ | ನಂತರದ ಸಮಯ | ತಗಲುವ ಸಮಯ |
|---|---|---|
|  |  | .......೨೦....... ನಿಮಿಷಗಳು |
|  |  | ................ ನಿಮಿಷಗಳು |
|  |  | ................ ನಿಮಿಷಗಳು |
|  |  | ................ ನಿಮಿಷಗಳು |

## ದಿನದರ್ಶಿಕೆ

◉ ನಿಮ್ಮ ಹುಟ್ಟು ಹಬ್ಬ ಯಾವ ತಿಂಗಳಿನಲ್ಲಿ ಇದೆ, ಆ ತಿಂಗಳಿನ ಸದ್ಯ ನಡೆದಿರುವ ವರ್ಷದಲ್ಲಿಯ ದಿನದರ್ಶಿಕೆಯನ್ನು (ಕ್ಯಾಲೆಂಡರ್) ತಯಾರಿಸಿರಿ.

ತಿಂಗಳು........... ವರ್ಷ.......

| | | | | | |
|---|---|---|---|---|---|
| ರವಿ | | | | | |
| ಸೋಮ | | | | | |
| ಮಂಗಳ | | | | | |
| ಬುಧ | | | | | |
| ಗುರು | | | | | |
| ಶುಕ್ರ | | | | | |
| ಶನಿ | | | | | |

ದಿನದರ್ಶಿಕೆ (ಕ್ಯಾಲೆಂಡರ್) ನೋಡಿ ಕೆಳಗಿನ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.

(೧) ಈ ತಿಂಗಳಿನಲ್ಲಿ ಎಷ್ಟು ಶುಕ್ರವಾರಗಳು ಇವೆ?

................. .

(೨) ಮಂಗಳವಾರ ಯಾವ-ಯಾವ ದಿನಾಂಕಗಳಂದು ಬರುತ್ತದೆ?

................. .

(೩) ಈ ತಿಂಗಳಲ್ಲಿ ಯಾವ ಹಬ್ಬವಿದೆ ಎಂಬುದನ್ನು ಬರೆಯಿರಿ.

................. .

(೪) ಈ ತಿಂಗಳಿನ ೨೫ ದಿನಾಂಕದಂದು ಯಾವ ವಾರ ಬರುತ್ತದೆ?

................. .

(೫) ನಿಮ್ಮ ಹುಟ್ಟುಹಬ್ಬದಂದು ಯಾವ ವಾರವಿದೆ?

................. .

(೬) ೧೫ ದಿನಾಂಕದಂದು ಬರುವ ವಾರವು ಮತ್ತೆ ಯಾವ-ಯಾವ ದಿನಾಂಕಗಳಲ್ಲಿ ಬರುತ್ತದೆ? ................. .

## ವಯಸ್ಸಿನ ಮೋಜು

◉ ನಿಮ್ಮ ತಾಯಿ/ತಂದೆಯವರೊಂದಿಗೆ ಚರ್ಚಿಸಿ ಕೆಳಗಿನ ಚೌಕಟ್ಟಿನಲ್ಲಿ ಸರಿಯಾದ (ನಿಖರವಾದ) ವಯಸ್ಸು ಬರೆಯಿರಿ.



ನನ್ನ ತಾಯಿಯ ಇಂದಿನ ವಯಸ್ಸು ☐ ವರ್ಷಗಳು.



ನನ್ನ ತಂದೆಯ ಇಂದಿನ ವಯಸ್ಸು ☐ ವರ್ಷಗಳು.



ನನ್ನ ಅಜ್ಜಿಯ ಇಂದಿನ ವಯಸ್ಸು ☐ ವರ್ಷಗಳು ಇವೆ. ನನ್ನ ಜನ್ಮದ ಸಮಯದಲ್ಲಿ ಅಜ್ಜಿಯ ವಯಸ್ಸು ☐ ವರ್ಷಗಳಾಗಿತ್ತು.



ನನ್ನ ಅಜ್ಜನ ಇಂದಿನ ವಯಸ್ಸು ☐ ವರ್ಷಗಳು ಇವೆ. ನನ್ನ ಜನ್ಮದ ಸಮಯದಲ್ಲಿ ಅಜ್ಜನ ವಯಸ್ಸು ☐ ವರ್ಷಗಳಾಗಿತ್ತು.



**ಶಿಕ್ಷಕರಿಗಾಗಿ:** ವಿದ್ಯಾರ್ಥಿಗಳಿಗೆ ತಿಂಗಳದಲ್ಲಿಯ ದಿನಗಳು ಮತ್ತು ವಾರದಲ್ಲಿಯ ದಿನಗಳ ಬಗ್ಗೆ ಮಾಹಿತಿ ಕೊಟ್ಟು, ಅವರಿಗೆ ದಿನದರ್ಶಿಕೆ (ಕ್ಯಾಲೆಂಡರ್) ನೋಡಲು ಪ್ರೇರಣೆ ನೀಡಬೇಕು. ವಿದ್ಯಾರ್ಥಿಗಳಿಗೆ ಅವಶ್ಯಕತೆ ಇದ್ದಲ್ಲಿ ಸ್ನೇಹಿತರ, ಪೋಷಕರ ಸಹಾಯ ತೆಗೆದುಕೊಳ್ಳಲು ಸೂಚಿಸಬೇಕು. ಶಿಕ್ಷಕರು ವಿದ್ಯಾರ್ಥಿಗಳ ಕಡೆಯಿಂದ ಸದ್ಯ ನಡೆದಿರುವ ವರ್ಷದ ೧೨ ತಿಂಗಳ ದಿನದರ್ಶಿಕೆಯನ್ನು ತಯಾರಿಸಿಕೊಳ್ಳಬೇಕು. ವಿದ್ಯಾರ್ಥಿಗಳಿಂದ ರಾಷ್ಟ್ರೀಯ ಹಬ್ಬಗಳು, ಭಾರತೀಯ ಹಬ್ಬಗಳು ಇವುಗಳ ೧ ವರ್ಷದ ಕಾಲಾವಧಿಯ ಕೋಷ್ಟಕವನ್ನು ದಿನಾಂಕ, ವಾರಗಳ ಸಹಿತ ತಯಾರಿಸಿಕೊಳ್ಳಿರಿ.



೩ವರ್ಷಗಳ ಹಿಂದಿನ ನನ್ನ ವಯಸ್ಸು ☐ ವರ್ಷಗಳಿದ್ದವು



ನನ್ನ ಇಂದಿನ ವಯಸ್ಸು ☐ ವರ್ಷಗಳು



೭ ವರ್ಷಗಳ ನಂತರದ ನನ್ನ ವಯಸ್ಸು ☐ ವರ್ಷಗಳು ಇರುವವು.

◉ **ಕೆಳಗೆ ಕೊಟ್ಟಿರುವ ಚೌಕಟ್ಟಿನಲ್ಲಿ ದಿನಾಂಕಗಳನ್ನು ಬರೆದು ಕೋಷ್ಟಕವನ್ನು ಪೂರ್ಣ ಮಾಡಿರಿ.**

| ನನ್ನ ಜನ್ಮ ದಿನಾಂಕ | ಅಮ್ಮನ ಜನ್ಮ ದಿನಾಂಕ | ತಂದೆಯ ಜನ್ಮ ದಿನಾಂಕ | ನನ್ನ ಗೆಳೆಯನ/ಗೆಳತಿಯ ಜನ್ಮ ದಿನಾಂಕ |
|---|---|---|---|
| | | | |

## ಸ್ವಾಧ್ಯಾಯ

**(೧) ಒಂದು ಗ್ರೆಗಿರಿಯನ್ ವರ್ಷದಲ್ಲಿ ಎಷ್ಟು ತಿಂಗಳುಗಳಿರುತ್ತವೆ? ಅವುಗಳ ಹೆಸರನ್ನು ಕ್ರಮವಾಗಿ ಬರೆಯಿರಿ.**

------------------------------------------------------------

------------------------------------------------------------

**(೨) ಒಂದು ವರ್ಷದಲ್ಲಿ ೩೦ ದಿನಗಳಿರುವ ತಿಂಗಳುಗಳು ಎಷ್ಟು ಇವೆ? ಅವುಗಳ ಹೆಸರುಗಳನ್ನು ಬರೆಯಿರಿ.**

------------------------------------------------------------

------------------------------------------------------------

**(೩) ಒಂದು ವರ್ಷದಲ್ಲಿ ೩೧ ದಿನಗಳಿರುವ ತಿಂಗಳುಗಳು ಎಷ್ಟು ಇವೆ? ಅವುಗಳ ಹೆಸರುಗಳನ್ನು ಬರೆಯಿರಿ.**

------------------------------------------------------------

------------------------------------------------------------

**(೪) ಈ ಶೈಕ್ಷಣಿಕ ವರ್ಷದಲ್ಲಿ ಬರುವ ರಾಷ್ಟ್ರೀಯ ಹಬ್ಬಗಳು, ಭಾರತೀಯ ಹಬ್ಬಗಳ ಮುಂದಿನಂತೆ ಕೋಷ್ಟಕವನ್ನು ನಿಮ್ಮ ವಹಿಯಲ್ಲಿ ತಯಾರಿಸಿರಿ.**

| ಅ.ಕ್ರ. | ಹಬ್ಬಗಳು | ತಿಂಗಳು | ದಿನಾಂಕ | ವಾರ |
|---|---|---|---|---|
| | | | | |
| | | | | |

**ಶಿಕ್ಷಕರಿಗಾಗಿ:** ಇತರ ಸಂಬಂಧಗಳ ಬಗ್ಗೆ ಹಾಗೂ ಅವರ ಇಂದಿನ ಮತ್ತು ಹಿಂದಿನ ವಯಸ್ಸುಗಳ ಬಗ್ಗೆ ಚರ್ಚೆ ಮಾಡಿರಿ. ಇದಕ್ಕಾಗಿ ವಿದ್ಯಾರ್ಥಿಗಳು ಪೋಷಕರ ಸಹಾಯವನ್ನು ತೆಗೆದುಕೊಳ್ಳಿ.

**(೫) ವರ್ಷ ೨೦೨೪ ಮತ್ತು ೨೦೨೫ರ ಫೆಬ್ರುವರಿ ತಿಂಗಳಗಳಲ್ಲಿಯ ಒಟ್ಟು ದಿನಗಳ ನಿರೀಕ್ಷಣೆ ಮಾಡಿ ಕೆಳಗೆ ಬರೆಯಿರಿ.**

| ಫೆಬ್ರುವರಿ ೨೦೨೪ | | | | | | |
|---|---|---|---|---|---|---|
| ರವಿ | ಸೋಮ | ಮಂಗಳ | ಬುಧ | ಗುರು | ಶುಕ್ರ | ಶನಿ |
| | | | | ೧ | ೨ | ೩ |
| ೪ | ೫ | ೬ | ೭ | ೮ | ೯ | ೧೦ |
| ೧೧ | ೧೨ | ೧೩ | ೧೪ | ೧೫ | ೧೬ | ೧೭ |
| ೧೮ | ೧೯ | ೨೦ | ೨೧ | ೨೨ | ೨೩ | ೨೪ |
| ೨೫ | ೨೬ | ೨೭ | ೨೮ | ೨೯ | | |

ಫೆಬ್ರುವರಿ ೨೦೨೪ದಲ್ಲಿಯ ದಿನಗಳ ಸಂಖ್ಯೆ ☐

| ಫೆಬ್ರುವರಿ ೨೦೨೫ | | | | | | |
|---|---|---|---|---|---|---|
| ರವಿ | ಸೋಮ | ಮಂಗಳ | ಬುಧ | ಗುರು | ಶುಕ್ರ | ಶನಿ |
| | | | | | | ೧ |
| ೨ | ೩ | ೪ | ೫ | ೬ | ೭ | ೮ |
| ೯ | ೧೦ | ೧೧ | ೧೨ | ೧೩ | ೧೪ | ೧೫ |
| ೧೬ | ೧೭ | ೧೮ | ೧೯ | ೨೦ | ೨೧ | ೨೨ |
| ೨೩ | ೨೪ | ೨೫ | ೨೬ | ೨೭ | ೨೮ | |

ಫೆಬ್ರುವರಿ ೨೦೨೫ದಲ್ಲಿಯ ದಿನಗಳ ಸಂಖ್ಯೆ ☐

**(೬) ಕೆಳಗಿನ ಚೌಕಟ್ಟಿನಲ್ಲಿ ವಾರಗಳ ಹೆಸರುಗಳನ್ನು ಮತ್ತು ದಿನಾಂಕಗಳನ್ನು ಬರೆಯಿರಿ.**

| ಮೊನ್ನೆ ← | ನಿನ್ನೆ ← | ಇಂದು → | ನಾಳೆ → | ನಾಡಿದ್ದು |
|---|---|---|---|---|
| ......................<br>...................... | ......................<br>...................... | ......................<br>...................... | ......................<br>...................... | ......................<br>...................... |
| ....../....../.......... | ....../....../.......... | ....../....../.......... | ....../....../.......... | ....../....../.......... |



## ಉಪಕ್ರಮ.

- ದೈನಂದಿನ ಜೀವನದಲ್ಲಿ ನಾವು ಬಳಸುವ ಆಹಾರ ಪದಾರ್ಥಗಳು, ಪಾನೀಯಗಳು, ಔಷಧಿಗಳು ಇತ್ಯಾದಿಗಳ ಪ್ಯಾಕೆಟ್‌ಗಳ ಮೇಲಿನ ಮುದ್ರಿತ ಮಾಹಿತಿಯನ್ನು ಓದಿರಿ. ಆ ಮಾಹಿತಿಯ ಮೇಲಿಂದ ಕೆಳಗಿನ ಕೋಷ್ಟಕವನ್ನು ಪೂರ್ಣ ಮಾಡಿರಿ.

| ಅ.ಕ್ರ. | ವಸ್ತುವಿನ ಹೆಸರು | ತಯಾರಿಸಿದ ದಿನಾಂಕ | ಬಳಕೆಯ ಕೊನೆಯ ದಿನಾಂಕ | ಬೆಲೆ | ತೂಕ/ಧಾರಕತೆ |
|---|---|---|---|---|---|
| | | | | | |



**ಶಿಕ್ಷಕರಿಗಾಗಿ:** ದಿನದರ್ಶಿಕೆಯ ಮಾಧ್ಯಮದಿಂದ ವಿವಿಧ ಧರ್ಮಗಳ ಹಬ್ಬಗಳು, ಉತ್ಸವಗಳು, ಗ್ರಹಣಗಳು, ಸೂರ್ಯಾಸ್ತ, ಚಂದ್ರೋದಯ, ತಿಥಿ, ನಕ್ಷತ್ರಗಳು ಮುಂತಾದ ಮಾಹಿತಿಯನ್ನು ವಿದ್ಯಾರ್ಥಿಗಳಿಗೆ ಕೊಡಬೇಕು. ನಾವು ಯಾವುದೇ ವಸ್ತುವನ್ನು ಕೊಂಡುಕೊಳ್ಳುವಾಗ, ಆ ವಸ್ತುವಿನ ತಯಾರಿಕೆಯ ದಿನಾಂಕ ಮತ್ತು ಆ ವಸ್ತು ಯಾವ ದಿನಾಂಕದವರೆಗೆ ಬಳಸಬೇಕು ಎಂಬ ಮಾಹಿತಿಯನ್ನು ಅದರ ಮೇಲೆ ಬರೆಯಲಾಗಿರುತ್ತದೆ. ಈ ವಿಷಯದ ಬಗ್ಗೆ ಚರ್ಚೆಯನ್ನು ಮಾಡಿಸಬೇಕು.

# ೧೪. ಆಕೃತಿಬಂಧ

## ಕೃತಿ ಮಾಡಿರಿ.




(೧) ಪರೇಶನು ಮುಂದಿನ ಯಾವ-ಯಾವ ಸಂಖ್ಯೆಗಳ ಮೇಲೆ ಜಿಗಿಯುತ್ತಾನೆ, ಆ ಸಂಖ್ಯೆಗಳನ್ನು ಬರೆಯಿರಿ.

೦, ೩, ೬, ೯, ..................................................

(೨) ಅವನು ಪ್ರತಿಸಲ ಎಷ್ಟು ಹಂತದಲ್ಲಿ ಜಿಗಿದಿದ್ದಾನೆ? ..................................................

(೩) ೫ ಈ ಸಂಖ್ಯೆಯ ಸ್ಥಾನದಿಂದ ಮುಂದೆ ೩ರ ಹಂತವನ್ನು ತಯಾರಿಸಿರಿ.

| | | | | | | | | | |
|---|---|---|---|---|---|---|---|---|---|
| ೫ | ೮ | | | | | | | | |

(೪) ಪರೇಶ್‌ನು ಒಂದು ವೇಳೆ ಶೂನ್ಯದಿಂದ ೪ರ ಹಂತದಲ್ಲಿ ಜಿಗಿಯುತ್ತಿದ್ದರೆ, ಅವನ ಜಿಗಿತದ ಹಂತಗಳನ್ನು ಪೂರ್ಣ ಮಾಡಿರಿ.




(೫) ಕೊಟ್ಟಿರುವ ಸಂಖ್ಯೆಯಲ್ಲಿ ೫ ಕೂಡಿಸುತ್ತಾ ಪರೇಶ್‌ನು ಮುಂದೆ ಜಿಗಿಯುತ್ತಾನೆ, ಹಾಗಾದರೆ ಅವನ ಜಿಗಿತಗಳನ್ನು ಸಂಖ್ಯಾ ರೂಪದಲ್ಲಿ ಬರೆಯಿರಿ.

೫, ೧೦ ____ ____ ____ ____ ____ ____ ____ ____ ____ ____ ____ ____

(೬) ಅನಿಲ ಮತ್ತು ಕವಿತಾ ಸದ್ಯದಲ್ಲಿ ೩೧ನೆಯ ಸ್ಥಾನದಲ್ಲಿದ್ದಾರೆ. ಅನಿಲನು ೨ರ ಹಂತದಲ್ಲಿ ಮುಂದೆ ಜಿಗಿಯುತ್ತಾನೆ. ಹಾಗಾದರೆ ಕವಿತಾಳು ೨ರ ಹಂತದಲ್ಲಿ ಹಿಂದೆ ಜಿಗಿಯುತ್ತಾಳೆ. ಅವರು ಯಾವ-ಯಾವ ಸಂಖ್ಯೆಗಳ ಮೇಲೆ ಜಿಗಿಯುತ್ತಾರೆ ಎಂಬುದನ್ನು ಬರೆಯಿರಿ.

____ ____ ____ ____ ____ ____ ೩೧ ____ ____ ____ ____ ____ ____ ____

(೭) ಅಲಕಾಳು ಪ್ರತಿಯೊಂದು ಸಲ ೬ರ ಹಂತದಲ್ಲಿ ಮುಂದೆ ಜಿಗಿಯುತ್ತಿದ್ದಾಳೆ, ಹಾಗಾದರೆ ೧೮ ಈ ಸಂಖ್ಯೆಯ ನಂತರ ಅಲಕಾ ಯಾವ ಸಂಖ್ಯೆಯ ಮೇಲೆ ಜಿಗಿಯುತ್ತಾಳೆ? ☐




(೮) ಕೇತಕಿ ೬೦ ಈ ಸಂಖ್ಯೆಯಿಂದ ೬ರ ಹಂತದಲ್ಲಿ ಹಿಂದೆ ಜಿಗಿಯುತ್ತಿದ್ದಾಳೆ, ಕೆಳಗಿನ ಕೋಷ್ಟಕವನ್ನು ಪೂರ್ಣ ಮಾಡಿರಿ.

| | | | | | | | | | | |
|---|---|---|---|---|---|---|---|---|---|---|
| | | | | | | ೩೬ | ೪೨ | ೪೮ | ೫೪ | ೬೦ |

**ಶಿಕ್ಷಕರಿಗಾಗಿ:** ವಿವಿಧ ಉದಾಹರಣೆಗಳ ಸಹಾಯದಿಂದ ಸಂಖ್ಯೆಗಳ ಆಕೃತಿ-ಬಂಧವನ್ನು ಸ್ಪಷ್ಟ ಮಾಡಿರಿ. ಆಕೃತಿ ಬಂಧದಲ್ಲಿಯ ವಿವಿಧತೆಯನ್ನು ಉದಾಹರಣೆಗಳಿಂದ ವಿವರಿಸಿರಿ.

## ಅಂದಾಜು ಮಾಡಿರಿ.

(೧) ಕೆಳಗಿನ ಮಂಡನೆಯನ್ನು ನೋಡಿರಿ. ABC, ABB, AAB, ABಗಳಂತಹ ಆಕೃತಿ ಬಂಧಗಳನ್ನು ಗುರುತಿಸಿರಿ ಹಾಗೂ ಅವುಗಳ ಶೈಲಿ ABC ಈ ಅಕ್ಷರಗಳನ್ನು ಉಪಯೋಗಿಸಿ ಚೌಕಟ್ಟಿನಲ್ಲಿ ಬರೆಯಿರಿ.

- □△ □△ □△ □△ — AB
- 123 123 123 .................... ABC
- ○□□ ○□□ .................... [ ]
- △△□ △△□ △△□ .................... [ ]

(೨) ಭೌಮಿತಿಕ ಆಕೃತಿಗಳ (□△○) ಬಳಕೆ ಮಾಡಿ AABB, AA, AABC, ABCC, ABBC ಪ್ರಕಾರಗಳ ಆಕೃತಿ ಬಂಧಗಳನ್ನು ನಿಮ್ಮ ವಹಿಯಲ್ಲಿ ತಯಾರಿಸಿರಿ.

- 


- 


- ಕೆಳಗಿನ ಆಕೃತಿಬಂಧವನ್ನು ಪೂರ್ಣ ಮಾಡಿರಿ.



**ಶಿಕ್ಷಕರಿಗಾಗಿ:** ವಿದ್ಯಾರ್ಥಿಗಳಿಗೆ ಅವಶ್ಯಕತೆ ಅನುಗುಣವಾಗಿ ಗೆಳೆಯರು, ಪೋಷಕರ ಹಾಗೂ ಶಿಕ್ಷಕರ ಸಹಕಾರವನ್ನು ತೆಗೆದುಕೊಂಡು ಆಕೃತಿಬಂಧಗಳ ವಿವಿಧ ಉದಾಹರಣೆಗಳ ರೂಢಿ ತೆಗೆದುಕೊಳ್ಳಿರಿ.

- ಕೆಳಗಿನವುಗಳಲ್ಲಿ ಯಾವುದೇ ಮೂರು ಆಕಾರಗಳನ್ನು ತೆಗೆದುಕೊಂಡು ಆಕೃತಿಬಂಧವನ್ನು ತಯಾರಿಸಿರಿ.



..............................................................................................

..............................................................................................

..............................................................................................

- ಕೆಳಗಿನ ಟಾಯಿಲಿಂಗಗಳಲ್ಲಿ ನಿಮ್ಮ ಇಚ್ಛೆಯಂತೆ ಬಣ್ಣವನ್ನು ತುಂಬಿರಿ ಮತ್ತು ನಕ್ಷೆಗಳನ್ನು ತಯಾರಿಸಿರಿ.





## ಉಪಕ್ರಮ.

ಆಯತಾಕೃತಿಯ ಕಾಗದದ ಪಟ್ಟಿಗಳನ್ನು ತೆಗೆದುಕೊಳ್ಳಿರಿ. ಅವುಗಳನ್ನು ಮಡಿಕೆ ಮಾಡಿರಿ. ನಂತರ ಅವುಗಳ ಮೇಲೆ ನಕ್ಷೆಯನ್ನು ತೆಗೆಯಿರಿ. ಅವುಗಳಲ್ಲಿ ಕೆಲವು ಭಾಗ ಕತ್ತರಿಸಿರಿ. ಕತ್ತರಿಸಿದ ನಂತರ ಕಾಗದ ಪಟ್ಟಿಯನ್ನು ತೆರೆಯಿರಿ ತಯಾರಾದ ಆಕೃತಿಬಂಧದ ನಿರೀಕ್ಷಣೆ ಮಾಡಿರಿ. ತಯಾರಾದ ನಕ್ಷೆಗಳನ್ನು ತರಗತಿಯ ಅಲಂಕಾರಕ್ಕಾಗಿ ಉಪಯೋಗಿಸಿರಿ.

## ಸ್ವಾಧ್ಯಾಯ

**(೧) ಆಕೃತಿಬಂಧವನ್ನು ಗುರುತಿಸಿ ಮಂಡನೆಯನ್ನು ಪೂರ್ಣ ಮಾಡಿರಿ.**

-  ..............................................

-  ..............................................

-  ..............................................

-  ..............................................

-  ..............................................

-  ..............................................



**ಶಿಕ್ಷಕರಿಗಾಗಿ:** ವಿದ್ಯಾರ್ಥಿಗಳಿಗೆ ರೇಷೆಗಳಿಂದ ತಯಾರಿಸಿದ ನಕ್ಷೆಗಳ ನಿರೀಕ್ಷಣೆ ಮಾಡಲು ಹೇಳಿರಿ, ಅದರ ಮೇಲೆ ಚರ್ಚೆ ನಡೆಸಿರಿ. ವಿವಿಧ ರೇಷೆಗಳ ಸಹಾಯದಿಂದ ಆಕೃತಿಬಂಧ ಪೂರ್ಣ ಮಾಡುವ ರೂಢಿ ತೆಗೆದುಕೊಳ್ಳಿರಿ. ಕಾಗದಕ್ಕೆ ಮಡಿಕೆ ಮಾಡುವುದು ಕತ್ತರಿಸುವ ಮೂಲಕ ಆಕೃತಿಬಂಧಗಳನ್ನು ತಯಾರಿಸುವ ರೂಢಿ ತೆಗೆದುಕೊಳ್ಳಿರಿ. ಗಣಿತ ಪೆಟ್ಟಿಗೆಯಲ್ಲಿಯ ವಿವಿಧ ಭೌಮಿತಿಕ ಆಕಾರಗಳ ಉಪಯೋಗ ಮಾಡಿ ವಿದ್ಯಾರ್ಥಿಗಳಿಂದ ವಿವಿಧ ಆಕೃತಿಬಂಧಗಳನ್ನು ತಯಾರಿಸುವ ರೂಢಿ ತೆಗೆದುಕೊಳ್ಳಿರಿ.

(೨) ಕೊಟ್ಟಿರುವ ಆಕಾರ ಮತ್ತು ಅದರಿಂದ ತಯಾರಾಗುವ ಆಕೃತಿಬಂಧ ಇವುಗಳ ಯೋಗ್ಯ ಜೋಡಿಯನ್ನು ಹೊಂದಿಸಿರಿ.

ಕೊಟ್ಟಿರುವ ಆಕಾರ | ತಯಾರಾಗುವ ಆಕೃತಿಬಂಧ



(೩) ಮುಂದಿನ ಸಂಖ್ಯೆಗಳ ಆಕೃತಿಬಂಧಗಳ ನಿರೀಕ್ಷಣೆ ಮಾಡಿ ಮುಂದಿನ ಮಂಡನೆಯನ್ನು ಪೂರ್ಣ ಮಾಡಿರಿ.

- ೨, ೫ , ೧೦, ೧೦, ೫, ೨, ೨, ೫ , ೧೦, ☐, ☐, ☐
- ೬, ೮ , ೧೦, ೧೨, ೧೪, ☐, ☐, ☐
- ೨೧, ೨೪, ೨೭, ೩೦, ೩೩, ☐, ☐, ☐
- ೧ × ೧ = ೧, ೨ × ೨ = ೪, ೩ × ೩ = ೯, ೪ × ೪ = ೧೬, ☐, ☐, ☐

(೪) ಮುಂದಿನ ಆಕಾರಗಳ ಆಕೃತಿಬಂಧವನ್ನು ಪೂರ್ತಿ ಮಾಡಿರಿ.









ಶಿಕ್ಷಕರಿಗಾಗಿ: ವಿದ್ಯಾರ್ಥಿಗಳಿಗೆ ಟೈಲಿಂಗ್‌ಗಳ ಉಪಯೋಗ ಮನೆಯಲ್ಲಿಯ, ಶಾಲೆಯಲ್ಲಿ ಪರಿಸರದಲ್ಲಿ ಹಾಕಿದ ಫರಶಿಗಳಲ್ಲಿ ನೋಡಲು ಪ್ರೋತ್ಸಾಹಿಸಬೇಕು. ದೈನಂದಿನ ಜೀವನದಲ್ಲಿಯ ಇಂತಹ ಅನೇಕ ಪ್ರಕಾರದ ಆಕೃತಿಬಂಧಗಳ, ಟೈಲಿಂಗ್‌ಗಳ ಉದಾಹರಣೆಗಳ ಬಗ್ಗೆ ಚರ್ಚೆ ಮಾಡಿರಿ.

## ಮಾಡಿ ನೋಡಿರಿ.

(೧) ೫ರ ಮಗ್ಗಿಯನ್ನು ಬರೆಯಿರಿ.

೫ರ ಮಗ್ಗಿ : ......., ......., ......., ......., ......., ......., ......., ......., ......., .......

೫ರ ಮಗ್ಗಿಯಲ್ಲಿಯ ಏಕಕ ಸ್ಥಾನದಲ್ಲಿಯ ಅಂಕಿಗಳ ಆಕೃತಿಬಂಧವನ್ನು ಗುರುತಿಸಿ ಮಂಡನೆಯನ್ನು ಪೂರ್ತಿ ಮಾಡಿರಿ.

...೫...,...೦...,......,......,......,......,......,......,......,.....

(೨) ಬದಿಯಲ್ಲಿರುವ ಸಂಖ್ಯೆಗಳ ಗುಂಪಿನ ಅಡ್ಡ, ಉದ್ದ, ಓರೆಯ ಬೇರೀಜು ಮಾಡಿ ಉತ್ತರ ೩೩ ಬರುವ ಆಕೃತಿಬಂಧವು ತಯಾರಾಗಿದೆ. (೫, ೧೧, ೧೭) (೪, ೧೧, ೧೮) (೧೦, ೧೧, ೧೨) ಇವುಗಳಂತೆ ಸಮಾನ ಬೇರೀಜು ಬರುವ ಮೂರು ಸಂಖ್ಯೆಗಳ ಸಮೂಹಗಳ ಆಕೃತಿಬಂಧವನ್ನು ತಯಾರಿಸಿರಿ.

| ರವಿ | | ೬ | ೧೩ | ೨೦ | ೨೭ |
|---|---|---|---|---|---|
| ಸೋಮ | | ೭ | ೧೪ | ೨೧ | ೨೮ |
| ಮಂಗಳ | ೧ | ೮ | ೧೫ | ೨೨ | ೨೯ |
| ಬುಧ | ೨ | ೯ | ೧೬ | ೨೩ | ೩೦ |
| ಗುರು | ೩ | ೧೦ | ೧೭ | ೨೪ | ೩೧ |
| ಶುಕ್ರ | ೪ | ೧೧ | ೧೮ | ೨೫ | |
| ಶನಿ | ೫ | ೧೨ | ೧೯ | ೨೬ | |

(೩) ಕೆಳಗಿನ ಚುಕ್ಕೆಗಳನ್ನು ಉಪಯೋಗಿಸಿ ಆಕೃತಿಬಂಧದ ಮಂಡನೆಯನ್ನು ಪೂರ್ತಿ ಮಾಡಿರಿ.



**ಶಿಕ್ಷಕರಿಗಾಗಿ:** ವಿದ್ಯಾರ್ಥಿಗಳ ಗುಂಪುಗಳನ್ನು ತಯಾರಿಸಿ, ಅವರಿಂದ ಸಂಖ್ಯೆಗಳ ಹಂತಗಳ ಮತ್ತು ಮಗ್ಗಿಗಳ ಲೇಖನ ಮಾಡಿಸಿಕೊಳ್ಳಿ ಹಾಗೂ ಅವುಗಳಲ್ಲಿಯ ಆಕೃತಿಬಂಧಗಳನ್ನು ಹುಡುಕಿ ವರ್ಣನೆ ಮಾಡಲು ಹೇಳಬೇಕು. ಬಿಂದುಗಳು ಮತ್ತು ದಿನದರ್ಶಿಕೆಯ ಬಳಕೆ ಮಾಡಿ ಗೆಳೆಯರ, ಪೋಷಕ ಸಹಾಯದಿಂದ ಆಕೃತಿಬಂಧವನ್ನು ಮಾಡಿಸಿಕೊಳ್ಳಿರಿ ಮತ್ತು ಅದೇ ಪ್ರಕಾರವಾಗಿ ವಿವಿಧ ಆಕೃತಿಬಂಧಗಳನ್ನು ತಯಾರಿಸಲು ಹೇಳಿರಿ.

(೪) ಮುಂದಿನ ನಕ್ಷೆಯನ್ನು ಪೂರ್ತಿ ಮಾಡಿರಿ. ಅದರಲ್ಲಿ ನಿಮ್ಮ ಇಚ್ಛೆಯಂತೆ ಬಣ್ಣ ತುಂಬಿರಿ.





(೫) ಕೊಟ್ಟಿರುವ ಬಣ್ಣವನ್ನು ಉಪಯೋಗಿಸಿ ಬೇರೆ-ಬೇರೆ ಆಕೃತಿಬಂಧಗಳನ್ನು ತಯಾರಿಸಿರಿ.

**ಸುಯಶ**

ಕೆಂಪು ಹಸಿರು



**ಮಯೂರಿ**

ನೀಲಿ ಹಳದಿ



## ನಿರೀಕ್ಷಣೆ ಮಾಡಿರಿ.

- ರಮೇಶನು ಆಟವಾಡಿ ಬಂದ ಮೇಲೆ ಅವನಿಗೆ ತುಂಬಾ ಹಸಿವೆಯಾಗಿತ್ತು. ಬುಟ್ಟಿಯಲ್ಲಿ ಪೇರಲ, ಸೇಬು ಮತ್ತು ಚಿಕ್ಕೂ ಈ ಮೂರು ಹಣ್ಣುಗಳಿದ್ದವು. ಅಮ್ಮನು ರಮೇಶನಿಗೆ ಯಾವುದಾದರೂ ಎರಡು ಹಣ್ಣುಗಳನ್ನು ತೆಗೆದುಕೊಳ್ಳಲು ಹೇಳಿದರೆ, ರಮೇಶನು ಯಾವ-ಯಾವ ಹಣ್ಣುಗಳ ಜೋಡಿಗಳನ್ನು ಆಯ್ಕೆ ಮಾಡಬಹುದು, ಆ ಜೋಡಿಗಳನ್ನು ಬರೆಯಿರಿ.

| | |
|---|---|
| ಸೇಬು | ಪೇರಲ |
| ಸೇಬು | ಚಿಕ್ಕೂ |
| ಪೇರಲ | ಚಿಕ್ಕೂ |



## ಸಂಯೋಜನೆ

## ತಿಳಿದುಕೊಳ್ಳಿರಿ.

- ಆಕೃತಿಬಂಧಗಳಲ್ಲಿ ವಿವಿಧ ರಚನೆಗಳನ್ನು ಹೇಗೆ ಮಾಡಬೇಕೆಂದು ನಾವು ನೋಡಿದ್ದೇವೆ. ಈಗ ರಚನೆಗಳ ಆಯ್ಕೆ ಮಾಡಿ, ಕ್ರಮವನ್ನು ನಿರ್ಧರಿಸಿ ಅಥವಾ ಕೊಟ್ಟ ಷರತ್ತುಗಳಿಗನುಸರಿಸಿ ರಚನೆಗಳನ್ನು ಹೇಗೆ ಮಾಡಬೇಕೆಂದು ನೋಡೋಣ.




ಮೂರು ಆಟಗಳಲ್ಲಿ ಎರಡು ಆಟಗಳ ಆಯ್ಕೆ.



**ಶಿಕ್ಷಕರಿಗಾಗಿ:** ಮೇಲಿನ ಎಲ್ಲಾ ಕೃತಿಗಳ ಮಾಧ್ಯಮದಿಂದ ವಿದ್ಯಾರ್ಥಿಗಳಿಗೆ ತಿಳಿಸುವುದೆನೆಂದರೆ ಇಲ್ಲಿ ಆಯ್ಕೆ ಮುಖ್ಯವಾಗಿದೆ, ಕ್ರಮ ಅಲ್ಲ. ಇದಕ್ಕೆ "ಸಂಯೋಜನೆ" (Combination) ಎನ್ನುತ್ತಾರೆ.

ಕೊಟ್ಟಿರುವ ಮೂರು ಆಟಗಳಲ್ಲಿ ಯಾವ-ಯಾವ ಎರಡು ಆಟಗಳನ್ನು ವಿದ್ಯಾರ್ಥಿಗಳು ಆಯ್ಕೆ ಮಾಡಬಹುದು. ಆ ಆಟಗಳ ಜೋಡಿಗಳು ಮುಂದಿನಂತಿವೆ.

| ......................<br>...................... | ......................<br>...................... | ......................<br>...................... |
|---|---|---|

ಮೇಲಿನ ಕ್ರೀಡಾಸ್ಪರ್ಧೆಯಲ್ಲಿ ಒಂದು ವೇಳೆ ಕಬಡ್ಡಿ ಈ ಆಟವನ್ನು ಕೊಟ್ಟಿದ್ದರೆ ಈ ೪ ಆಟಗಳಲ್ಲಿ ೨ ಆಟಗಳನ್ನು ಎಷ್ಟು ಪ್ರಕಾರಗಳಲ್ಲಿ ಆಯ್ಕೆ ಮಾಡಬಹುದು? ಅವುಗಳ ಜೋಡಿಗಳನ್ನು ನಿಮ್ಮ ವಹಿಯಲ್ಲಿ ಬರೆಯಿರಿ.

## ಸ್ವಾಧ್ಯಾಯ

(೧) ಮುಂದೆ ನಾಲ್ಕು ಬಣ್ಣಗಳ ವಿದ್ಯುತ್ ದೀಪಗಳನ್ನು ಕೊಡಲಾಗಿದೆ. ಅವುಗಳಲ್ಲಿಯ ಯಾವುದೇ ಎರಡು ಬಣ್ಣಗಳ ವಿದ್ಯುತ್ ದೀಪಗಳನ್ನು ನಿಮ್ಮ ಕೋಣೆಯಲ್ಲಿ ಹಚ್ಚುವುದಿದ್ದರೆ, ನೀವು ಎಷ್ಟು ಪ್ರಕಾರದ ವಿದ್ಯುತ್ ದೀಪಗಳ ಆಯ್ಕೆ ಮಾಡುವಿರಿ. ಆ ಎಲ್ಲಾ ಜೋಡಿಗಳನ್ನು ಬರೆಯಿರಿ.




......................, ......................

......................, ......................

......................, ......................

(೨) ಬದಿಗೆ ಕೊಟ್ಟಿರುವ ಐದು ಹೂವುಗಳಲ್ಲಿ ಯಾವುದೇ ಎರಡು ಹೂವುಗಳನ್ನು ಆರಿಸಿ ಹೂದಾನಿಯನ್ನು ತಯಾರಿಸಿರಿ. ಇಂತಹ ಒಟ್ಟು ಎಷ್ಟು ಪ್ರಕಾರಗಳ ಹೂದಾನಿಗಳು ತಯಾರಾಗಬಹುದು ಎಂಬುದನ್ನು ನಿಮ್ಮ ವಹಿಯಲ್ಲಿ ಮಾಡಿ ತೋರಿಸಿರಿ.




## ಕ್ರಮ ವಿನ್ಯಾಸ

### ತಿಳಿದುಕೊಳ್ಳಿರಿ.

- ನಾವು ಕೊಟ್ಟಿರುವ ವಸ್ತುಗಳ ವಿವಿಧ ಪ್ರಕಾರದಲ್ಲಿ ಆಯ್ಕೆ ಮಾಡಿ ಜೋಡಿಗಳನ್ನು ಹೇಗೆ ಮಾಡಲಾಗುತ್ತದೆ ಎಂಬುದನ್ನು ನೋಡಿದ್ದೇವೆ. ಈಗ ನಾವು ಅದೇ ವಸ್ತುಗಳ ಮಂಡನೆಯನ್ನು ವಿಶಿಷ್ಟ ಕ್ರಮದಿಂದ ಮತ್ತು ಕೊಟ್ಟಿರುವ ಷರತ್ತುಗಳನುಸಾರ ಹೇಗೆ ಮಾಡಲು ಬರುತ್ತದೆ ಎಂಬುದನ್ನು ನೋಡೋಣ.



### ಚರ್ಚೆ ಮಾಡಿರಿ.

೧) ಮೇಲಿನ ಪ್ರತಿಯೊಂದು ತೋರಣವನ್ನು ತಯಾರಿಸಲು ಎಷ್ಟು ಪ್ರಕಾರದ ಆಕಾರಗಳನ್ನು ಉಪಯೋಗಿಸಿದ್ದಾರೆ? ☐

೨) ಬೇರೆ ಮೂರು ಆಕಾರಗಳನ್ನು ಉಪಯೋಗಿಸಿಕೊಂಡು ಇದಕ್ಕಿಂತ ವಿಭಿನ್ನವಾದ ರಚನೆಯನ್ನು ತಯಾರಿಸಲು ಬರುವುದೇ? ಯೋಚಿಸಿರಿ ಮತ್ತು ಸ್ನೇಹಿತರೊಂದಿಗೆ ಚರ್ಚಿಸಿರಿ.

**ಶಿಕ್ಷಕರಿಗಾಗಿ:** ಮೇಲಿನ ಎಲ್ಲಾ ಕೃತಿಗಳ ಮಾಧ್ಯಮದಿಂದ ವಿದ್ಯಾರ್ಥಿಗಳಿಗೆ ತಿಳಿಸುವುದೆನೆಂದರೆ, ಇಲ್ಲಿ ಕ್ರಮ ಮುಖ್ಯವಾಗಿದೆ. ವಸ್ತುಗಳ ಮಂಡನೆ (ಜೋಡಣೆ) ಮಾಡುವಾಗ ಕ್ರಮ ಬದಲಾವಣೆ ಯಾದರೆ ಬೇರೆ ರಚನೆ/ಮಂಡನೆ ತಯಾರಾಗುತ್ತದೆ. ಇದಕ್ಕೆ ಕ್ರಮ ವಿನ್ಯಾಸ (Permutation) ಎನ್ನುತ್ತಾರೆ.

## ಸ್ವಾಧ್ಯಾಯ

(೧) ಕೆಳಗಿನ ಚೆಂಡುಗಳನ್ನು ಕಪಾಟನಲ್ಲಿ ಸಾಲಾಗಿ ವಿವಿಧ ಕ್ರಮದಿಂದ (ಒಂದೇ ಸಾಲಿನಲ್ಲಿ) ಜೋಡಿಸಿ ತೋರಿಸಿರಿ. ಚೆಂಡುಗಳಿಗಾಗಿ ಕೊಟ್ಟಿರುವ ಅಕ್ಷರಗಳನ್ನು ಉಪಯೋಗಿಸಿರಿ.




(೨) ಮೀನಾಳು ಜಾತ್ರೆಯಿಂದ ಕೆಂಪು, ಹಳದಿ ಮತ್ತು ಹಸಿರು ಹೀಗೆ ಮೂರು ಬಣ್ಣದ ಬಲೂನ್‌ಗಳನ್ನು ಖರೀದಿಸಿದಳು. ಈ ಬಲೂನ್‌ಗಳನ್ನು ಒಂದು ಸಾಲಿನಲ್ಲಿ ಅವಳಿಗೆ ಎಷ್ಟು ಪ್ರಕಾರದಲ್ಲಿ ಇಡಲು ಬರಬಹುದು? (ಕೆಂಪು ಬಲೂನ್‌ಗೆ R, ಹಳದಿ ಬಲೂನ್‌ಗೆ Y ಮತ್ತು ಹಸಿರು ಬಲೂನ್‌ಗೆ G ಈ ಅಕ್ಷರಗಳ ಉಪಯೋಗ ಮಾಡಿ ಮಂಡನೆಯನ್ನು ಮಾಡಿರಿ.)

..........................................................................................

..........................................................................................

..........................................................................................

(೩) ಜಾದುಗಾರನಿಗೆ ಅವನ ಪೆಟ್ಟಿಗೆಯಲ್ಲಿಯ ವಸ್ತುಗಳನ್ನು ಸುರಕ್ಷಿತವಾಗಿಡಲು ಪೆಟ್ಟಿಗೆಯ ಮೇಲಿರುವ ಮೂರು ಅಂಕಿಗಳನ್ನು ಒಂದೊಂದೆ ಸಲ ಉಪಯೋಗಿಸಿ ಪೆಟ್ಟಿಗೆಗೆ ಬೀಗವೆಂದು ಪಾಸ್‌ವರ್ಡ್ ತಯಾರಿಸಬೇಕಾಗಿದೆ. ಹಾಗಾದರೆ ಅವನು ಎಷ್ಟು ಪ್ರಕಾರದ ಪಾಸ್‌ವರ್ಡ್‌ಗಳನ್ನು ತಯಾರಿಸಬಹುದು ಎಂಬುದನ್ನು ಬರೆಯಿರಿ.






ಪ್ರಿಯ ವಿದ್ಯಾರ್ಥಿ ಗೆಳೆಯರೆ ಮತ್ತು ಗೆಳತಿಯರೆ,

ಒಂದು ವೇಳೆ ನಿಮ್ಮನ್ನು ಯಾರಾದರೂ ಅಯೋಗ್ಯ ರೀತಿಯಿಂದ ಸ್ಪರ್ಶ ಮಾಡಿದುದರಿಂದ ನೀವು ಅಸ್ವಸ್ಥರಾಗಿದ್ದರೆ, ಆಗ ನೀವು ಸುಮ್ಮನೆ ಕುಳಿತುಕೊಳ್ಳಬೇಡಿರಿ. ಇಂಥ ಘಟನೆಗಳು ನಡೆದರೆ, ನೀವು ಕೆಳಗಿನ ಅಂಶಗಳನ್ನು ಗಮನದಲ್ಲಿಟ್ಟುಕೊಂಡು ಅದರಂತೆ ಮಾಡುವುದು ಅವಶ್ಯಕವಾಗಿದೆ.

1. ಸ್ವತಃ ದೂಷಿಸಿಕೊಳ್ಳಬೇಡಿರಿ.
2. ನಿಮಗೆ ಯಾರ ಮೇಲೆ ವಿಶ್ವಾಸವಿದೆಯೋ, ಅವರಿಗೆ ನಡೆದ ಘಟನೆಯ ಬಗ್ಗೆ ಹೇಳಿರಿ.
3. ನೀವು POCSO e-box ಮೂಲಕ ನಿಮ್ಮ ಹಕ್ಕುಗಳ ಸಂರಕ್ಷಣೆಗಾಗಿ ಸ್ಥಾಪಿಸಲಾದ ರಾಷ್ಟ್ರೀಯ ಆಯೋಗಕ್ಕೆ (NCPCR) ಸಹ ತಿಳಿಸಬಹುದು.

ಯಾವಾಗ ನಿಮಗೆ ಯಾರಾದರೂ ಅಯೋಗ್ಯ ರೀತಿಯಿಂದ ಸ್ಪರ್ಶ ಮಾಡುವರೋ, ಆಗ ನಿಮಗೆ ವಿಚಿತ್ರವೆನಿಸಬಹುದು, ನೀವು ಗೊಂದಲದಲ್ಲಿ ಹೋಗಬಹುದು, ನಿಮಗೆ ಅಸಹಾಯಕವೆನಿಸಬಹುದು; ಆದರೆ ನಿಮಗೆ 'ವಿಚಿತ್ರವೆನಿಸುವ' ಯಾವುದೇ ಕಾರಣವಿಲ್ಲ, ಏಕೆಂದರೆ ಅದರಲ್ಲಿ ನಿಮ್ಮದೇನು ದೋಷ ಇರುವುದಿಲ್ಲ.




ಈ ಬಟನ್‌ನ್ನು ಒತ್ತಿರಿ.

**POCSO ಇದು e-box ncpcr@gov.in ಈ ವೆಬ್‌ಸೈಟ್‌ನಲ್ಲಿ ಉಪಲಬ್ಧವಿದೆ.**

ಒಂದು ವೇಳೆ ನಿಮ್ಮ ವಯಸ್ಸು ೧೮ ವರ್ಷಕ್ಕಿಂತ ಕಡಿಮೆ ಇದ್ದರೆ. ನಿಮಗೆ ಯಾರಾದರೂ ತೊಂದರೆ ಕೊಟ್ಟಿದ್ದರೆ ಮತ್ತು ನೀವು ಗೊಂದಲದಲ್ಲಿ ಸಿಲುಕಿದ್ದರೆ, ಪೀಡಿತರಾಗಿದ್ದರೆ, ಉದ್ವೇಗದಲ್ಲಿ ಇದ್ದರೆ ಅಥವಾ ಇಂಥ ರೀತಿಯ ತೊಂದರೆ ಸಹನ ಮಾಡಿಕೊಳ್ಳುವ ಯಾವುದೇ ಮಕ್ಕಳು ನಿಮ್ಮ ಮಾಹಿತಿಯಲ್ಲಿ ಇದ್ದರೆ, ಹಾಗಾದರೆ ೧೦೯೮ (ಒಂದು ಶೂನ್ಯ ಒಂಬತ್ತು ಎಂಟು) ಕ್ಕೆ ಸಂಪರ್ಕಿಸಿರಿ. ಅದರಿಂದ ನಮ್ಮ ಹಾಗೂ ಗೆಳೆಯರ ಜೀವನವೇ ಬದಲಾಗಬಹುದು.




ಚೈಲ್ಡ್‌ಲೈನ್ ೧೦೯೮ (ಒಂದು ಶೂನ್ಯ ಒಂಬತ್ತು ಎಂಟು) ಇದು ಒಂದು ೨೪ ಗಂಟೆ ಟೋಲ್ ಫ್ರೀ ರಾಷ್ಟ್ರೀಯ ಆಪತ್ಕಾಲದ ಫೋನ್ ಸೇವೆಯಾಗಿದೆ. ಮಹಿಳೆ ಮತ್ತು ಮಕ್ಕಳ ಕಲ್ಯಾಣ ಇಲಾಖೆಯಿಂದ ಆಪತ್ಕಾಲ ಸಚಿವಾಲಯದ ಮುಖಾಂತರ, ಪೀಡಿತ ಮಕ್ಕಳ ಸಲುಗಾಗಿ ಜಾರಿಗೆ ತರಲಾಗುವ, ಚೈಲ್ಡ್‌ಲೈನ್ ಫೌಂಡೇಶನ್ ಇದು ಆರಂಭಿಸಿರುವ ಒಂದು ಉಪಕ್ರಮವಾಗಿದೆ.

नए समाज की ओर
Towards a new dawn



ಮಹಾರಾಷ್ಟ್ರ ರಾಜ್ಯ ಪಾಠ್ಯಪುಸ್ತಕ ನಿರ್ಮಿತಿ ಮತ್ತು ಅಭ್ಯಾಸಕ್ರಮ ಸಂಶೋಧನ ಮಂಡಳ, ಪುಣೆ.

गणित इयत्ता तिसरी (कन्नड माध्यम)

₹ 88.00